ರಂಜನೆ ಬೋಧನೆ ಪ್ರಬೋಧನೆ


ಲಂಕೇಶ್

ಅಕ್ಟೋಬರ್ 27, 2010 ರೂ. 12/-



ಮುಗ್ಗರಿಸಿದ ಕ್ರೀಡಾಕೂಟ

ಮೆಂಟಲ್ ವರ್ತೂರು-ಹಲಾಲುಟೋಪಿ ರೇಣುಕಾ!




ಕೈ ಬದಲಾದ 300 ಕೋಟಿ

ಚಿದಂಬರಂ ರಹಸ್ಯ

ತೊಲಗುವುದೇ ಶನಿ?

ಹಾಸನ-ಕೋಲಾರ ಪೋಲೀಸ್ ಲಫಡಾಗಳು




ಜಾಕಿ ಜಾಕ್‌ಪಾಟ್!

ಶಿಕಾರಿಪುರ: ಯಡ್ಡಿ ಭೂದಾಹಕ್ಕೆ ಕುಟುಂಬ ಬಲಿ

ಸತ್ತ ಪ್ರಜಾಸತ್ತೆಯನ್ನು ಸಂಖ್ಯೆಗಳು ಉಳಿಸಬಲ್ಲವೇ?

ಕರ್ನಾಟಕದ ರಾಜಕಾರಣದ ನೈತಿಕ ಅವನತಿ ಪ್ರಪಾತಕ್ಕೆ ಮುಟ್ಟುತ್ತಿರುವುದನ್ನು ಕಂಡು ಕರ್ನಾಟಕದ ಜನತೆ ದಿಗ್ಭ್ರಾಂತರಾಗಿದ್ದಾರೆ. ಸರ್ಕಾರವನ್ನು ಉಳಿಸಿಕೊಳ್ಳಲು ಬಿಜೆಪಿ ನಡೆಸುತ್ತಿರುವ ಕಸರತ್ತುಗಳನ್ನು ನೋಡಿದರೆ ಭ್ರಷ್ಟತೆ, ದುಷ್ಟತೆ, ಅಧಿಕಾರ ದುರುಪಯೋಗ ಇವೆಲ್ಲದರಲ್ಲೂ ಅದು ಎಲ್ಲಾ ಪಕ್ಷಗಳನ್ನು ಸೋಲಿಸಿದೆ ಎಂದು ಘಂಟಾಘೋಷವಾಗಿ ಹೇಳಬಹುದು. ಮೌಲ್ಯ, ನೀತಿ, **"Party with a difference"** ಎಂದೆಲ್ಲಾ ಬೊಗಳೆ ಬಿಡುತ್ತಾ ಈ ನಾಡಿನ ಮಧ್ಯಮ ವರ್ಗದ ಜನರನ್ನು ಮೋಸಗೊಳಿಸಿದ್ದ ಬಿಜೆಪಿ, ಈಗ ಕಾಂಗ್ರೆಸ್ಸೇ ವಾಸಿ ಅನಿಸುವಷ್ಟರಮಟ್ಟಿಗೆ ತನ್ನ ಮತದಾರ ವರ್ಗದಲ್ಲೇ ತೀವ್ರ ಬೇಸರವನ್ನು ಹುಟ್ಟುಹಾಕಿದೆ. ಈ ಹಿಂದೆ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಕಾಂಗ್ರೆಸ್ಸು ತನ್ನ ಅಧಿಕಾರವನ್ನು ಉಳಿಸಿಕೊಳ್ಳಲು ಯಾವ ರೀತಿ ಸಂಸದೀಯ ಪ್ರಜಾತಂತ್ರದ ಎಲ್ಲಾ ಸ್ಥಾಪಿತ ರೀತಿರಿವಾಜುಗಳನ್ನು ಗಾಳಿಗೆ ತೂರಿತ್ತೋ, ಸಾಂವಿಧಾನಿಕ ಹುದ್ದೆಗಳನ್ನು ಭ್ರಷ್ಟಗೊಳಿಸಿತ್ತೋ, ಅಧಿಕಾರ ದುರುಪಯೋಗಪಡಿಸಿಕೊಂಡಿತ್ತೋ, ಯಥಾವತ್ ಅದೇರೀತಿಯಲ್ಲಿ ಕರ್ನಾಟಕದ ಆಡಳಿತಾರೂಢ ಬಿಜೆಪಿ ಪಕ್ಷ ಮೊನ್ನೆ ವಿಶ್ವಾಸಮತ ಸಾಬೀತುಮಾಡುವ ವೇಳೆಯಲ್ಲಿ ಎಲ್ಲಾ ಸಂಸದೀಯ ರೀತಿರಿವಾಜುಗಳನ್ನು ಗಾಳಿಗೆ ತೂರಿದೆ. ಸಂಸದೀಯ ಪ್ರಜಾತಂತ್ರದಲ್ಲಿ "ಗೌರವಯುತ", "ಪವಿತ್ರ" ಎಂದೆಲ್ಲಾ ಭಾವಿಸುವ ಎಲ್ಲಾ ಸಾಂವಿಧಾನಿಕ ಹುದ್ದೆಗಳನ್ನು ದುರ್ಬಳಕೆ ಮಾಡಿಕೊಂಡಿದೆ. ಈ ಎಲ್ಲವೂ ದೃಶ್ಯ ಮಾಧ್ಯಮಗಳಲ್ಲಿ ವಿವರವಾಗಿ ಬಿತ್ತರಗೊಂಡಿವೆ. ಕೊನೆಗೆ ಆ ಕಾರಣಕ್ಕಾಗಿಯೇ ಮಾಧ್ಯಮಗಳನ್ನೂ ಸಹ ಸದನದಿಂದ ಹೊರಹಾಕಲಾಯಿತು. ಹಿಂದೆಂದೂ ಇಲ್ಲದಂತೆ ಆಡಳಿತ ಪಕ್ಷದ ಪರವಾಗಿ ಗೂಂಡಾಗಿರಿ ನಡೆಸಲು ಪೊಲೀಸರನ್ನೇ ಸದನದೊಳಗೆ ಕರೆಸಲಾಗಿತ್ತು.





ವಿಷಯ ಏನಪ್ಪಾ ಅಂತಂದ್ರೆ ಈವರೆಗೆ ಕಾಂಗ್ರೆಸ್‌ನಂತಹ ಕಾಂಗ್ರೆಸ್ ಸಹ ಇಂಥಾ ಅತಿರೇಕಗಳಿಗೆ ಹೋಗಿರಲಿಲ್ಲ!

ಹೀಗೆ ಬಿಜೆಪಿಯ ನಿಜಬಣ್ಣ ಈಗ ಸ್ಪಷ್ಟವಾಗಿ ಬಯಲುಗೊಂಡಿದೆ. ಈವರೆಗೆ ಅದು ತನ್ನ ನಿಜವಾದ ಕೋಮುವಾದಿ ಅಜೆಂಡಾಗಳನ್ನು ಮುಚ್ಚಿಟ್ಟುಕೊಳ್ಳಲು ತುರ್ತುಪರಿಸ್ಥಿತಿ ಜಾರಿಗೆ ತಂದಿದ್ದ ಕಾಂಗ್ರೆಸ್ ಮಾತ್ರ ಸರ್ವಾಧಿಕಾರಿ ಎಂದೂ, ತಾನೇ ನಿಜವಾದ ಪ್ರಜಾತಂತ್ರವಾದಿಯೆಂದೂ ಕೊಚ್ಚಿಕೊಳ್ಳುತ್ತಾ ತುರ್ತುಸ್ಥಿತಿಯನ್ನು ವಿರೋಧಿಸುವ ಕಾಲದ ಅಗತ್ಯಗಳಿಂದಾಗಿ ರೂಪುಗೊಂಡಿದ್ದ ಕಾಂಗ್ರೆಸ್ ಸರ್ವಾಧಿಕಾರಿ ವಿರೋಧಿ ಮೈತ್ರಿಯನ್ನು ನೆನಪಿಸುತ್ತಿತ್ತು.

ಆ ಕಾಲಘಟದಲ್ಲಿ ಇಂದಿರಾ ಗಾಂಧಿಯ ಸರ್ವಾಧಿಕಾರವನ್ನು ಇಡೀ ದೇಶ ವಿರೋಧಿಸುತ್ತಿತ್ತು. ಜಯಪ್ರಕಾಶ್ ನಾರಾಯಣರ ನೇತೃತ್ವದಲ್ಲಿ ಕಾಂಗ್ರೆಸ್‌ನ ಸರ್ವಾಧಿಕಾರ, ಭ್ರಷ್ಟಾಚಾರದ ವಿರುದ್ಧ ದೇಶದ ಹಲವು ಕಡೆಗಳಲ್ಲಿ ಹೋರಾಟ ಪ್ರಾರಂಭವಾಗಿತ್ತು. ಮಹಾತ್ಮ ಗಾಂಧಿ ಕೊಲೆಯ ನಂತರ ದೇಶದ ಪ್ರಧಾನ ಧಾರೆ ರಾಜಕಾರಣದಿಂದ ನೇಪಥ್ಯಕ್ಕೆ ಸರಿದಿದ್ದ ಆರೆಸ್ಸೆಸ್ ಈ ಸರ್ವಾಧಿಕಾರ ವಿರೋಧಿ ಹೋರಾಟದಲ್ಲಿ ಮೆತ್ತಗೆ ತೂರಿಕೊಂಡು ಪ್ರಧಾನಧಾರೆಗೆ ಸೇರಿಕೊಂಡುಬಿಟ್ಟಿತು. ಕಾಂಗ್ರೆಸ್ ವಿರೋಧವೊಂದೇ ಏಕಮಾತ್ರ ಅಜೆಂಡಾ ಆಗಿದ್ದ ಜೆಪಿ ನೇತೃತ್ವದ ಚಳವಳಿ ಯಾರ ಎಚ್ಚರಿಕೆಯನ್ನೂ ಗಮನಿಸದೆ ಈ ಹಸಿರುಹಾವನ್ನು ಹುಲ್ಲುಮೆದೆಯೊಳಗೆ ಬಿಟ್ಟುಕೊಂಡಿತು.

ಆರೆಸ್ಸೆಸ್‌ನ ಫ್ಯಾಸಿಸ್ಟ್ ಸಿದ್ಧಾಂತ ಯಾವ ರೀತಿಯಲ್ಲೂ ಸರ್ವಾಧಿಕಾರ ವಿರೋಧಿಯಲ್ಲ ಮತ್ತು ಪ್ರಜಾತಂತ್ರ ಪರವಾದದ್ದಲ್ಲ ಎಂದು ಆಗ ಬಹಳಷ್ಟು ಜನರು ಜೆಪಿಯನ್ನು ಎಚ್ಚರಿಸಿದ್ದರೂ ಜೆಪಿ ಆ ಎಚ್ಚರಿಕೆಗೆ ಕಿವುಡಾಗಿದ್ದರು. ಅಷ್ಟು ಮಾತ್ರವಲ್ಲ, ಬಿಜೆಪಿಯನ್ನು ಫ್ಯಾಸಿಸ್ಟ್ ಎನ್ನುವುದಾದರೆ ತಾನೂ ಸಹ ಫ್ಯಾಸಿಸ್ಟೆ ಎಂದೆಲ್ಲಾ ಬ್ಲಾಕ್‌ಮೇಲ್ ಮಾಡಿ ಆರೆಸ್ಸೆಸ್ಸಿನ ಮತ್ತು ಇಂದಿನ ಬಿಜೆಪಿಯ ಮೂಲ ರೂಪವಾದ ಭಾರತೀಯ ಜನಸಂಘಕ್ಕೆ ಭ್ರಷ್ಟಾಚಾರ ವಿರೋಧಿ, ಸರ್ವಾಧಿಕಾರಿ ವಿರೋಧಿ, ಪ್ರಜಾತಂತ್ರವಾದಿ ಚಳವಳಿಯಲ್ಲಿ ಪ್ರಮುಖ ಸ್ಥಾನ ಕಲ್ಪಿಸಿಕೊಟ್ಟರು. ಹೀಗೆ ಬಿಜೆಪಿ ಆಂತರ್ಯದಲ್ಲಿ ಮಹಾ ಸರ್ವಾಧಿಕಾರಿ ಸಿದ್ಧಾಂತವನ್ನೇ ಹೊಂದಿದ್ದರೂ ಅಂದಿನ ಕಾಲಮಾನಕ್ಕೆ ತಕ್ಕಂತೆ ಪ್ರಜಾತಂತ್ರವಾದಿ ಮುಖವಾಡ ತೊಟ್ಟುಕೊಂಡು ಕಾಂಗ್ರೆಸ್ ವಿರೋಧಿ ಕೊಳದಲ್ಲಿ ಮೀನು ಹಿಡಿಯಲು ಪ್ರಾರಂಭಿಸಿತು. ಇಂದಿರಾ ಗಾಂಧಿ ತನ್ನ ಅಧಿಕಾರ ಉಳಿಸಿಕೊಳ್ಳಲು ಸಂಸದೀಯ ಪ್ರಜಾತಂತ್ರದ ಎಲ್ಲಾ ಮುಖವಾಡಗಳನ್ನು ಕಿತ್ತೊಗೆದು ತುರ್ತುಪರಿಸ್ಥಿತಿ ಜಾರಿಗೊಳಿಸಿದಾಗ ಎಲ್ಲಾ ವಿರೋಧಿ ಬಣದ ನಾಯಕರು ಬಂಧನಕ್ಕೊಳಗಾದಂತೆ ಅದ್ವಾನಿ, ವಾಜಪೇಯಿಗಳೂ ಬಂಧನಕ್ಕೊಳಗಾದರು. ಹೀಗಾಗಿ ಬಿಜೆಪಿಗೆ ಪ್ರಜಾತಂತ್ರದ ಇಮೇಜೂ ಮತ್ತು ಕಾಂಗ್ರೆಸ್ ವಿರೋಧಿ ರಾಜಕಾರಣದಲ್ಲಿ ಪ್ರಮುಖ ಪಾತ್ರವೂ ದೊರಕಿತು.





1977ರಲ್ಲಿ ಜನತಾ ಪಕ್ಷ ಅಧಿಕಾರಕ್ಕೆ ಬಂದನಂತರ ಪ್ರಪ್ರಥಮ ಬಾರಿಗೆ ಬಿಜೆಪಿ (ಆಗ ಭಾರತೀಯ ಜನಸಂಘ) ಅಧಿಕಾರದ ರುಚಿ ನೋಡಿತು. ಅಷ್ಟರಲ್ಲೇ ಆ ಸರ್ಕಾರದ ಮೂಲಕ ತನ್ನ ಫ್ಯಾಸಿಸ್ಟ್ ಅಜೆಂಡಾವನ್ನು ಅನುಷ್ಠಾನಕ್ಕೆ ತರಲು ಪ್ರಯತ್ನಿಸಿತು. ಆದರೆ 1980ರಲ್ಲಿ ಜನತಾ ಪಕ್ಷದ ಸರ್ಕಾರ ತನ್ನದೇ ಆಂತರಿಕ ವೈರುಧ್ಯದಿಂದ ಕುಸಿದ ನಂತರ ಜನತಾ ಪಕ್ಷದಿಂದ ಹೊರಬಂದು ಭಾರತೀಯ ಜನತಾ ಪಕ್ಷ ಸ್ಥಾಪಿಸಿಕೊಂಡಿತು. ಗಾಂಧಿ ಪ್ರಣೀತ ಸಮಾಜವಾದವೇ ತನ್ನ ಅಜೆಂಡಾ ಎಂದು ಹೇಳುತ್ತಾ ತನ್ನ ಅಸಲಿ ಅಜೆಂಡಾವನ್ನು ಮುಚ್ಚಿಕೊಂಡಿತು. ವಾಸ್ತವವಾಗಿ 1984ರಲ್ಲಿ ಸಿಖ್ ನರಮೇಧ ನಡೆದಾಗ ಈ ಬಿಜೆಪಿಗಳೂ ಅವರ ಜೊತೆ ಭಾಗವಹಿಸಿದ್ದಲ್ಲದೆ ಕಾಂಗ್ರೆಸ್ ಗೂಂಡಾಗಳು ನಡೆಸಿದ ಆ ಭೀಭತ್ಸ ನರಮೇಧವನ್ನು ಕೂಡಾ ಆರೆಸ್ಸೆಸ್ ಸಮರ್ಥಿಸಿಕೊಂಡಿತ್ತು, ಆದರೆ 1984ರ ಚುನಾವಣೆಯಲ್ಲಿ ಬಿಜೆಪಿಗೆ ದಕ್ಕಿದ್ದು ಕೇವಲ ಎರಡು ಸೀಟು. ಆಗ ಗಾಂಧಿ ಪ್ರಣೀತ ಸಮಾಜವಾದದ ಮುಖವಾಡ ತಮಗೆ ಯಾವ ರೀತಿಯಲ್ಲೂ ಪ್ರಯೋಜನಕ್ಕೆ ಬರುವುದಿಲ್ಲ ಎಂದು ಅರ್ಥಮಾಡಿಕೊಂಡ ಬಿಜೆಪಿ ಆ ಮುಖವಾಡ ಕಳಚಿ ರಾಮಜನ್ಮಭೂಮಿ ವಿವಾದವನ್ನು ಹುಟ್ಟುಹಾಕಿತು. ಕೋಮುವಾದವನ್ನು ಬಡಿದೆಬ್ಬಿಸಿ ಒಮ್ಮೆ ಕೇಂದ್ರ ಸರ್ಕಾರದಲ್ಲಿ ಅಧಿಕಾರವನ್ನೂ ಅನುಭವಿಸಿ ಈಗ ಭಾರತದ ಪ್ರಧಾನ ಧಾರೆ ರಾಜಕಾರಣದಲ್ಲಿ ತನ್ನದೇ ಧ್ರುವವನ್ನು ಸ್ಥಾಪಿಸಿಕೊಂಡಿದ್ದು ಇತಿಹಾಸ.

ಆದರೆ ಬಿಜೆಪಿಯನ್ನು ಕೇವಲ ಕೋಮುವಾದದ ಕಾರಣಕ್ಕೆ ಮಾತ್ರ ದೂಷಿಸುವ ಹಲವರು ಬಿಜೆಪಿಗಿದ್ದ ಕಾಂಗ್ರೆಸ್ ವಿರೋಧಿ, ಸರ್ವಾಧಿಕಾರ ವಿರೋಧಿ ಹೆಗ್ಗಳಿಕೆಗಳನ್ನು ಈಗಲೂ ಪ್ರಶ್ನಿಸುವುದಿಲ್ಲ. ಅವರದ್ದು ಇತರರಿಗಿಂತ ತತ್ವನಿಷ್ಠ ಮತ್ತು ಶಿಸ್ತುಬದ್ಧ ರಾಜಕೀಯ ಪಕ್ಷವೆಂದೇ ನಂಬುತ್ತಾರೆ. ಆದರೆ 1990ರ ದಶಕದಲ್ಲಿ ಉತ್ತರಪ್ರದೇಶ, ರಾಜಸ್ಥಾನ, ಮಧ್ಯಪ್ರದೇಶಗಳಲ್ಲಿ ಬಿಜೆಪಿ ಅಧಿಕಾರ ನಡೆಸಿದೆ. ಹಾಗೆಯೇ 1999-2004ರ ತನಕ ಕೇಂದ್ರದಲ್ಲೂ ಅಧಿಕಾರ ನಡೆಸಿದೆ. 1996ರಿಂದ ಗುಜರಾತಿನಲ್ಲೂ ಈಗ ಕರ್ನಾಟಕವನ್ನೂ ಒಳಗೊಂಡಂತೆ 8 ರಾಜ್ಯಗಳಲ್ಲಿ ಅಧಿಕಾರ ನಡೆಸುತ್ತಿದೆ ಅಥವಾ ಹಂಚಿಕೊಂಡಿದೆ. ಆದರೆ ಭ್ರಷ್ಟಾಚಾರ, ಸ್ವಜನಪಕ್ಷಪಾತ, ಸಂಪನ್ಮೂಲ ಲೂಟಿ, ಜಾತಿವಾದ ಇತ್ಯಾದಿಗಳನ್ನು ಮಾನದಂಡಗಳನ್ನಾಗಿ ಇಟ್ಟುಕೊಂಡರೆ ವಾಸ್ತವವಾಗಿ ಬಿಜೆಪಿಯ ಅಧಿಕಾರ ಮತ್ತು ಕಾಂಗ್ರೆಸ್ಸಿನ ಅಧಿಕಾರದ ನಡುವೆ ಯಾವ ವ್ಯತ್ಯಾಸವೂ ಇರಲಿಲ್ಲ, ಇಲ್ಲ. ಕೆಲವೊಮ್ಮೆ ಕಾಂಗ್ರೆಸ್ಸಿಗಿಂತಲೂ ಹೆಚ್ಚು ಸ್ವಜನಪಕ್ಷಪಾತ, ಭ್ರಷ್ಟಾಚಾರ ಮತ್ತು ಜಾತಿವಾದಗಳನ್ನು ಬಿಜೆಪಿ ಮಾಡಿದೆ. ಮಾಡುತ್ತಿದೆ.

ಹೀಗಾಗಿ ಅಧಿಕಾರಸ್ಥ ಬಿಜೆಪಿ ಅಧಿಕಾರಸ್ಥ ಕಾಂಗ್ರೆಸ್ಸಿಗಿಂತಲೂ ದುಷ್ಟ ಮತ್ತು ಭ್ರಷ್ಟ ಎಂಬುದು ಸಾಬೀತಾಗಿದೆ. ಅದರೊಡನೆ ಅವರು ಬಿತ್ತುವ ಕೋಮುವಾದಿ ವಿಷ ದೇಶದ ನೆಮ್ಮದಿಯನ್ನು ಶಾಶ್ವತವಾಗಿ ಹಾಳುಗೆಡವುತ್ತದೆ.

ಇವೆಲ್ಲವೂ ಈಗ ಕರ್ನಾಟಕದ ಸಂದರ್ಭದಲ್ಲೂ ಜಗಜ್ಜಾಹೀರಾಗುತ್ತಿದೆ. ಎರಡೂವರೆ ವರ್ಷಗಳಲ್ಲಿ ಬಿಜೆಪಿ ಸರ್ಕಾರ ಮಾಡಿರುವಷ್ಟು ಭ್ರಷ್ಟಾಚಾರ, ಜಾತಿವಾದ, ಸ್ವಜನ, ಸ್ವಕುಟುಂಬ ಪಕ್ಷಪಾತಗಳು ಯಾವ ಪ್ರಮಾಣದಲ್ಲಿದೆಯೆಂದರೆ ಇಂದು ಬಿಜೆಪಿ ಸರ್ಕಾರ ಮತ್ತು ಪಕ್ಷ ಅದೇ ಕಾರಣಕ್ಕೆ ಬಗೆಹರಿಸಲಾಗದ ಬಿಕ್ಕಟ್ಟನ್ನು ಎದುರಿಸುತ್ತಿದೆ. ಆದ್ದರಿಂದಲೇ ಬಿಜೆಪಿ ಈಗ ಸರ್ವಾಧಿಕಾರ ವಿರೋಧದ ಅಥವಾ ಕಾಂಗ್ರೆಸ್ ವಿರೋಧದ ಅಥವಾ ಭ್ರಷ್ಟಾಚಾರದ ವಿರೋಧದ ಪೋಸನ್ನು ಕೊಟ್ಟರೆ ಯಾರೂ ನಂಬುತ್ತಿಲ್ಲ. ಆದ್ದರಿಂದಲೇ ಬಿಜೆಪಿ ಮುಖಂಡರು ತಮ್ಮ ಮೇಲೆ ಯಾರಾದರೂ ಭ್ರಷ್ಟಾಚಾರದ ಆರೋಪ ಮಾಡಿದರೆ ಇತರರು ಭ್ರಷ್ಟಾಚಾರ ಮಾಡಿಲ್ಲವೇ ಎಂದು ಮರುಪ್ರಶ್ನೆ ಹಾಕುತ್ತಾರೆಯೇ ವಿನಃ ತಾವು ಭ್ರಷ್ಟರಲ್ಲ ಎಂದೇನೂ ಹೇಳಿಕೊಳ್ಳುವುದಿಲ್ಲ!

ಕಾಂಗ್ರೆಸ್ ಹುಟ್ಟುಹಾಕಿದ ಭ್ರಷ್ಟಾಚಾರ ಮತ್ತು ಸ್ವಜನಪಕ್ಷಪಾತವನ್ನು ಬಿಜೆಪಿ ಯಾವ ಪಾತಾಳಕ್ಕೆ ತೆಗೆದುಕೊಂಡು ಹೋಗಿದೆಯೆಂದರೆ ಕಾಂಗ್ರೆಸ್ ಒಳಗೊಂಡಂತೆ ಎಲ್ಲಾ ಪಕ್ಷಗಳು ತತ್ತರಗೊಂಡಿವೆ. ಇತರ ಪಕ್ಷಗಳು ಭ್ರಷ್ಟಾಚಾರ ಮಾಡುತ್ತಿದ್ದರೂ ಅದರ ಬಗ್ಗೆ ಒಂದು ಬಗೆಯ ಸಾರ್ವಜನಿಕ ಅಳುಕು ಇರುತ್ತಿತ್ತು. ಹೀಗಾಗಿ ಸಾರ್ವಜನಿಕ ವಲಯದಲ್ಲಿ ಭ್ರಷ್ಟಾಚಾರ ಒಂದು ಅಪರಾಧ ಮತ್ತು ತಪ್ಪು ಎಂಬ ಭಾವನೆಯಾದರೂ ಇರುತ್ತಿತ್ತು. ಅದೇ ರೀತಿ ಇತರ ಪಕ್ಷಗಳು ಸಂಸದೀಯ ಸಂಸ್ಥೆಗಳಲ್ಲಿ ಇರುವ ಒಳದಾರಿಯನ್ನು ಬಳಸಿಕೊಂಡು ತಮ್ಮ ಲಾಭಗಳನ್ನು ಮಾಡಿಕೊಳ್ಳುತ್ತಿದ್ದವಾದ್ದರಿಂದ ಸಂಸದೀಯ ಸಂಸ್ಥೆಗಳ "ಮರ್ಯಾದೆ"ಯನ್ನು ಸಾರ್ವಜನಿಕವಾಗಿ ಕಾಪಾಡುವ ಪ್ರಯತ್ನವನ್ನು ನಡೆಸುತ್ತಿದ್ದವು.

ಆದರೆ ಬಿಜೆಪಿ ಇವೆಲವನ್ನೂ ಗುಣಾತ್ಮಕವಾಗಿ ಇನ್ನೂ ಪಾತಾಳಕ್ಕೆ ಮುಟ್ಟಿಸಿದೆ. ಭ್ರಷ್ಟಾಚಾರಕ್ಕೆ ಒಂದು ಸಾರ್ವಜನಿಕ ಮೌಲ್ಯ ತಂದುಕೊಟ್ಟಿದ್ದು ಬಿಜೆಪಿಗೆ ಚುನಾವಣೆಗಳಲ್ಲಿ ಈವರೆಗೆ ಯಾರೂ ಖರ್ಚು ಮಾಡಿದಷ್ಟು ಹಣವನ್ನು ಬಿಜೆಪಿ ಖರ್ಚು ಮಾಡಿತು. ಎಂದೂ ಯಾರು ಕೊಡದಷ್ಟು ಹಣವನ್ನು ಮತದಾರರಿಗೆ ನೀಡಿ ಜನರ ಅಂತಸ್ಸಾಕ್ಷಿಯನ್ನೇ ಭ್ರಷ್ಟಗೊಳಿಸಿತು. ಇದನ್ನು ಹುಟ್ಟಿಹಾಕಿದ್ದು ಕಾಂಗ್ರೆಸ್ಸೆ ಆಗಿದ್ದರೂ ಅದನ್ನು ಈ ಪಾತಾಳಕ್ಕೆ ತೆಗೆದುಕೊಂಡು ಹೋಗಿದ್ದು ಮಾತ್ರ ಬಿಜೆಪಿಯೇ! ಮೊನ್ನೆ "ಸಮಯ" ಚಾನೆಲ್‌ನಲ್ಲಿ ಸಂಸದರಿಗೆ ಸಂಬಳ-ಸವಲತ್ತು ಜಾಸ್ತಿ ಮಾಡಿದ್ದರ ಬಗ್ಗೆ ಕಾಂಗ್ರೆಸ್‌ನ ಎಂಎಲ್‌ಎ ಒಬ್ಬರೊಡನೆ ಸಂವಾದ ಮುಗಿಸಿ ಬರಬೇಕಾದರೆ ಅವರು ತೋಡಿಕೊಂಡ ಗೋಳು ಈ ಪ್ರಜಾಸತ್ತೆಯನ್ನು ಯಾವ ಸಂಖ್ಯೆಗಳೂ ಕಾಪಾಡಲಾರವೆಂಬುದನ್ನು ಸಾಬೀತುಪಡಿಸುವಂತಿತ್ತು. ಸಂಸದರಿಗೆ ಆ ಪರಿಯಲ್ಲಿ ಸಂಬಳ ಹೆಚ್ಚಿಸಿದ್ದನ್ನು ಸಮರ್ಥಿಸಿಕೊಂಡ ಆ ಮಹಾಶಯರು "ನೀವೇನೋ ನಮಗೆ ಆದರ್ಶದ ಮಾತುಗಳನ್ನು ಬೋಧಿಸುತ್ತೀರಿ, ಆದರೆ ಚುನಾವಣೆ ಬಂದಾಗ ಒಂದು ಕಡೆ ಕಟ್ಟಾ ನಂತವರು ಸಾವಿರಾರು ರೂಪಾಯಿ ಹಂಚುತ್ತಿರುತ್ತಾರೆ. ಆಗ ನಾವು ಬೇಡವೆಂದರೂ ಹಣವನ್ನು ಹೂಡಲೇ ಬೇಕಾಗುತ್ತದೆ. ಇಲ್ಲವೆಂದರೆ ರಾಜಕೀಯ ಸನ್ಯಾಸ ಸ್ವೀಕರಿಸಬೇಕಾಗುತ್ತದೆ" ಎಂದರು.

ಅಂದರೆ ಈಗ ಜನರಿಗಿರುವ ಆಯ್ಕೆ ಏನು? ಅತಿ ಭ್ರಷ್ಟ ಹಾಗೂ ಕಡಿಮೆ ಭ್ರಷ್ಟರ ನಡುವಿನ ಆಯ್ಕೆಯಲ್ಲವೇ? ಅತಿ ಭ್ರಷ್ಟರು ಮಾತ್ರ ಗೆಲ್ಲಲು ಸಾಧ್ಯ ಎಂದಾಯಿತಲ್ಲವೇ? ಜನರ ಮತವನ್ನೇ ಕಿತ್ತುಕೊಂಡು ಅಧಿಕಾರಕ್ಕೇರುವ ಈ ಅತಿಭ್ರಷ್ಟರ ಮಟ್ಟಿಗೆ ರಾಜಕೀಯ ಒಂದು ಉದ್ಯಮ. ಒಂದು ಹೂಡಿಕೆ. ಉದ್ಯಮದಲ್ಲಿ ವ್ಯಾಪಾರವಾಗುತ್ತಿರುವುದು ಮೌಲ್ಯಗಳು. ಜನರ ನಂಬಿಕೆಗಳು. ಆಶೋತ್ತರಗಳು. ಈ ರಾಜಕಾರಣ ಒಂದೋ ಜನರನ್ನೂ ತನ್ನ ಬೃಹತ್ ಜಠರದಲ್ಲಿ ಜೀರ್ಣಿಸಿಕೊಂಡು ನೈತಿಕವಾಗಿ ಭ್ರಷ್ಟವಾಗಿಸುತ್ತದೆ. ಇಲ್ಲವೇ ಹತಾಶ ಅಸಹಾಯಕತೆಯನ್ನು ಹುಟ್ಟುಹಾಕಿ ಸಿನಿಕರನ್ನಾಗಿಸುತ್ತದೆ. ನಿರ್ವೀರ್ಯರನ್ನಾಗಿಸುತ್ತದೆ.

ಇಲ್ಲಿ ಸಾಯುತ್ತಿರುವುದು ಪ್ರಜಾಸತ್ತೆ. ಇಂಥಾ ಸತ್ತ ಪ್ರಜಾಸತ್ತೆಯನ್ನು ಸಂಖ್ಯೆಗಳು ಮಾತ್ರ ಉಳಿಸಲು ಸಾಧ್ಯವೇ? ಅಥವಾ ಈ ಬಿಕ್ಕಟ್ಟು ಹೇಗೆ ಬಗೆಹರಿದರೂ ಮತ್ತೆ ಜನರ ಮುಂದೆ ಬರುವುದು ಇದೇ ಆಯ್ಕೆಯಲ್ಲವೇ? ಈ ವಿಷವೃತ್ತದಲ್ಲಿ ಹೊಸ ಗಾಳಿ ಬರುವುದಾದರೂ ಹೇಗೆ?

ಜೀವಂತ ಜನತೆ-ಜೀವಂತ ಪ್ರಜಾಸತ್ತೆ. ಹೀಗಾಗಿ ಇಂದು ತುರ್ತಾಗಿ ಆಗಬೇಕಿರುವುದು ಈ ಸಂಸದೀಯ ರಾಜಕಾರಣಿಗಳನ್ನು ಶಪಿಸಿ ನೈತಿಕಸ್ಖಲನ ಮಾಡಿಕೊಳ್ಳುವುದಲ್ಲ. ಬದಲಿಗೆ ಈ ಚೌಕಟ್ಟಿನಿಂದ ಹೊರಬಂದು ಜನರನ್ನು ನೈತಿಕವಾಗಿ, ರಾಜಕೀಯವಾಗಿ, ಜೀವಂತವಾಗಿಡುವ ನಿಜವಾದ ಜನತಾಂತ್ರಿಕ ರಾಜಕಾರಣವನ್ನು ಪ್ರಾರಂಭಿಸಬೇಕಿದೆ. ●

ನೋ ಕಾಮೆಂಟ್ಸ್

"ಇದೇ ಅಕ್ಟೋಬರ್ 7ಕ್ಕೆ ಅಮೆರಿಕವು ಅಫ್ಘಾ ಸ್ತಾನದ ಮೇಲೆ ಆಕ್ರಮಣ ಮಾಡಿ 9 ವರ್ಷವಾಗುತ್ತದೆ ಈ ಅವಧಿಯಲ್ಲಿ ಹೆಚ್ಚೂ ಕಡಿಮೆ 45 ಲಕ್ಷ ಅಫ್ಘನ್ನರು ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಈ ಯುದ್ಧದ ಬಲಿಯಾಗಿದ್ದಾರೆ. ಇದು ಹೆಚ್ಚೂ ಕಡಿಮೆ ಎರಡನೆ ಮಹಾಯುದ್ಧದಲ್ಲಿ ಹಿಟ್ಲರ್ ಸಾಯಿಸಿದ ಯೆಹೂದಿಗ ಸಂಖ್ಯೆಗೆ ಹತ್ತಿರಹತ್ತಿರ ಬರುತ್ತಿದೆ."

- ಪತ್ರಿಕಾ ವರ

"ಮೈಕ್ರೋಫೈನಾನ್ಸ್ ಸಂಸ್ಥೆಗಳ ಗಳಿಕೆ 2002ರ ಶೇ.18.8ರಷ್ಟು ಮಾತ್ರ ಇದ್ದದ್ದು 2009ರ ವೇಳೆ ಶೇ.31.4ಕ್ಕೇ ಏರಿದೆ. ಅದೇ ಅವಧಿಯಲ್ಲಿ ಅವ ನಿರ್ವಹಣಾ ವೆಚ್ಚವು ಶೇ.19.9ರಿಂದ ಶೇ.11.5 ಇಳಿಯಿತು. ಹೀಗಾಗಿ ಮೈಕ್ರೋಫೈನಾನ್ಸ್ ಕಂಪನಿಗ ಸಂಪತ್ತಿನ ಮೇಲಿನ ಗಳಿಕೆಯ ದರವು ವಿಶ್ವದೆಲ್ಲೆಡೆ ಕೇವ ಶೇ.1.5ರಷ್ಟಿದ್ದರೂ ಭಾರತದಲ್ಲಿ ಮಾತ್ರ ಈ ಕಂಪನಿಗ ಸಂಪತ್ತಿನ ಮೇಲಿನ ಗಳಿಕೆಯ ದರವು 2002ರಲ್ಲಿ -1. ಇದ್ದದ್ದು 2009ರಲ್ಲಿ ಶೇ. 4.3ಕ್ಕೆ ಏರಿದೆ. ಹೀಗಾಗಿ ಈ ಕಂಪನಿಗಳು ತಮ್ಮ ಬಡ್ಡಿ ದರವನ್ನು ಕಡಿಮೆ ಮಾಡಿದ ಏನೂ ನಷ್ಟವಿಲ್ಲ."

-'ನಬಾರ್ಡ್' ವಿಶ್ಲೇಷ

"ಭಾರತವು ಕಾಮನ್‌ವೆಲ್ತ್ ಗೇಮ್ಸ್‌ನ ಪ್ರಾರಂಭವ ಚೆನ್ನಾಗಿ ನಡೆಸಿದೊಡನೆ ಅದು ಒಂದು ಸೂಪರ್‌ಪವ ಆಗಿಬಿಡುವುದಿಲ್ಲ. ತನ್ನ ಅರ್ಧದಷ್ಟು ಜನತೆ ಇನ್ ಹಸಿವಿನಿಂದ ಬಳಲುತ್ತಿರುವಾಗ ಕೇವಲ ಈ ದೇಶ ಶ್ರೀಮಂತರ ಮತ್ತು ಕುಲೀನರ ಹೆಮ್ಮೆಯನ್ನು ಹೆಚ್ಚಿಸು ಈ ಕ್ರೀಡಾಕೂಟದಿಂದ ಭಾರತ ಸೂಪರ್ ಪವ ಆಗುತ್ತದೆಯೇ?"

-ಯೋಗೇಂದ್ರ ಯಾದವ

"ಅಯೋಧ್ಯಾ ಹುಯಿ ಹಮಾರಿ, ಅಬ್ ಮಥುರ ಕಿ ಬಾರಿ" (ಅಯೋಧ್ಯಾ ಅಂತೂ ನಮ್ಮದಾಯಿತ ಇನ್ನು ಮಥುರೆಗಾಗಿ ಮುನ್ನಡೆಯಿರಿ)

- ಅಯೋಧ್ಯೆ ತೀರ್ಮಾನ ಬಂದಮೇ ಮಥುರೆಯಲ್ಲಿ ಕೇಳಿಬರುತ್ತಿರುವ ಘೋಷಣೆಗ

"ಕನ್ನಡ ಭಾಷೆಯ ಉಳಿವು ಮತ್ತು ಬೆಳವಣಿಗೆ ಹೊಸ ಚಿಂತನೆಗಳ ಒಳ ಹರಿವು ಅಗತ್ಯವಿದೆ."

- ಜಿ.ಎಸ್. ಶಿವರುದ್ರ

"ಭಾರತ ಒಂದೆಡೆ ಸೂಪರ್ ಪವರ್ ಆಗುತ್ತಿದ್ದರ ಅತ್ಯಂತ ಕಡುಬಡವರು ಹೆಚ್ಚಿರುವ ದೇಶಗಳಲ್ಲಿ ಭಾರತ ಒಂದು. ಸಮತೋಲನ ಆಹಾರವಿಲ್ಲದೇ, ಕಡಿ ತೂಕವಿರುವ ಮಕ್ಕಳಲ್ಲಿ ಶೇ.42ರಷ್ಟು ಮಕ್ಕಳು ಭಾರತದ ಇದ್ದಾರೆ."

- ವ

ನಂಬಿದ್ರೆನಂಬಿ ಬಿಟ್ರೆಬಿಡಿ

"ಬಿಹಾರದ ಮಾಜಿ ಮುಖ್ಯಮಂತ್ರಿಗಳಾದ ರಾ ದೇವಿಯವರು ತಾವು 17.8 ಲಕ್ಷ ರೂ. ಮೌಲ್ಯದ ಹಸು ಮತ್ತು 42 ಕರುಗಳ ಮಾಲೀಕರೆಂದು ಕೊಟ್ಟಿದ್ದಾರೆ."

- ವ

"ರಾಜ್ಯದ ಪ್ರಸ್ತುತ ರಾಜಕೀಯ ಬೆಳವಣಿಗೆ ಹಿನ್ನೆಲೆಯಲ್ಲಿ ಎಲ್ಲಾ ಶಾಸಕರೂ ರಾಜೀನಾಮೆ ಕೊ ಹೊಸದಾಗಿ ಚುನಾವಣೆ ಎದುರಿಸುವುದು ಒಳ್ಳೆಯದು"

- ಪ್ರಮೋದ್ ಮುತಾಲಿ

ಚಿಕ್ಕಂದಿನಿಂದಲೂ ನಿಮ್ಮದು ಗೋಲಿ-ಬಾರು

"ನಾನು ಗೋಲಿ ಆಡುವ ವಯಸ್ಸಿನಿಂದಲೇ ಯಾ ದರಲ್ಲೂ ಸೋತಿಲ್ಲ. ಇನ್ನು ಈಗ ಸೋಲುತ್ತೇನೆಯೇ

- ಜನಾರ್ದನ

ಪ್ರಜಾಪ್ರಭುತ್ವವನ್ನೂ ತೆರವುಗೊಳಿಸಲಾಯಿತೇ

"ವಿಶ್ವಾಸಮತ ಯಾಚನೆಯ ಸಂದರ್ಭದಲ್ಲಿ ಸ ದೊಳಗೆ ಅಹಿತಕರ ಘಟನೆಗಳು ನಡೆಯದಂತೆ ತಡೆ ವುದಕ್ಕಾಗಿ ಎತ್ತಿ ಎಸೆಯಬಹುದಾದ ಎಲ್ಲಾ ವಸ್ತುಗಳ ಸದನದ ಒಳಗಿಂದ ತೆರವುಗೊಳಿಸಲಾಗಿದೆ."

- ಪತ್ರಿಕಾ ವ

ಕೊಟ್ಟು ಕೊಟ್ಟು ಬಡವಾಯ್ತೇ ಕನ್ನಡ

"ಕನ್ನಡ ಭಾಷೆಗೆ ಕೊಡುವ ಸಾಮರ್ಥ್ಯ ಇ ಕೂಡಾ ಇಂದು ಪಡೆದುಕೊಳ್ಳುವ ಭಾಷೆಯಾಗಿ ಬದಲಾಗಿ

- ಜಿ.ಎಸ್.ಶಿವರುದ್ರ

ತಮ್ಮನ್ನು ಯಾವ ಪಟ್ಟಿಗೆ ಸೇರಿಸಿಕೊಂಡಿದ್ದೀ

"ಎಲ್ಲಕ್ಕಿಂತ ದೊಡ್ಡ ದುರಂತವೆಂದರೆ, ಇಂದು ಕ ಟಕದ ನೀಚ ರಾಜಕಾರಣ ರಾಜ್ಯದ ಯಾವ ಚಿಂತಕನ ಬುದ್ಧಿಜೀವಿಯನ್ನೂ ತಲ್ಲಣಗೊಳಿಸಿ ಕ್ರಿಯಾಶೀಲಗೊಳಿ ರುವುದು."

- ಡಿ. ಎಸ್. ನಾಗಭೂ


ಭೂತಾಯಿ 33 ಮಕ್ಕಳನ್ನು ಹಡೆದಾಗ



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ಮಾರಿಯೋ ಗೊಮೆಜ್‌ಗೆ ಈಗ 63 ವರ್ಷ ಷ್ಟು. ಆತ ಹನ್ನೆರಡು ವರ್ಷದವನಿದ್ದಾಗಲೇ ಗಣಿ ರ್ಮಿಕನಾಗಿ ಕೆಲಸ ಪ್ರಾರಂಭಿಸಿದ. ಆತನ ಆರೋಗ್ಯ ಅಷ್ಟು ಚೆನ್ನಾಗಿಲ್ಲ, ಕೈಕಾಲು ಗಟ್ಟಿಯಾಗಿಲ್ಲ, ಆದರೂ . ಹೊಂದುವ ಆಸೆ ಆತನಿಗಿಲ್ಲ. ಅವತ್ತು ಮಕ್ಕಳ ಚರಣೆ ಸಲುವಾಗಿ ರಜೆ ಇತ್ತು. ಮಾರಿಯೋನ ತಿ ಲಿಲಿ "ಇವತ್ತು ಕೆಲಸಕ್ಕೆ ಹೋಗಬೇಡ. ನಮ್ಮ ಳು, ಮೊಮ್ಮಕ್ಕಳೊಂದಿಗೆ ಕಳೆಯೋಣ" ಎಂದು ಕೊಂಡಳು. ಆದರೆ ಮಾರಿಯೋ ಕೇಳಲಿಲ್ಲ. ಕೆಲಸಕ್ಕೆ ಟೇ ಬಿಟ್ಟ. ಎಂದಿನಂತೆ ಅವತ್ತೂ ಆತ ರಾತ್ರಿ ತ್ತು ಗಂಟೆಗೆ ವಾಪಸ್ಸು ಬರುತ್ತಾನೆಂದು ಲಿಲಿ ಕಾದಳು. ಆದರೆ ಮಾರಿಯೋ ಮನೆಗೆ ವಾಪಸ್ಸು ಬಂದಿದ್ದು ದಿನಗಳ ನಂತರ. ಏಕೆಂದರೆ ಅವತ್ತು ಮಾರಿಯೋ ಮಾಡುತ್ತಿದ್ದ ಗಣಿಯಲ್ಲಿ ಭೂಕುಸಿತ ಸಂಭವಿಸಿ, ಯೋ ಮತ್ತು ಇನ್ನೂ 32 ಕಾರ್ಮಿಕರು ಭೂಮಿಯ ದಲ್ಲಿ ಬಂಧಿತರಾದರು. ಅಚ್ಚರಿ ಮೂಡಿಸುವಂತೆ, ಸಾಧ್ಯವೆಂಬಂತೆ ಅವರೆಲ್ಲರೂ ಈಗ ಹೊರಬಂದಿ ಕೆಲ ಟಿವಿ ನಿರೂಪಕರು ವರ್ಣಿಸಿದಂತೆ "ಭೂತಾಯಿ 3 ಜನರಿಗೆ ಪುನರ್‌ಜನ್ಮ ನೀಡಿದಳು." ಇಂತಹ



ಗಣಿಯೊಳಗ ಫೀನಿಕ್

ಮಿಡಿವ, ರೋಚಕವಾದ, 69 ದಿನಗಳ ಕಾಲ ನ (ಗುರುವಾರ) ಮುಂಜಾನೆ ತನಕ ಜಗತ್ತಿನ ದವನ್ನು ಸೆಳೆದು ಹಿಡಿದಿಟ್ಟಿದ್ದ ಈ ಘಟನೆ ನಡೆದದ್ದು ದ ಚಿಲಿ ದೇಶದಲ್ಲಿ.

ಅವತ್ತು ಆಗಸ್ಟ್ 5, 2010. ಚಿಲಿ ದೇಶದ ಮ ಪ್ರದೇಶದ ಸ್ಯಾನ್ ಹೊಸೆಯಲ್ಲಿರುವ ಚಿನ್ನ ತಾಮ್ರದ ಗಣಿಯ ಕಾರ್ಮಿಕರು ತಮ್ಮ ಕೆಲಸದಲ್ಲಿ ಗಿದ್ದರು. ಅವರಲ್ಲಿ 33 ಜನ 2,300 ಅಡಿ ಲ್ಲಿದ್ದರು. ಆ ಗಣಿ ಹೇಗಿದೆ ಎಂದರೆ ಅದು ನೇರ ಆಳಕ್ಕೆ ಹೋಗುವ ಬದಲಾಗಿ ಸುರಳಿ ಆಕಾರದಲ್ಲಿ ಯನ್ನು ಕೊರೆಯಲಾಗಿದ್ದು ಅದರ ಉದ್ದ ಅಳತೆಯೇ ಬ್ಬರಿ ಐದು ಕಿಲೋಮೀಟರ್‌ಗಳು.

ಗಣಿಯ ಒಳಗಡೆ ಹಲವು ವಾಹನಗಳು ಮತ್ತು ಯಂತ್ರಗಳೂ ಇದ್ದವು. ಮಧ್ಯಾಹ್ನದ ಊಟಕ್ಕೆಂದು ಕಾರ್ಮಿಕರು ಗಣಿಯ ಒಳಗೆ ಕೊರೆದಿದ್ದ 50 ರ ಮೀಟರ್‌ನಷ್ಟು ದೊಡ್ಡದಾದ 'ಕೊಠಡಿ'ಯಲ್ಲಿ ನ್ನಾಗ ಭೂಕುಸಿತ ಸಂಭವಿಸಿ ಸುಮಾರು 7,00,000 ಳಷ್ಟು ಕಲ್ಲು ಮತ್ತು ಮಣ್ಣು ಬಿದ್ದು ಗಣಿಯನ್ನೇ ಮಾಡಿತು. ಪರಿಣಾಮ ಅವರೆಲ್ಲ ಅಲ್ಲೇ ಜೀವಂತ ಧಿಗೆ ದೂಡಲ್ಪಟ್ಟರು. ಅವತ್ತಿನ ಪಾಳಿಯ ಮುಖ್ಯಸ್ಥ ಯಿ ಉರ್ಜುವಾನಿಗೆ ಕೂಡಲೆ ತಾವೆಲ್ಲ ಎಂತಹ ಯದ ಸ್ಥಿತಿಯಲ್ಲಿದ್ದೇವೆ ಎಂದು ಗೊತ್ತಾಯಿತು. ಲ್ಲ, ತಮ್ಮನ್ನು ಭೂಮಿಯ ಗರ್ಭದಿಂದ ತವಾಗಿ ಭೂಮಿಯ ಮೇಲಕ್ಕೆ ತರುವುದೂ ಅಸಾಧ್ಯ ಅನುಮಾನವೂ ಇತ್ತು. ಆದರೂ ಧೃತಿಗೆಡದ ರ್ಜುವಾ ತನ್ನ ತಂಡದ ರಕ್ಷಣೆಗೆ ನಿಂತ.

ಮಾರಿಯೋ ಪತ್ನಿ ಲಿಲಿ ಸೇರಿದಂತೆ ಗಣಿಯಲ್ಲಿ ತರಾಗಿದ್ದ ಇತರೆ ಕಾರ್ಮಿಕರ ಸಂಸಾರಗಳಿಗೂ ಸಿತದ ಸುದ್ದಿ ಗೊತ್ತಾಯಿತು. ಅವರೆಲ್ಲ ಗಣಿ ಗೆ ಧಾವಿಸಿದರು. ಅಲ್ಲಿ ನೋಡಿದರೆ ಬೆಟ್ಟದ ಭಾಗದಷ್ಟು ಕುಸಿದು ಬಿದ್ದಿತ್ತು. ಅದರೊಳಗಿಂದ ದರೂ ಜೀವಂತವಾಗಿ ಹೊರಬರುವ ಮಾತಿರಲಿ, ಲ್ಲಿ ಯಾರೂ ಬದುಕುಳಿದಿರುವ ಸಾಧ್ಯತೆಯೂ ರಲಿಲ್ಲ. ಅವತ್ತು ರಾತ್ರಿ ಹನ್ನೊಂದು ಗಂಟೆಗೆ ತಲುಪಿದ ಲಿಲಿ ಅಲ್ಲೇ ಗಟ್ಟಿಯಾಗಿ ನಿಂತಳು. ರು ಕೊರೆಯುವ ಚಳಿಯಲ್ಲಿ ಕಲ್ಲು ಬಂಡೆಗಳ ಸಿದ್ದಿಸಿದಳು. ಕೆಲ ದಿನಗಳಲ್ಲಿ ಇತರ ಕಾರ್ಮಿಕರ ಬಂಧಿಗಳು ಆಕೆಯ ಜೊತೆಗೂಡಿದರು. ಯಾರೋ ಗಳನ್ನು ಹೂಡಿದರು. ಇನ್ನಾರೋ ಊಟ, ತಿಂಡಿ ಸಲಾರಂಭಿಸಿದರು. ನೋಡುನೋಡುತ್ತಿದ್ದಂತೆ ದು ಪುಟ್ಟ ನಗರವೇ ತಲೆ ಎತ್ತಿ ಅದಕ್ಕೆ 'ಕ್ಯಾಂಪ್ ಪ್' ಎಂದು ಹೆಸರಿಟ್ಟರು. ಅಲ್ಲಿದ್ದವರೆಲ್ಲ ಕಾರ್ಮಿಕ ರಕ್ಷಿಸಲು ಚಿಲಿ ಸರ್ಕಾರ ಪ್ರಾರಂಭಿಸಿದ ಕಾರ್ಯದ ಗಾ ಇಡಲಾರಂಭಿಸಿದರು.

ರಕ್ಷಣಾ ಕಾರ್ಯಾಚರಣೆಯವರೂ ತಮ್ಮ ಕೈಲಾಗಿದ್ದನ್ನೆಲ್ಲ ಮಾಡುತ್ತಿದ್ದರು. ಭೂಮಿಯೊಳಗೆ ಐದಿಂಚು ಅಗಲದ ತೂತುಗಳನ್ನು ಕೊರೆದು ಎಲ್ಲಾದರೂ ಜೀವಂತ ಕಾರ್ಮಿಕರು ಇದ್ದಾರೆಯೇ ಎಂದು ಹುಡುಕಲಾರಂಭಿಸಿದರು. ಆದರೆ ಭೂಮಿಯ ಒಳಗಿದ್ದ ಗಟ್ಟಿ ಕಲ್ಲುಗಳು ತೂತುಗಳನ್ನು ಕೊರೆಯುವುದೇ ಕಷ್ಟದ ಕೆಲಸವನ್ನಾಗಿ ಮಾಡುತ್ತಿದ್ದವು. ಹೀಗೆ ಹತ್ತು ಹದಿನೈದು ದಿನಗಳು ಕಳೆದವು. ಎಲ್ಲೆಲ್ಲಿ ಹುಡುಕಿದರೂ ಕಾರ್ಮಿಕರ ಸುಳಿವೇ ಸಿಗಲಿಲ್ಲ. ಮಾತ್ರವಲ್ಲ ಇಷ್ಟು ದಿನಗಳ ಕಾಲ ಭೂಮಿಯಲ್ಲಿ ಬಂಧಿತರಾಗಿದ್ದವರು ಬದುಕುಳಿದಿರುವ ಸಾಧ್ಯತೆಯೂ ಇಲ್ಲ ಎಂಬ ಭಾವನೆ ದಟ್ಟವಾಗಲಾರಂಭಿಸಿತು.

ಆದರೆ ಗಣಿಯಲ್ಲಿ ಸಿಕ್ಕಿಕೊಂಡಿದ್ದ ಕಾರ್ಮಿಕರು ಎಲ್ಲರ ಲೆಕ್ಕಾಚಾರವನ್ನು ಮೀರಿ ತಮ್ಮ ಪ್ರಾಣವನ್ನು ಉಳಿಸಿಕೊಂಡಿದ್ದರು. ತುರ್ತುಪರಿಸ್ಥಿತಿಗೆಂದು ಗಣಿಯಲ್ಲಿ ಎರಡು-ಮೂರು ದಿನಗಳಿಗಾಗುವಷ್ಟು ಆಹಾರ ಮಾತ್ರ ಇತ್ತು. ಆದರೆ ನಾಯಕ ಲೂಯಿ ಉರ್ಜುವಾ ನೇತೃತ್ವದಲ್ಲಿ ಅವರೆಲ್ಲಾ ದಿನಕ್ಕೆ ಎರಡು ಚಮಚದಷ್ಟು ಮೀನು, ಒಂದು ಗುಟುಕ ಹಾಲು ಮತ್ತು ಎರಡು ದಿನಕ್ಕೆ ಒಂದು ಬಿಸ್ಕೆಟ್ ಅನ್ನು ಮಾತ್ರ ತಿಂದು ಪರಸ್ಪರ ಸಹಕರಿಸಿದ್ದರು. ಗಣಿಯೊಳಗಿದ್ದ ವಾಹನದ ರೇಡಿಯೇಟರ್‌ನಲ್ಲಿನ ನೀರನ್ನು ಕುಡಿದಿದ್ದರು. ಅದು ಮುಗಿದಾಗ ಗಣಿಯೊಳಗೇ ಒಂದೆರಡು ಕಡೆ ಕೊರೆದು ನೀರನ್ನು ಹಿಡಿದು ಕುಡಿದಿದ್ದರು. ತಮ್ಮ ಹೆಲ್ಮೆಟ್‌ನ ದೀಪ ಬತ್ತಿ ಹೋದಾಗ ವಾಹನದ ಬ್ಯಾಟರಿ ಬಳಸಿ ದೀಪ ಹಚ್ಚಿಕೊಂಡು ಆ ಕತ್ತಲಿನಲ್ಲೂ ಬೆಳಕು ಕಂಡಿದ್ದರು.

ಆದರೆ ಭೂಮಿಯ ಆಳದಲ್ಲಿನ 32.2 ಡಿಗ್ರಿ ಸೆಂಟಿಗ್ರೇಡ್‌ನಷ್ಟು ಸೆಖೆ, ಜೊತೆಗೆ ಅಪಾರ ತೇವಾಂಶದಿಂದಾಗಿ ಅವರಲ್ಲಿ ಹಲವರಿಗೆ ಚರ್ಮರೋಗಗಳು ಪ್ರಾರಂಭವಾಗಿದ್ದವು. ಭೂಮಿಯ ಒಳಗಿದ್ದ ಅವರಿಗೆ ಹೊರಗಿನಿಂದ ತೂತುಗಳನ್ನು ಕೊರೆಯುತ್ತಿರುವ ಶಬ್ದ ಕೇಳಿಸುತ್ತಿತ್ತು. ಆದರೆ ಅದು ತಾವಿರುವಲ್ಲಿಗೆ ಬರಲಿ ಎಂದು ವಿಧಿ ಇಲ್ಲದೆ ಕಾದಿದ್ದರು.

ಆಗಸ್ಟ್ 22. ಭೂಕುಸಿತ ಸಂಭವಿಸಿ 17 ದಿನಗಳು ಉರುಳಿದ್ದವು. ಕೊನೆಗೂ ಅವರಿದ್ದ ಜಾಗದಲ್ಲೇ ರಕ್ಷಣಾ ಕಾರ್ಯಾಚರಣೆಯವರು ತೂತೊಂದನ್ನು ಕೊರೆಯುವಲ್ಲಿ ಯಶಸ್ವಿಯಾದರು. ಹಾಗೆ ತೂತು ಕೊರೆದ ಯಂತ್ರವನ್ನು ಹೊರ ತೆಗೆದಾಗ ಅದಕ್ಕೆ ಏನನ್ನೋ ಅಂಟಿಸಿರುವುದನ್ನು ಕಂಡು ಎಲ್ಲರಿಗೆ ಅಚ್ಚರಿ ಆಯಿತು. ಅದನ್ನು ಬಿಚ್ಚಿ ನೋಡಿದರೆ ಅದೊಂದು ಪೇಪರ್ ಹಾಳೆಯಾಗಿದ್ದು ಅದರಲ್ಲಿ ಕೆಂಪು ಅಕ್ಷರಗಳಲ್ಲಿ "ನಾವು ಎಲ್ಲಾ 33 ಜನ ಆಶ್ರಯ ಕೊಠಡಿಯಲ್ಲಿ ಸುರಕ್ಷಿತವಾಗಿದ್ದೇವೆ" ಎಂದು ಬರೆಯಲಾಗಿತ್ತು.

ಕ್ಯಾಂಪ್ ಹೋಪ್‌ನಲ್ಲಿ ಆಗ ತಾನೇ ಲಿಲಿ ಮತ್ತು ಇತರರು ಊಟಕ್ಕೆ ಕೂತಿದ್ದರು. ಆಗ ಯಾರೋ "ಅವರೆಲ್ಲ ಬದುಕಿದ್ದಾರೆ, ಬದುಕಿದ್ದಾರೆ" ಎಂದು ಕೂಗುತ್ತಾ ಓಡಿಬಂದರು. "ಆಗ ನಾನು ಜೋರಾಗಿ ಅಳಲಾರಂಭಿಸಿದೆ. ತುಂಬಾ ಅತ್ತೆ, ನಾವೆಲ್ಲರೂ ಅತ್ತೆವು. ನಾವೆಲ್ಲ ನಗುತ್ತಾ ಒಬ್ಬರನ್ನೊಬ್ಬರು ಅಪ್ಪಿಕೊಳ್ಳುತ್ತಿದ್ದರೂ ಅಳುತ್ತಿದ್ದೆವು. ನಾವೆಲ್ಲ ಬೇರೆ ಬೇರೆ ಸಂಸಾರದವರಾದರೂ ಆ ಕ್ಷಣ ನಾವು ಒಂದೇ ವಂಶದವರಾದೆವು" ಎಂದು ಲಿಲಿ ಹೇಳಿದಳು.

ಗಣಿ ಕಾರ್ಮಿಕರು ಬದುಕುಳಿದಿರುವ ಸುದ್ದಿ ಎಲ್ಲೆಡೆ ಕಾಡ್ಗಿಚ್ಚಿನಂತೆ ಹರಿಯಿತು. ಚಿಲಿ ದೇಶದ ರಾಜ್ಯಾಧ್ಯಕ್ಷ ಸೆಬಾಸ್ಟಿಯನ್ ಪಿನೇರ ಕೂಡ ಗಣಿ ಇದ್ದಲ್ಲಿಗೆ ಧಾವಿಸಿದರು. ಜಗತ್ತಿನ ಹಲವಾರು ದೇಶಗಳಿಂದ ಟಿವಿ ಚಾನೆಲ್‌ನವರು ಮತ್ತು ಪತ್ರಕರ್ತರು ಅಲ್ಲಿಗೆ ಬಂದು ಬಿಡಾರ ಹೂಡಿದರು.

ಸಹಜವಾಗಿಯೇ ಭೂಮಿಯ ಆಳದಲ್ಲಿದ್ದ ಕಾರ್ಮಿಕರೂ ಹರ್ಷಿತರಾದರು. ಸದ್ಯದಲ್ಲೇ ತಮ್ಮನ್ನು ಹೊರಗೆಳೆದು ರಕ್ಷಿಸಲಾಗುತ್ತದೆ ಎಂದು ನಂಬಿದರು. ಆದರೆ ಅದು ಅಷ್ಟು ಸುಲಭದ ಕಾರ್ಯವಾಗಿರಲಿಲ್ಲ. ಏಕೆಂದರೆ ಎಲ್ಲಿ ತೋಡಿದರೂ ಭೂಕುಸಿತ ಸಂಭವಿಸಿ ಕಾರ್ಮಿಕರನ್ನು ರಕ್ಷಿಸುವ ಬದಲಾಗಿ ಅವರನ್ನು ಸಾವಿನ ದವಡೆಗೆ ದೂಡುವ ಅಪಾಯವಿತ್ತು.

ಈ ಮಧ್ಯೆ ಕಾರ್ಮಿಕರಿದ್ದಲ್ಲಿಗೆ ಇನ್ನೂ ಎರಡು ಐದಿಂಚಗಲದ ತೂತುಗಳನ್ನು ಕೊರೆಯಲಾಯಿತು. ಮೊದಲನೆ ತೂತಿನ ಮೂಲಕ ಐದಡಿ ಉದ್ದನೆಯ ಪ್ಲಾಸ್ಟಿಕ್ ಚೀಲಗಳಲ್ಲಿ ಕಾರ್ಮಿಕರಿಗೆ ನೀರು, ಆಹಾರ, ಔಷಧಿ ಮತ್ತು ಇತರೆ ಅಗತ್ಯ ವಸ್ತುಗಳನ್ನು ಸರಬರಾಜು ಮಾಡಲಾಯಿತು. (ಈ ಆಹಾರ ಚೀಲಗಳಿಗೆ 'ಪಲೋಮಾ' ಅಂದರೆ 'ಪಾರಿವಾಳ' ಎಂದು ಹೆಸರಿಡಲಾಯಿತು. ಇನ್ನೊಂದು ತೂತಿನ ಮೂಲಕ ಪುಟ್ಟ ವೀಡಿಯೋ ಕ್ಯಾಮರಾವನ್ನು ಕಳುಹಿಸಿ ಗಣಿಯೊಳಗಿಂದಲೇ ಕಾರ್ಮಿಕರು ತಮ್ಮ ಮನೆ ಮಂದಿಯೊಂದಿಗೆ ಮುಖತಃ ಮಾತನಾಡುವಂತೆ, ಆ ಮೂಲಕ ಧೃತಿಗೆಡದಂತೆ ನೋಡಿಕೊಳ್ಳಲಾಯಿತು. ಮೂರನೆ ತೂತಿನ ಮೂಲಕ ಕಾರ್ಮಿಕರಿಗೆ ಉಸಿರಾಡಲು ಆಮ್ಲಜನಕವನ್ನು ಸರಬರಾಜು ಮಾಡಲಾಯಿತು.

ಜೊತೆಗೆ ಕಾರ್ಮಿಕರು ದೈಹಿಕವಾಗಿ ಮತ್ತು ಮಾನಸಿಕವಾಗಿ ಆರೋಗ್ಯವನ್ನು ಕಾಪಾಡಿಕೊಳ್ಳುವಂತೆ ಡಾಕ್ಟರ್‌ಗಳು ಮತ್ತು ಮನೋವೈದ್ಯರು ಅವರಿಗೆ ಮಾರ್ಗದರ್ಶನ ನೀಡಲು ಪ್ರಾರಂಭಿಸಿದರು. ಆ ಕತ್ತಲೆಯಲ್ಲೂ ಹಗಲು ಮತ್ತು ರಾತ್ರಿಯನ್ನು ಗುರುತಿಸಿ ಸಾಧ್ಯವಾದಷ್ಟು ಸಾಮಾನ್ಯ ಜೀವನ ನಡೆಸುವಂತೆ ನೋಡಿಕೊಳ್ಳಲಾಯಿತು.

ಕಾರ್ಮಿಕರಲ್ಲಿ ಜಾನಿ ಬರಿಯೋಸ್ ಎಂಬುವವನೂ ಇದ್ದ. ಅದೃಷ್ಟವಶಾತ್ ಆತ ಈ ಹಿಂದೆ ಪ್ರಥಮ ಚಿಕಿತ್ಸೆಯಲ್ಲಿ ತರಬೇತಿ ಪಡೆದಿದ್ದರಿಂದ ಆತನೇ ಭೂಗರ್ಭದಲ್ಲಿ ವೈದ್ಯನಾದ. ಹಾಗೆಯೇ ಮಾರಿಯೋ ಗೊಮೆಜ್ ಅಲ್ಲಿದ್ದ ಎಲ್ಲರಿಗಿಂತ ಹಿರಿಯವರಾಗಿದ್ದ ಕಾರಣ ಅವರೇ ಧಾರ್ಮಿಕ ಮಾರ್ಗದರ್ಶಿಯಾದರು. ಇನ್ನು ಮಾರಿಯೋ ಸೆಪುಲ್‌ವೇಡ ಎಂಬ ಹುರುಪುಳ್ಳ ವ್ಯಕ್ತಿಯಂತೂ ಇತರ ಕಾರ್ಮಿಕರನ್ನು ಕುರಿತು ಟಿವಿ ಕ್ಯಾಮೆರಾದಲ್ಲಿ ಚಿಕ್ಕಪುಟ್ಟ ಕಾರ್ಯಕ್ರಮಗಳನ್ನು ನಿರ್ದೇಶಿಸಿ ಹೊರಗೆ ಕಳುಹಿಸುತ್ತಿದ್ದ.

ಕೊನೆಗೂ ಇವರನ್ನೆಲ್ಲ ಹೊರಗೆಳೆಯುವ ಯೋಜನೆಯೊಂದು ರೂಪುಗೊಂಡಿತು. ಅದರಂತೆ ಮೂರು ಬೇರೆಬೇರೆ ಕಡೆ 26 ಇಂಚಿನಷ್ಟು ವ್ಯಾಸ ಹೊಂದಿದ್ದ ತೂತುಗಳನ್ನು ಕೊರೆಯುವ ಕೆಲಸ ಪ್ರಾರಂಭವಾಯಿತು. ಆದರೆ ಈ ಕಾರ್ಯದಲ್ಲಿ ಹೊರಗಡೆ ಕನಿಷ್ಠ ಒಂದು ಸಾವಿರ ಜನ ತೊಡಗಿದ್ದರೆ ಒಳಗಿದ್ದ 33 ಜನರೂ ಕೈಜೋಡಿಸಬೇಕಿತ್ತು. ಆಗ ಲೂಯಿ ಉರ್ಜುವಾ ತನ್ನ ಜೊತೆಗಿದ್ದವರನ್ನು 11 ಮಂದಿಗಳಿದ್ದ ಮೂರು ತಂಡಗಳಾಗಿ ವಿಂಗಡಿಸಿದರು. ಪ್ರತಿ ತಂಡ ಎಂಟು ಗಂಟೆ ಪಾಳಿಯ ಮೇಲೆ ಹಗಲೂರಾತ್ರಿ ಕೆಲಸ ಮಾಡಲಾರಂಭಿಸಿತು. ಅದೆಂತಹ ಕೆಲಸವೆಂದರೆ ಇವರ ರಕ್ಷಣೆಗೆಂದು ತೋಡಲಾಗುತ್ತಿದ್ದ ತೂತಿನಿಂದ ಹೊರಬಿದ್ದ ಸುಮಾರು 1000 ಮೆಟ್ರಿಕ್ ಟನ್‌ನಷ್ಟು ಕಲ್ಲು ಮಣ್ಣನ್ನು ಗಣಿಯೊಳಗಡೆಯೇ ಬೇರೆ ಕಡೆ ಸಾಗಿಸುವುದು.

ಈ ಮಧ್ಯೆ ಇನ್ನೊಂದು ಸಮಸ್ಯೆ ತಲೆದೋರಿತು. ರಕ್ಷಣಾ ತೂತಿನ ವ್ಯಾಸ ಕೇವಲ 26 ಇಂಚಿದದ್ದರಿಂದ ದೇಹ ತೂಕ ಹೆಚ್ಚಿದ್ದ ಕಾರ್ಮಿಕರು ಸಣ್ಣಗಾಗಬೇಕಿತ್ತು. ಆಗ ಅದಕ್ಕೆಂದೇ ವ್ಯಾಯಾಮಗಳನ್ನು ಶುರು ಮಾಡಲಾಯಿತು.

2,300 ಅಡಿ ಆಳದಿಂದ ಕಾರ್ಮಿಕರನ್ನು 26 ಇಂಚಿನ ವ್ಯಾಸ ಹೊಂದಿದ್ದ ತೂತಿನಿಂದ ಹೊರಗೆಳೆಯುವುದಕ್ಕೆ ಅಮೆರಿಕದ ನಾಸಾದೊಂದಿಗೆ ಚಿಲಿಯ ವಿಜ್ಞಾನಿಗಳು ಸೇರಿ ಮೂರು ಉದ್ದನೆಯ ಸ್ಟೀಲ್ ಕ್ಯಾಪ್ಸೂಲ್‌ಗಳನ್ನು ತಯಾರಿಸಿದರು. ಕ್ಯಾಪ್ಸೂಲ್‌ಗಳಿಗೆ ಫೀನಿಕ್ಸ್ (ಭೂಮಿಯಿಂದ ಮರುಹುಟ್ಟು ಪಡೆದು ಬಂದ ಕಾಲ್ಪನಿಕ ಪಕ್ಷಿ) ಎಂದು ಹೆಸರಿಡಲಾಯಿತು. ಈ ಕ್ಯಾಪ್ಸೂಲ್‌ಗಳಲ್ಲಿ ಆಮ್ಲಜನಕ, ಲೈಟು, ಭೂಮಿಯ ಮೇಲಿರುವವರೊಂದಿಗೆ ವೀಡಿಯೋ ಲಿಂಕ್‌ಗಳನ್ನು ಅಳವಡಿಸಲಾಯಿತು. ಅಕಸ್ಮಾತ್ ಓರ್ವ ಕಾರ್ಮಿಕನನ್ನು ಹೊರಗೆಳೆಯುವಾಗ ಈ ಕ್ಯಾಪ್ಸೂಲ್‌ಗಳ ಮೇಲೆ ಕಲ್ಲುಗಳು ಬಿದ್ದು ಅದು ಮಾರ್ಗಮಧ್ಯದಲ್ಲಿ ಸಿಲುಕಿಕೊಂಡರೆ, ಆದರೊಳಗಿಂದ ಕಾರ್ಮಿಕನು ತನ್ನನ್ನು ಕಳಚಿಕೊಂಡು ಮತ್ತೆ ಭೂಮಿಯೊಳಗೆ ಸುರಕ್ಷಿತವಾಗಿ ಇಳಿಯುವ ವ್ಯವಸ್ಥೆಯನ್ನು ಮಾಡಲಾಗಿತ್ತು.

ಇದೇ ಅಕ್ಟೋಬರ್ 12 ರ ಸಂಜೆ ರಕ್ಷಣಾ ಕೆಲಸ ಕೊನೆ ಹಂತ ತಲುಪಿತು. ಕಾರ್ಮಿಕರನ್ನು ಕೆಳಗಿನಿಂದ ಕರೆತರಲು ಮ್ಯಾನುಯೆಲ್ ಗೋಂಜಾಲೆಜ್ ಎಂಬ ರಕ್ಷಣಾ ಕಾರ್ಮಿಕನನ್ನು ಗಣಿಯೊಳಗೆ ಇಳಿಸಲಾಯಿತು. ಗೋಂಜಾಲೆಜ್‌ನನ್ನು ಕಂಡಕೂಡಲೇ 33 ಕಾರ್ಮಿಕರು ಹರ್ಷೋದ್ಗಾರ ತೆಗೆದರು. ಗೋಂಜಾಲೆಜ್ ಬದಲಾಗಿ ಕಾರ್ಮಿಕನೊಬ್ಬ ಕ್ಯಾಪ್ಸೂಲ್ ಅನ್ನು ಹತ್ತಿದ. ಆದರೆ ಆತನನ್ನು ಹೊರಗೆಳೆಯುವುದು ಸುಲಭದ ಕೆಲಸವಾಗಿರಲಿಲ್ಲ. 2,300 ಅಡಿಯಷ್ಟು ಆಳದಿಂದ ಒಂದು ತೂತಿನಲ್ಲಿ ಮೂವತ್ತು ನಿಮಿಷಗಳ ಕಾಲ, ಗಿರಗಟ್ಟಲೆಯಂತೆ ತಿರುಗುವ ಕ್ಯಾಪ್ಸೂಲ್‌ನಲ್ಲಿ ಪ್ರಯಾಣಿಸುವುದನ್ನು ಕಲ್ಪಿಸಿಕೊಂಡರೆ ಇದರ ಕಠೋರತೆ ಅರ್ಥವಾಗುತ್ತದೆ.


ಇಂತಹ ಪ್ರಯಾಣದ ಸಮಯದಲ್ಲಿ ಕ್ಯಾಪ್ಸೂಲ್‌ನಲ್ಲಿದ್ದ ಕಾರ್ಮಿಕ ಆತಂಕಗೊಂಡು ಎಡವಟ್ಟು ಮಾಡಿಕೊಳ್ಳುವ ಅಪಾಯವಿತ್ತು. ಆದರೆ ಅವರಿಗೆ ಪ್ರಜ್ಞೆ ತಪ್ಪಿಸಿ ಕ್ಯಾಪ್ಸೂಲ್‌ನಲ್ಲಿ ಕಳುಹಿಸುವಂತೆಯೂ ಇರಲಿಲ್ಲ. ಯಾಕೆಂದರೆ ದುರದೃಷ್ಟವಶಾತ್ ಮಾರ್ಗಮಧ್ಯದಲ್ಲೇ ಕ್ಯಾಪ್ಸೂಲ್ ಸಿಕ್ಕಿ ಹಾಕಿಕೊಂಡರೆ ಕಾರ್ಮಿಕನೇ ತನ್ನನ್ನು ಕೆಳಗೆ ಇಳಿಸಿಕೊಳ್ಳಬೇಕಿತ್ತು.

ಆದರೆ ಅಂತಹದ್ದೇನೂ ಆಗಲಿಲ್ಲ. ಭೂಮಿಯ ಗರ್ಭದಲ್ಲಿ ಸಿಲುಕಿಕೊಂಡಿದ್ದಾಗ ಅಪಾರ ಧೈರ್ಯ ಮತ್ತು ತಾಳ್ಮೆ ತೋರಿದ್ದ ಗಣಿ ಕಾರ್ಮಿಕರು ಈ ಪ್ರಯಾಣದಲ್ಲೂ ಅಷ್ಟೇ. ದಿಟ್ಟತನ ಮೆರೆದರು. ಅಕ್ಟೋಬರ್ 12 ರ ಮಧ್ಯರಾತ್ರಿಯಿಂದ ಮುಕ್ಕಾಲು ಗಂಟೆಗೆ ಒಬ್ಬರಂತೆ ಒಬ್ಬೊಬ್ಬರಾಗಿ ಹೊರಗೆ ಬಂದರು. ಅಪಘಾತದಲ್ಲಿ ಕಾರ್ಮಿಕರ ನಾಯಕತ್ವ ವಹಿಸಿದ್ದ ಲೂಯಿ ಉರ್ಜುವಾ ಕೊನೆಯ ಕ್ಷಣದವರೆಗೂ ನಾಯಕನಾಗಿಯೇ ವರ್ತಿಸಿ ಎಲ್ಲರ ನಂತರ ಆತ ಕೊನೆಗೆ ಹೊರಬಂದ....


69 ದಿನಗಳ ಕಾಲ ಬೆಳಕನ್ನೇ ಕಂಡಿರದಿದ್ದ, ತಮ್ಮ ಬಂಧುಬಳಗದಿಂದ ದೂರವಾಗಿದ್ದ, ಸಾವಿನ ದವಡೆಯಲ್ಲಿ ಬದುಕಿದ್ದ ಈ 33 ದಿಟ್ಟ ಜನರ ರೋಮಾಂಚಕ ಬಿಡುಗಡೆಯನ್ನು ಜಗತ್ತಿನ ಹಲವಾರು ಟಿವಿ ಚಾನೆಲ್‌ಗಳು ಒಂದೂವರೆ ದಿನ ಲೈವ್ ಆಗಿ ಪ್ರಸಾರ ಮಾಡಿದವು. ಬಿಬಿಸಿ, ಸಿಎನ್‌ಎನ್, ಚೀನಾ ಮತ್ತು ಇರಾನಿ ಸರ್ಕಾರಿ ಟಿವಿ ಚಾನೆಲ್‌ಗಳೂ ತಮ್ಮ ಇತರೆ ಕಾರ್ಯಕ್ರಮಗಳನ್ನೆಲ್ಲ ರದ್ದು ಮಾಡಿ ಗಣಿ ಪ್ರದೇಶದಿಂದಲೇ ನೇರವಾಗಿ ಎಲ್ಲ ದೃಶ್ಯಗಳನ್ನು ಬಿತ್ತರಿಸಿದವು.

ಆದರೆ ನಮ್ಮ ಚಾನೆಲ್‌ಗಳು? ಕನ್ನಡ ಚಾನೆಲ್‌ಗಳಲ್ಲಿ ಯಡಿಯೂರಪ್ಪನ ಎಡವಟ್ಟುಗಳು ಪ್ರಸಾರವಾಗುತ್ತಿದ್ದರೆ, ನ್ಯಾಷನಲ್ ಚಾನೆಲ್‌ಗಳಲ್ಲಿ ಕ್ರಿಕೆಟ್ ಪಂದ್ಯವೇ ರಾರಾಜಿಸುತ್ತಿತ್ತು.

ಹೇಸಿಗೆ ಹುಟ್ಟಿಸುವಂತಿದ್ದ ರಾಜ್ಯ ರಾಜಕಾರಣ ಮತ್ತು ಬೋರ್ ಹೊಡೆಸುವ ಕ್ರಿಕೆಟ್ ಮಧ್ಯೆ ಈ 33 ಗಣಿ ಕಾರ್ಮಿಕರ ಕತೆ ಹಂಚಿಕೊಳ್ಳಬೇಕೆನಿಸಿತು....




ರಕ್ಷಣಾ ಕಾರ್ಯಾಚರಣೆಯ ಗ್ರಾಫಿಕ್ ನೋಟ




ಹೊರಬಂದ ಕಾರ್ಮಿಕನಿಗೆ ಸ್ವಾಗತ...

ಜಾಕಿ ಆಟದಲ್ಲಿ ಪುನೀತ್-ಸೂರಿ ಜಾಕ್‌ಪಾಟ್!



ಚಿತ್ರೀಕರಣದ ಆರಂಭದಿಂದಲೂ ಬಿಡುಗಡೆಯಾಗುವ ಕೊನೇ ಗಳಿಗೆಯ ತನಕ ಸಾಕಷ್ಟು ನಿರೀಕ್ಷೆ, ಕುತೂಹಲವನ್ನು ಹುಟ್ಟಿಸಿದ್ದ 'ಜಾಕಿ' ಬಿಡುಗಡೆಯಾಗಿದೆ. ಭರ್ಜರಿ ಓಪನಿಂಗ್‌ನೊಂದಿಗೆ ಆರಂಭವಾಗಿರುವ ಜಾಕಿ ಸೂಪರ್ ಹಿಟ್‌ಆಗುವ ಸುಳಿವು ಆರಂಭದಲ್ಲೇ ದೊರೆತಿದೆ. ಈಗಾಗಲೇ 'ಜಾಕಿ' ಹದಿನಾರು ಕೋಟಿ ರೂಪಾಯಿಗಳ ವಹಿವಾಟು ನಡೆಸಿದೆ. ಈ ಚಿತ್ರದ ನಿರ್ಮಾಣಕ್ಕೆ ವೆಚ್ಚವಾಗಿರುವುದು ಅಂದಾಜು ನಾಲ್ಕು ಕೋಟಿ ರೂಪಾಯಿ ಮಾತ್ರ. ಅಂದರೆ, ಬಿಡುಗಡೆಯ ಮುನ್ನವೇ 'ಜಾಕಿ' ಚಿತ್ರ ವಜ್ರೇಶ್ವರಿ ಸಂಸ್ಥೆಗೆ ಬರೋಬ್ಬರಿ ಹನ್ನೆರಡು ಕೋಟಿ ರೂಪಾಯಿಗಳ ಲಾಭ ತಂದಿದೆ! 'ಜಾಕಿ' ಜಾಕ್ ಪಾಟ್ ಹೊಡೆದಿದೆ!!



ಅರುಣ್ ಕುಮಾರ್.ಜಿ
arunodayagc@gmail.com

ಯಾರೇ ಒಬ್ಬ ಕ್ರಿಯಾಶೀಲ ನಿರ್ದೇಶಕ ಕಾಣಿಸಿಕೊಂಡರೆ, ತಕ್ಷಣ ಅವರನ್ನು ಕರೆದು ತಮ್ಮ ಬ್ಯಾನರ್‌ನಲ್ಲೇ ಒಂದು ಅವಕಾಶ ಕೊಡುವುದು ವಜ್ರೇಶ್ವರಿ ಸಂಸ್ಥೆಯ ಸಂಪ್ರದಾಯ. ಹಾಗಾಗಿ 'ದುನಿಯಾ' ಚಿತ್ರ ಹಿಟ್ ಆದಾಗಲೇ ರಾಘವೇಂದ್ರ ರಾಜ್‌ಕುಮಾರ್ "ನಮ್ಮ ಸಂಸ್ಥೆಗೊಂದು ಸಿನಿಮಾ ಮಾಡಿಕೊಡಿ" ಎಂದು ನಿರ್ದೇಶಕ ಸೂರಿಗೆ ಆಹ್ವಾನ ನೀಡಿದ್ದರು. ಆದರೆ 'ದುನಿಯಾ' ನಂತರ 'ಇಂತಿ ನಿನ್ನ ಪ್ರೀತಿಯ' ಮತ್ತು 'ಜಂಗ್ಲಿ' ಚಿತ್ರಗಳಲ್ಲಿ ಸೂರಿ ಬ್ಯುಸಿಯಾಗಿದ್ದರಿಂದ ತಕ್ಷಣಕ್ಕೇ ವಜ್ರೇಶ್ವರಿಗೆ ಸಿನಿಮಾ ಮಾಡುವುದು ಅವರಿಂದ ಸಾಧ್ಯವಾಗಿರಲಿಲ್ಲ.

ಸೂರಿಗೆ ಕೂಡಾ 'ಪುನೀತ್ ರಾಜ್‌ಕುಮಾರ್ ಜೊತೆ ಒಂದು ಸಿನಿಮಾ ಮಾಡಬೇಕು' ಎಂಬ ಬಯಕೆಯಿತ್ತು. ಹೀಗಾಗಿ 'ಜಂಗ್ಲಿ' ಬಿಡುಗಡೆಯ ನಂತರ ಪುನೀತ್ ಸಿನಿಮಾ ಮಾಡಲು ಸೂರಿ ಪ್ಲಾನು ಮಾಡಿದರು. ವಜ್ರೇಶ್ವರಿ ಸಂಸ್ಥೆಯ ಮುಖ್ಯಸ್ಥ ರಾಘವೇಂದ್ರ ರಾಜ್‌ಕುಮಾರ್ ಬಳಿ ಸೂರಿ ಮೂರು ಕಥೆಗಳನ್ನು ಹೇಳಿದರಂತೆ. ಒಂದು ಸೆಂಟಿಮೆಂಟಲ್ ಫ್ಯಾಮಿಲಿ ಡ್ರಾಮಾ ಕಥೆಯಾದರೆ, ಮಿಕ್ಕೆರಡು ಆಕ್ಷನ್ ಹೊಂದಿದ್ದ ಕಥೆಗಳು. ಆ ಮೂರೂ ಕಥೆಗಳನ್ನು ಕೇಳಿದ ರಾಘಣ್ಣ "ಮೊದಲಿಗೆ ಆಕ್ಷನ್ ಚಿತ್ರವನ್ನೇ ಮಾಡೋಣ" ಎಂದರಂತೆ.

ಆನಂತರ ಇಬ್ಬರಿಗೂ ಒಪ್ಪಿಗೆಯಾಗಿದ್ದ ಸ್ಟೋರಿಲೈನ್ ಅನ್ನು ಹಿಡಿದು ಸುಮಾರು ಏಳೆಂಟು ತಿಂಗಳುಗಳ ಕಾಲ ಚಿತ್ರಕತೆಯನ್ನು ಆರೇಳು ಬಾರಿ ತಿದ್ದಿ ತೀಡಿದ ಮೇಲೆ ಸೂರಿ 'ಜಾಕಿ' ಚಿತ್ರವನ್ನು ಆರಂಭಿಸಿದರು.

'ದುನಿಯಾ' ನಂತರ ಸೂರಿ ನಿರ್ದೇಶನದಲ್ಲಿ ಬಂದ 'ಇಂತಿ ನಿನ್ನ ಪ್ರೀತಿಯ' ಚಿತ್ರದಲ್ಲಿ ಕಥೆ ಇತ್ತು, ಕೆಲವು ಒಳ್ಳೆ ಹಾಡುಗಳೂ ಇದ್ದವು. ಆದರೆ ಕುಡಿತಕ್ಕೆ ದಾಸನಾಗುವ ಯುವಕನೊಬ್ಬನ ಕಥೆಯನ್ನು ಹೊಂದಿದ್ದರಿಂದ ಪ್ರೇಕ್ಷಕರು ಅದನ್ನು ತಿರಸ್ಕರಿಸಿದ್ದರು. ಆ ಚಿತ್ರವನ್ನು ಸ್ವತಃ ಸೂರಿಯೇ ನಿರ್ಮಿಸಿದ್ದರಿಂದ 'ದುನಿಯಾ'ದಿಂದ ಅವರಿಗೆ ಬಂದಿದ್ದ ಒಂದಷ್ಟು ಹಣವೂ ಹೋಗಿ ಸೂರಿ ಕೈಸುಟ್ಟುಕೊಂಡಿದ್ದರು. ನಂತರ ಬಂದ 'ಜಂಗ್ಲಿ'ಯ ಕಥೆ ಸುಮಾರಾಗಿದ್ದರೂ ಅಷ್ಟೊತ್ತಿಗಾಗಲೇ ನಟ ವಿಜಯ್ ಹೀರೋ ಆಗಿದ್ದ ಮತ್ತು ಆ ಚಿತ್ರದ 'ಹಳೇ ಪಾತ್ರೆ' ಹಾಡು ಹಿಟ್ ಆಗಿತ್ತು. ಜೊತೆಗೆ ನಿರೂಪಣೆ, ಕ್ಯಾಮೆರಾ ವರ್ಕ್, ಹಾಡುಗಳ ಪಾಪ್ಯುಲಾರಿಟಿಯಿಂದಾಗಿ ಆ ಸಿನಿಮಾ ಗೆದ್ದಿತ್ತು.

ಈ ಬಾರಿ ಸೂರಿ ಮತ್ತು ಪುನೀತ್ ಜೊತೆಗೂಡಿದ್ದರಿಂದ ಸೂರಿಯ ನಾಲ್ಕನೇ ಸಿನಿಮಾ 'ಜಾಕಿ'ಯ ಬಗ್ಗೆ ಪ್ರೇಕ್ಷಕರು ಮತ್ತು ಇಂಡಸ್ಟ್ರಿಯಲ್ಲಿ ಕುತೂಹಲ ಹೆಚ್ಚಾಗಿದೆ. ಹಿಂದೆ ವಿಜಯ್ ಎಂಬ ಸೈಡ್ ಆಕ್ಟರ್‌ನನ್ನು ಮೇನ್‌ಸ್ಟ್ರೀಮಿಗೆ ತಂದಿದ್ದ, ಶ್ರೀನಗರ ಕಿಟ್ಟಿ ಎಂಬ ಯುವಕನನ್ನು ಇಟ್ಟುಕೊಂಡು ಹೊಸ ಪ್ರಯೋಗ ಮಾಡಿದ್ದ ಸೂರಿ ಒಬ್ಬ ಎಸ್ಟಾಬ್ಲಿಷ್ ಆಗಿರುವ ನಟನೊಂದಿಗೆ ಕೆಲಸ ಮಾಡಿರುವುದು ಇದೇ ಮೊದಲು. ಆದ್ದರಿಂದ ಒಬ್ಬ ಸ್ಟಾರ್ ನಟನೊಂದಿಗೆ ಸೂರಿ ನಿರ್ದೇಶನ ಹೇಗಿರುತ್ತೆ ಎಂಬುದೂ ಹಲವರ ಕ್ಯೂರಿಯಾಸಿಟಿಯಾಗಿದೆ.

ಪುನೀತ್ ರಾಜ್‌ಕುಮಾರ್‌ಗೆ ಕನ್ನಡ ಚಿತ್ರರಂಗದಲ್ಲಿ ತಮ್ಮದೇ ಆದ ಇಮೇಜ್ ಇದೆ, ಸ್ಟಾರ್‌ಗಿರಿಯಿದೆ, ಅಭಿಮಾನಿಗಳಿದ್ದಾರೆ. ಹೀಗಾಗಿ ಪುನೀತ್‌ರನ್ನು ತೆರೆಯ ಮೇಲೆ ಹೇಗೇಗೋ ತೋರಿಸಿದರೆ ಅದು ನಡೆಯುವುದಿಲ್ಲ. ಅಂತಹ ಪ್ರಯೋಗ ಮಾಡಿದ ನಿರ್ದೇಶಕ ಪ್ರೇಮ್ 'ರಾಜ್' ಸಿನಿಮಾವನ್ನು ಎಕ್ಕಾ ಎಬ್ಬಿಸಿದ್ದರು. ಹಾಗೆಯೇ ಇತ್ತೀಚೆಗೆ ಪುನೀತ್‌ರ ಇಮೇಜನ್ನು ಬದಿಗೊತ್ತಿ ಅವರನ್ನು ಪ್ರಾಮಾಣಿಕ ಮತ್ತು ದಿಟ್ಟ ಅಧಿಕಾರಿಯಾಗಿ ತೋರಿಸಿದ 'ಪೃಥ್ವಿ' ಒಂದು ಉತ್ತಮ ಚಿತ್ರವಾಗಿದ್ದರೂ ಪುನೀತ್ ಅವರ ಕಟ್ಟಾ ಅಭಿಮಾನಿಗಳು ಅದನ್ನು ಸ್ವೀಕರಿಸಲಿಲ್ಲವಾದ್ದರಿಂದ ಆ ಚಿತ್ರವೂ ಬಾಕ್ಸಾಫೀಸಿನಲ್ಲಿ ಸೊಂಟ ಮುರಿದುಕೊಂಡಿತು.

ಹೀಗಾಗಿ ಪುನೀತ್ ಅಭಿಮಾನಿಗಳು ಒಪ್ಪುವಂತಹ, ವಜ್ರೇಶ್ವರಿ ಸಂಸ್ಥೆಯ ಇಮೇಜಿಗೆ ಸೂಟ್ ಆಗುವಂತಹ, ಮನೆಮಂದಿಯೆಲ್ಲ ಕೂತು ನೋಡುವಂತಹ ಹಿಟ್ ಚಿತ್ರವೊಂದನ್ನು ತಯಾರಿಸುವ ಜವಾಬ್ದಾರಿ ಸೂರಿಯ ಮೇಲಿತ್ತು. ಅವರ ಪ್ರಕಾರ ಈ ಎಲ್ಲ ನಿಟ್ಟಿನಲ್ಲಿ ಅವರು ಯಶಸ್ವಿಯಾಗಿದ್ದಾರೆ. ಅದು ಎಷ್ಟು ಸರಿ ಎಂಬುದನ್ನು ಚಿತ್ರದ ಬಾಕ್ಸ್ ಆಫೀಸ್ ಗಳಿಕೆಯಿಂದ ಮಾತ್ರ ನೋಡಬಹುದು.

ಒಂದಂತೂ ಸತ್ಯ: ಸೂರಿ ತಮ್ಮ ಹಿಂದಿನ ಚಿತ್ರಗಳಂತೆ 'ಜಾಕಿ'ಯಲ್ಲೂ ರಾನೆಸ್ ಅನ್ನೇ ಮುಖ್ಯವಾಗಿರಿಸಿಕೊಂಡಿದ್ದಾರೆ. ಆದರೆ ಹಿಂದಿನಂತೆ ಕೇವಲ ಸಿಟಿ ಮಾರ್ಕೆಟ್ಟು, ಮೆಜೆಸ್ಟಿಕ್ಕು, ಫ್ಲೈಓವರುಗಳ ಮೇಲೆ ಕೆಳಗೆ ಚಿತ್ರೀಕರಣ ಮಾಡುತ್ತಿದ್ದ ಸೂರಿಗೆ ಈಬಾರಿ ಹಾಗೆಯೇ ಮಾಡಿ ಮುಗಿಸುವುದು ಸುಲಭವಾಗಿರಲಿಲ್ಲ. 'ದುನಿಯಾ' ಸಿನಿಮಾ ಮಾಡುವಾಗ ವಿಜಯ್ ಯಾರೆಂದೇ ಜನರಿಗೆ ಗೊತ್ತಿರಲಿಲ್ಲ. ಹೀಗಾಗಿ ಬೆಂಗಳೂರಿನ ಹಾದಿಬೀದಿಯಲ್ಲೇ ಆ ಸಿನಿಮಾದ ಸಂಪೂರ್ಣ ಚಿತ್ರೀಕರಣ ಮುಗಿದುಹೋಗಿತ್ತು.

ಆದರೆ ಪುನೀತ್‌ರಂಥ ಪವರ್‌ಸ್ಟಾರ್‌ನನ್ನು ಇಟ್ಟುಕೊಂಡು ಪಬ್ಲಿಕ್ ಏರಿಯಾಗಳಲ್ಲಿ ಶೂಟಿಂಗ್ ಮಾಡುವುದು ಯಮಯಾತನೆಯ ಕೆಲಸ. ಹೀಗಾಗಿ ಅಂಥ ಸಾಹಸಕ್ಕೆ ಸೂರಿ ಈ ಬಾರಿ ಕೈಹಾಕಲಿಲ್ಲ. 'ಜಾಕಿ' ಸಿನಿಮಾಗೆ ಬೇಕಿರುವ ಎಲ್ಲ ಲೊಕೇಶನ್‌ಗಳ ಸೆಟ್‌ಗಳನ್ನು ಹಾಕಿಸಿ

▶▶ 19

ಭಾವನಾ ಜಾಕಿ ಪಕ್ಕ ಕ್ವೀನ್!



ಪವರ್‌ಸ್ಟಾರ್ ಪುನೀತ್ ರಾಜ್‌ಕುಮಾರ್ ಚಿತ್ರಕ್ಕೆ ನಾಯಕಿಯಾಗುವುದೆಂದರೆ ಅದು ಅದೃಷ್ಟವೇ ಸರಿ. ಪುನೀತ್ ಅಭಿನಯದ ಮೊದಲ ಚಿತ್ರಗಳಲ್ಲಿ ಅಪ್ಪಟ ಕನ್ನಡತಿಯಾರಾದ ರಕ್ಷಿತಾ ಮತ್ತು ರಮ್ಯ ನಟಿಸಿದ್ದರೆ ಅವರ ಆನಂತರ ಚಿತ್ರಗಳಿಗೆ ಪರಭಾಷೆಯಿಂದಲೇ ನಾಯಕಿಯರನ್ನು ಕರೆತರಲಾಗಿದೆ. ಅದರಲ್ಲೂ ಮಲಯಾಳಿ ಬೆಡಗಿಯರಿಗೇ ಅಗ್ರಸ್ಥಾನ ನೀಡಲಾಗಿದೆ. ಈಗಾಗಲೇ ಮೀರಾ ಜಾಸ್ಮಿನ್ ಮತ್ತು ಪಾರ್ವತಿ ಮೆನನ್‌ರಂಥ ಮಲೆಯಾಳಿ ಬೆಡಗಿಯರು ಪುನೀತ್‌ರೊಂದಿಗೆ ಎರಡೆರಡು ಚಿತ್ರಗಳಲ್ಲಿ ನಾಯಕಿಯರಾಗಿ ನಟಿಸಿದ್ದಾರೆ. ಇನ್ನು ನಟಿ ಪ್ರಿಯಾಮಣಿ ಹುಟ್ಟಿ ಬೆಳೆದಿದ್ದೆಲ್ಲಾ ಬೆಂಗಳೂರಿನಲ್ಲೇ ಆದರೂ ಆಕೆಯ ಮೂಲ ಕೂಡಾ ಕೇರಳವೇ ಆಗಿದೆ.

ಈ ಬಾರಿ 'ಜಾಕಿ'ಯಲ್ಲೂ ಮತ್ತೊಬ್ಬಳು ಮಲೆಯಾಳಿ ಬೆಡಗಿಯೇ ಪುನೀತ್‌ಗೆ ನಾಯಕಿಯಾಗಿದ್ದಾಳೆ. ಆಕೆಯ ಹೆಸರು ಭಾವನಾ.

ಮಲೆಯಾಳಂನ ಸಿನಿಮಾ ಛಾಯಾಗ್ರಾಹಕ ಬಾಲಚಂದ್ರನ್ ಎಂಬುವರ ಮಗಳಾದ ಭಾವನಾ ಪಿಯುಸಿ ಮೊದಲ ವರ್ಷದಲ್ಲಿದ್ದಾಗಲೇ ನಾಯಕನಟಿಯಾಗಿ ಮಲೆಯಾಳಂ ಚಿತ್ರರಂಗವನ್ನು ಪ್ರವೇಶಿಸಿದಳು. ಈಕೆ ನಟಿಸಿದ ಮೊದಲ ಚಿತ್ರ 'ನಮ್ಮಲ್'. ಈಕೆ ನಟಿಸಿದ ಮೊದಲ ಚಿತ್ರಕ್ಕೇ ಕೇರಳ ರಾಜ್ಯ ಪ್ರಶಸ್ತಿ ದೊರಕಿಬಿಟ್ಟಿತು. ಅಂದರೆ ಈಕೆಯ ವೃತ್ತಿ ಜೀವನದ ಆರಂಭವೇ ಉಜ್ವಲವಾಗಿತ್ತು.

ನಂತರ ಮಲೆಯಾಳಂನ ಕ್ರೋನಿಕ್ ಬ್ಯಾಚುಲರ್, ತಿಲಕ್ಕಮ್, ಸಿಐಡಿ ಮೂಸಾ, ಸ್ವಪ್ನಕೂಡ್, ಇವರ್, ರನ್‌ವೇ, ಯೂತ್ ಫೆಸ್ಟಿವಲ್, ಅಮೃತಮ್, ದೈವನಾಮತ್ತಿಲ್ ಸೇರಿದಂತೆ ಅನೇಕ ಚಿತ್ರಗಳಲ್ಲಿ ನಟಿಸಿದಳು. ಈ ನಡುವೆಯೇ ಚಿತ್ತಿರಮ್ ಪೇಸುದದಿ, ನಾನ್ ಕಡವುಳ್, ವೆಗಿಲ್‌ನಂಥ ಸೂಪರ್ ಹಿಟ್ ತಮಿಳು ಚಿತ್ರಗಳಲ್ಲೂ ನಟಿಸಿ ಎರಡೂ ಭಾಷೆಗಳಲ್ಲಿ ಸೈ ಎನಿಸಿಕೊಂಡಳು.

ಸದ್ಯ ಕೇರಳದಲ್ಲಿರುವ ನಾಯಕನಟಿಯರಲ್ಲೇ ಅತಿ ಹೆಚ್ಚು ಸುಂದರಿ ಎಂಬ ಹೆಗ್ಗಳಿಕೆಗೂ ಪಾತ್ರಳಾಗಿರುವ ಭಾವನಾ ಈಗ ಕನ್ನಡದಲ್ಲಿ 'ಜಾಕಿ'ಯ ಬೆನ್ನೇರಿ ಬಂದಿದ್ದಾಳೆ. ಸೂರಿಯ ನಿರ್ದೇಶನ, ಪುನೀತ್ ಜೊತೆ ನಟನೆ ಎರಡನ್ನೂ ತೂಗಿಸಬೇಕೆಂದರೆ ಅದು ಪ್ರತಿಭಾವಂತ ನಟಿಗೆ ಮಾತ್ರ ಸಾಧ್ಯ. ಭಾವನಾ ಈ ನಿಟ್ಟಿನಲ್ಲಿ ಗೆದ್ದಿದ್ದಾಳೆ.

ರ್ನಾಟಕದ ರಾಜಕೀಯ ಹೇಗೆ ದಿನದಿಂದ ದಿನಕ್ಕೆ ರುತ್ತಿದೆಯೋ ಅದೇರೀತಿ ಕನ್ನಡ ಚಿತ್ರರಂಗದ ಕೀಯ ಕೂಡಾ ಕ್ಲೈಮ್ಯಾಕ್ಸ್ ತಲುಪಿದೆ. ಕಳೆದ ವಾರ ದ ಹೊಸ ಚಿತ್ರಗಳ ಸುದ್ದಿ ಬಗ್ಗೆ ಪ್ರಸ್ತಾಪಿಸಿದ್ದೆವು. ಈ ಈ ಶುಕ್ರವಾರದಂದು ನಡೆಯಲಿರುವ 'ಮಿನಿ ಸಮರ'ದ ಬಗ್ಗೆ ಒಂದಿಷ್ಟು ಡಿಟೇಲ್ಸ್‌ಗಳು ಇಲ್ಲಿವೆ. ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ನಟಿಸಿರುವ ' ಮತ್ತು ಕಿಚ್ಚ ಸುದೀಪ್ ನಟಿಸಿರುವ 'ಕಿಚ್ಚ-ಹುಚ್ಚ' ದಿನ ತೆರೆಕಾಣುತ್ತಿರುವುದು ಗಾಂಧಿನಗರದ ಮಟ್ಟಿಗೆ ಯೂರಪ್ಪ ತನ್ನ ಕುರ್ಚಿ ಉಳಿಸಿಕೊಂಡಿದ್ದಕ್ಕಿಂತಲೂ ತ್ತ ಸುದ್ದಿ. ಆದರೆ ಈ ಇಬ್ಬರೂ ತಾರೆಯರ ಚಿತ್ರಗಳು ದಿನ ತೆರೆ ಕಾಣಬಾರದು ಎಂದು ತೆರೆಮರೆಯಲ್ಲಿ ಕ ಹಿರಿಯರು, ಹಿತೈಷಿಗಳು ಮತ್ತು ಚೇಂಬರ್ ಧಿಕಾರಿಗಳು ಪ್ರಯತ್ನಿಸಿದ್ದರು. ದುರದೃಷ್ಟವಶಾತ್ ಲ್ಲರ ಈ ಎಲ್ಲಾ ಸಂಧಾನ ಸೂತ್ರಗಳು ವಿಫಲವಾಗಿ ಈ ಎರಡೂ ಚಿತ್ರಗಳು ಶುಕ್ರವಾರದಂದು ತೆರೆಕಂಡು ಕರ 'ವಿಶ್ವಾಸಮತ'ವನ್ನು ಕೇಳಲಿವೆ.

ಈಗ ಪ್ರೇಕ್ಷಕರ 'ವಿಶ್ವಾಸಮತ'ವನ್ನು 'ಜಾಕಿ' ಗಳಿಸು ೋ ಅಥವಾ 'ಕಿಚ್ಚ-ಹುಚ್ಚ' ಪಡೆಯುತ್ತಾನೋ ಎಂಬುದ ೂ ಈ ಮಿನಿ ಸಮರದಿಂದಾಗಿ ಗಾಂಧಿನಗರದ ಯ ಮೇಲೆ ದುಷ್ಪರಿಣಾಮ ಆಗುವುದಂತೂ ಗ್ಯಾರಂಟಿ ದು ಮುಖ್ಯ.

ರಾಜಕೀಯದಂತೆ ಚಿತ್ರರಂಗದಲ್ಲೂ 'ನಂಬರ್ ಗೇಮ್' ತ್ತರವಾದ ಸ್ಥಾನವನ್ನು ಪಡೆಯುತ್ತದೆ. ಅಂದರೆ 'ಜಾಕಿ' ಎಷ್ಟು ಥಿಯೇಟರ್‌ಗಳಲ್ಲಿ ಬಿಡುಗಡೆ ಮಾಡಲು ಪಕ ರಾಘವೇಂದ್ರ ರಾಜ್‌ಕುಮಾರ್ ತಯಾರಾಗಿದ್ದಾರೆ? ವಿರುದ್ಧವಾಗಿ 'ಕಿಚ್ಚ-ಹುಚ್ಚ' ಚಿತ್ರದ ನಿರ್ಮಾಪಕರಾದ ಬ್ಬರಿ ಮಂಜು ಮತ್ತು ಮಾರ್ಕ್ ಬಾಲಾಜಿ ಯಾವ ದ 'ರಣತಂತ್ರ'ವನ್ನು ಹೆಣೆದಿದ್ದಾರೆ?

ರಾಘವೇಂದ್ರ ರಾಜ್‌ಕುಮಾರ್ 'ಜಾಕಿ' ಚಿತ್ರವನ್ನು

'ಜಾಕಿ' ವರ್ಸಸ್ 'ಕಿಚ್ಚ-ಹುಚ್ಚ' ಮಿನಿ ಸಮರವನ್ನು ಗಾಂಧಿನಗರದ ಜನ "ಸ್ವಮೇಕ್ ವರ್ಸಸ್ ರಿಮೇಕ್ ಕದನ" ಎಂದು ಘೋಷಿಸಿದ್ದಾರೆ. ಯಾಕೆಂದರೆ ಸೂರಿ ನಿರ್ದೇಶನದ 'ಜಾಕಿ' ಚಿತ್ರ ಸಂಪೂರ್ಣವಾಗಿ ಸೂರಿಯ ಸ್ವಂತ ಕಲ್ಪನೆಯ ಚಿತ್ರ. ಆದರೆ ಗುರುದತ್ ನಿರ್ದೇಶನದ 'ಕಿಚ್ಚ-ಹುಚ್ಚ' ತಮಿಳಿನ ಯಶಸ್ವಿ ಚಿತ್ರವಾದ 'ಚಿತ್ರಂ ಪೇಸುದಡಿ'ಯ ಜೆರಾಕ್ಸ್ ಕಾಪಿ. ಆ ಚಿತ್ರ 20 ವರ್ಷಗಳ ಹಿಂದೆ ತಮಿಳಿನಲ್ಲಿ ಜಯಭೇರಿ ಬಾರಿಸಿತ್ತು. ಹೀಗಾಗಿ ಈ ಚಿತ್ರಗಳ ಸೋಲು-ಗೆಲುವು ಒಂದು ರೀತಿಯಲ್ಲಿ ಸ್ವಮೇಕ್ ಮತ್ತು ರಿಮೇಕ್ ಚಿತ್ರಗಳ ನಡುವಿನ ಕದನವಿದ್ದಂತೆ.

ಶೆಣೈ
shenoylankesh@gmail.com

'ಜಾಕಿ' ಚಿತ್ರದ ಹೈಲೈಟ್ ಅಂದರೆ ಇದು ರಾಜ್ ಸಂಸ್ಥೆಯ ಅದ್ದೂರಿ ಎಂಬುದು. ಇದರ ಜೊತೆಗೆ ಗಾಂಧಿನಗರದ ಸೂಪರ್ ಸ್ಟಾರ್ ನಿರ್ದೇಶಕರುಗಳಲ್ಲಿ ಒಬ್ಬರಾದ 'ದುನಿಯಾ' ಸೂರಿ ಈ ಚಿತ್ರದ ನಿರ್ದೇಶಕ.


ಮಂಜು. "ಇದರ ಜೊತೆಜೊತೆಗೆ ಒಳ್ಳೆಯ ಕಥೆ ಕೂಡಾ ಇರುವುದರಿಂದ ಚಿತ್ರ ಕುಟುಂಬ ಸದಸ್ಯರ ಸಮೇತ ನೋಡುವಂತಿದೆ. ಈ ಚಿತ್ರದಲ್ಲಿ ಸುದೀಪ್ ಅತ್ಯದ್ಭುತವಾಗಿ ನಟಿಸಿದ್ದಾರೆ" ಎಂದು ಹೇಳಲು ಇನ್ನೊಬ್ಬ ನಿರ್ಮಾಪಕರಾದ ಮಾರ್ಕ್ ಬಾಲಾಜಿ ಮರೆಯುವುದಿಲ್ಲ. ಇದೇ ಮಾತನ್ನು ನಾಯಕ ನಟ ಸುದೀಪ್ ಕೂಡಾ ಹೇಳುತ್ತಾರೆ. "ಈ ಚಿತ್ರದ ಕಥಾವಸ್ತು ಮತ್ತು ಪಾತ್ರ ಪೋಷಣೆ ಚೆನ್ನಾಗಿ ಮೂಡಿಬಂದಿರುವುದರಿಂದ ನನಗೆ ಈ ಚಿತ್ರದ ನಟನೆ ಇಷ್ಟವಾಗಿದೆ" ಎನ್ನುತ್ತಾರೆ ಸುದೀಪ್. ಈ ಚಿತ್ರದ ನಿರ್ದೇಶಕರು ಗುರುದತ್.


'ಕಿಚ್ಚ-ಹುಚ್ಚ' ಎರಡು ವರ್ಷಗಳ ಹಿಂದೆ ಆರಂಭವಾದ ಪ್ರಾಜೆಕ್ಟ್ ಆದ್ದರಿಂದ ಗಾಂಧಿನಗರದ ಹಂಚಿಕೆದಾರರಿಗೆ ಈ ಚಿತ್ರದ ಬಗ್ಗೆ ಅಷ್ಟೇನೂ ಉತ್ಸಾಹವಿಲ್ಲ. ಆದರೆ ಈ ಮಾತನ್ನು ಮಂಜು ಸಂಪೂರ್ಣವಾಗಿ ತಳ್ಳಿಹಾಕುತ್ತಾರೆ. "ಈ ಪ್ರಾಜೆಕ್ಟ್ ಖಂಡಿತವಾಗಿಯೂ ಚಿನ್ನದ ಮೊಟ್ಟೆ ಇಡುತ್ತದೆ. ಅದಕ್ಕಾಗಿ ನಾನೇ ವ್ಯಾಪಾರ ಮಾಡಿಲ್ಲ" ಎಂದು ಅವರು ಹೇಳುತ್ತಾರೆ. ಆದರೆ ಸೂರಿ ಪುನೀತ್ ಜೋಡಿಯ 'ಜಾಕಿ' ಚಿತ್ರವನ್ನು ಹಂಚಿಕೆದಾರರು ಒಂದಕ್ಕೆರಡು ಬೆಲೆ ಕೊಟ್ಟು ಖರೀದಿಸಿದ್ದಾರೆ. ಚಿತ್ರದ ನಿರ್ಮಾಪಕರಾದ ರಾಘವೇಂದ್ರ ರಾಜ್‌ಕುಮಾರ್ ಈಗಾಗಲೇ ಎಲ್ಲಾ ವಲಯಗಳನ್ನು ಮಾರಾಟ ಮಾಡಿ ಸುಮಾರು 5 ಕೋಟಿ ರೂ.ಗಳಷ್ಟು ಲಾಭವನ್ನು ಗಳಿಸಿದ್ದಾರೆ ಎಂಬ ಮಾತು ಇದೆ. ಚಿತ್ರದ ಲಾಭದ ಬಗ್ಗೆ ನಿಖರವಾಗಿ ಮಾತನಾಡಲು ನಿರಾಕರಿಸಿದ ರಾಘಣ್ಣ "ಮಾರಾಟ ಮಾಡಿದ್ದು ನಿಜ, ಲಾಭ ಬಂದಿದ್ದೂ ನಿಜ. ಆದರೆ ಚಿತ್ರವನ್ನು ಖರೀದಿಸಿದವರು ಲಾಭ ಮಾಡಿದ ನಂತರವೇ ನಮಗೆ ಸಮಾಧಾನವಾಗುತ್ತದೆ" ಎಂದರು.


'ಕಿಚ್ಚ-ಹುಚ್ಚ'ನ ಬಿಡುಗಡೆಗೆ ಮುನ್ನ ನಿರ್ಮಾಪಕ ಕೊಬ್ಬರಿ ಮಂಜು ಅವರಿಗೆ ಮತ್ತೊಂದು ಆಘಾತ ಕಾದಿತ್ತು. ಅದೇನೆಂದರೆ ಮುಂದಿನವಾರವೇ ಸುದೀಪ್ ನಟಿಸಿರುವ ಎಸ್.ನಾರಾಯಣ್ ನಿರ್ದೇಶನದ 'ವೀರ ಪರಂಪರೆ' ಚಿತ್ರ ಕೂಡಾ ತೆರೆಕಾಣಲಿದೆ ಎಂಬುದು. ನಾರಾಯಣ್ ಸ್ವತಃ ಈ ಚಿತ್ರದ ನಿರ್ಮಾಪಕರೂ ಹೌದು. ಶಿಸ್ತಿನ ಸಿಪಾಯಿಯೆಂದೇ ಗಾಂಧಿನಗರದಲ್ಲಿ ಹೆಸರು ಪಡೆದಿರುವ ನಾರಾಯಣ್ ಸಾಧಾರಣವಾಗಿ ಚಿತ್ರದ ಮುಹೂರ್ತದ ದಿನದಂದೇ ಬಿಡುಗಡೆಯ ದಿನವನ್ನು ಫಿಕ್ಸ್ ಮಾಡಿ ಅದರಂತೆ ಬಿಡುಗಡೆ ಮಾಡುತ್ತಾರೆ. ಹೀಗಾಗಿ "ಯಾವುದೇ ಕಾರಣಕ್ಕೂ ನಾನು ನನ್ನ ಚಿತ್ರ 'ವೀರಪರಂಪರೆ'ಯ ಬಿಡುಗಡೆಯನ್ನು ಮುಂದೆ ಹಾಕುವುದಿಲ್ಲ" ಎಂದು ನಾರಾಯಣ್ ಪಟ್ಟು ಹಿಡಿದು ಕೂತುಕೊಂಡಿದ್ದರು. ಕೊನೆಗೆ 'ಕಿಚ್ಚ-ಹುಚ್ಚ', 'ವೀರಪರಂಪರೆ' ಚಿತ್ರಗಳೆರಡಕ್ಕೂ ಫೈನಾನ್ಸ್ ಮಾಡಿರುವ ಪಾಷಾ ಮಧ್ಯಸ್ಥಿಕೆ ವಹಿಸಿ ನಾರಾಯಣ್ ಮನವೊಲಿಸಿದರು. ಪಾಷಾ ಅವರ ಸಂಧಾನದಂತೆ 'ವೀರ ಪರಂಪರೆ' ಮೂರು ವಾರಗಳ ನಂತರ ಬಿಡುಗಡೆಯಾಗಲಿದೆ. ಅಂದರೆ ಅಷ್ಟೊತ್ತಿಗಾಗಲೇ 'ಕಿಚ್ಚ-ಹುಚ್ಚ' ತನ್ನ ಬಂಡವಾಳವನ್ನು ಹಿಂತೆಗೆದುಕೊಳ್ಳಬೇಕಾಗಿದೆ. ಕನಿಷ್ಠ ಮೂರು ವಾರವಾದರೂ ಉಸಿರಾಡಲು ಸಮಯ ಸಿಕ್ಕಿತ್ತಲ್ಲ ಎಂದು ನಿರ್ಮಾಪಕ ಮಂಜು ಮತ್ತು ಮಾರ್ಕ್ ಬಾಲಾಜಿ ಸಮಾಧಾನಪಟ್ಟುಕೊಂಡಿದ್ದಾರೆ.

ಈಗಾಗಲೇ ಕರ್ನಾಟಕದಲ್ಲಿ ರಜನೀಕಾಂತ್ ನಟಿಸಿರುವ 'ಯಂದಿರನ್' ಚಿತ್ರ ಚೇಂಬರ್‌ನ ನಿಯಮಗಳನ್ನು ಮೀರಿ 60ಕ್ಕೂ ಹೆಚ್ಚು ಥಿಯೇಟರ್‌ಗಳಲ್ಲಿ ತೆರೆಕಂಡಿದೆ. ಅಷ್ಟೇ

▶▶ 19




ಕೊಬ್ಬರಿಮಂಜು




ಜಾಕಿ V/s ಕಿಚ್ಚ
ಯಾವುದಿಲ್ಲಿ ಅಂದರ್ ಯಾವುದಿಲ್ಲಿ ಬಾಹರ್

ದ್ಯಂತ 120ಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ಬಿಡುಗಡೆ ಲು ಎಲ್ಲಾ ತಯಾರಿಗಳನ್ನು ನಡೆಸಿದ್ದಾರೆ. ಬೆಂಗಳೂರು ವಲ್ಲೇ 35ಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ 'ಜಾಕಿ' ಣಲಿದ್ದಾನೆ. ರಾಜ್‌ಕುಮಾರ್ ಸಂಸ್ಥೆಯ ಇತಿಹಾಸದಲ್ಲಿ ನಿರ್ಮಾಣದ ಚಿತ್ರವೊಂದು ನೂರಕ್ಕೂ ಹೆಚ್ಚು ಮಂದಿರಗಳಲ್ಲಿ ಬಿಡುಗಡೆಯಾಗುತ್ತಿರುವುದು ಇದೇ ಲ ಬಾರಿ!

ದಕ್ಕೆ ನಿರ್ಮಾಪಕ ಮಂಜು 'ಕಿಚ್ಚ-ಹುಚ್ಚ'ನ ನಂಬರ್ ಡಿಟೇಲ್ಸ್ ಕೊಟ್ಟಿದ್ದು ಹೀಗಿದೆ: "ನಮ್ಮ ಚಿತ್ರವನ್ನು ಳೂರಿನಲ್ಲಿ ಕಡಿಮೆ ಎಂದರೂ 20-22 ಥಿಯೇಟರ್ ಬಿಡುಗಡೆ ಮಾಡಲು ನಿರ್ಧರಿಸಿದ್ದೇವೆ. ಹಾಗೆಯೇ ದ್ಯಂತ ಕನಿಷ್ಠವೆಂದರೂ 55 ರಿಂದ 60 ಥಿಯೇಟರ್ ತೆರೆ ಕಾಣಿಸಲು ವ್ಯವಸ್ಥೆ ಮಾಡಿದ್ದೇವೆ."

ಈ ಅಂಕಿ ಅಂಶಗಳ ಆಧಾರದ ಮೇಲೆ ಹೇಳುವು ದೆ 'ಜಾಕಿ' ಮೊದಲ ಸುತ್ತಿನಲ್ಲಿ ಜಯಗಳಿಸುವ ಹೆಚ್ಚು ಕಾಣಿಸುತ್ತಿದೆ. ಒಂದು ಅಂದಾಜಿನ ಪ್ರಕಾರ ಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ 'ಜಾಕಿ' ತೆರೆಕಂಡರೆ ಸುಮಾರು 4 ಕೋಟಿ ರೂ.ಗಳನ್ನು ಗಳಿಸಬಹುದು. 'ಕಿಚ್ಚ-ಹುಚ್ಚ' ಸುಮಾರು ಒಂದೂಮುಕ್ಕಾಲು ಕೋ. ಗಳಿಸಬಹುದು. ಇದು ಮೊದಲ ವಾರದ ಅಂದಾಜು ಲೆಕ್ಕಾಚಾರ. ಹಾಗಂತ 'ಜಾಕಿ' ಗೆದ್ದ ಬಿದ್ದ ಎಂದರ್ಥವಲ್ಲ. ಮೊದಲವಾರದ ನಂತರ ಗುಣಮಟ್ಟವನ್ನು ನೋಡಿಯೇ ಪ್ರೇಕ್ಷಕರು ಚಿತ್ರ ರಕ್ಕೆ ಬರುತ್ತಾರೆ. ಹೀಗಾಗಿ ಎರಡನೇ ವಾರ ಈ ಳ ಗಳಿಕೆಯಲ್ಲಿ ಏರುಪೇರು ಆಗುವ ಸಾಧ್ಯತೆ ಇದೆ.


ಹರಿಕೃಷ್ಣ

ಆದ್ದರಿಂದ ಪುನೀತ್-ಸೂರಿ ಜೋಡಿ ಪ್ರೇಕ್ಷಕರನ್ನು ಮೋಡಿ ಮಾಡಿದರೆ ಈ ಚಿತ್ರ ಜಯಭೇರಿ ಬಾರಿಸುವುದರಲ್ಲಿ ಸಂಶಯವೇ ಇಲ್ಲ. ಇದೇ ಮೊದಲ ಬಾರಿಗೆ ನಮಿಬಿಯಾ ಮತ್ತು ಇಟಲಿಯಲ್ಲಿ ಈ ಚಿತ್ರದ ಹಾಡುಗಳನ್ನು ಚಿತ್ರೀಕರಿಸಲಾಗಿದೆ. ಯೋಗರಾಜ್ ಭಟ್ಟರು ಬರೆದ ಹಾಡುಗಳ ಸಾಲುಗಳು ಈಗಾಗಲೇ ಪಡ್ಡೆ ಹುಡುಗರ ಬಾಯಲ್ಲಿ ನಲಿದಾಡುತ್ತಿರುವುದರಿಂದ ಚಿತ್ರಕ್ಕೆ ಬಿಡುಗಡೆಗೆ ಮುಂಚಿತವಾಗಿಯೂ ಸಾಕಷ್ಟು ಪ್ರಚಾರ ಸಿಕ್ಕಿದೆ.

ಇನ್ನು ಮಲೆಯಾಳಂ ಮತ್ತು ತಮಿಳು ಚಿತ್ರರಂಗದಲ್ಲಿ ದೊಡ್ಡ ಹೆಸರು ಮಾಡಿರುವ ಮಲೆಯಾಳಿ ಕುಟ್ಟಿ ಭಾವನಾ ಎಂಬ ಸುಂದರಿ ಈ ಚಿತ್ರದ ಮುಖಾಂತರ ಕನ್ನಡಕ್ಕೆ ಕಾಲಿಟ್ಟಿದ್ದಾಳೆ. ಈ ಹಿಂದೆ ಮಲೆಯಾಳಂನಿಂದ ಬಂದ ಶಿಲ್ಪಾ, ಮೀರಾ ಜಾಸ್ಮೀನ್, ಪಾರ್ವತಿ ಮೆನನ್ ಮತ್ತು ನವ್ಯ ನಾಯರ್ ತರಹದ ನಾಯಕಿಯರನ್ನು ಗಾಂಧಿನಗರದ ನಿರ್ಮಾಪಕರು ರತ್ನಗಂಬಳಿ ಹಾಸಿ ಸ್ವಾಗತಿಸಿರುವುದರಿಂದ ಈಕೆಯೂ ಕನ್ನಡ ಚಿತ್ರರಂಗದಲ್ಲಿ ನೆಲೆಯೂರುವ ಸಾಧ್ಯತೆಗಳಿವೆ.

'ಕಿಚ್ಚ-ಹುಚ್ಚ'ದ ವಿಶೇಷತೆಯೆಂದರೆ ಸುದೀಪ್ ಮತ್ತು ರಮ್ಯಾ ಜೋಡಿಯಾಗಿ ಮತ್ತೊಮ್ಮೆ ಕಾಣಿಸಿಕೊಳ್ಳುತ್ತಿರುವುದು. "ಈ ಚಿತ್ರದಲ್ಲಿ ಹಾಡು-ಫೈಟ್ಸ್-ರೋಮ್ಯಾನ್ಸ್‌ಗಳ ಒಳ್ಳೆಯ ಪ್ಯಾಕೇಜ್‌ಗೆ ಏನೂ ಮೋಸವಿಲ್ಲ" ಎನ್ನುತ್ತಾರೆ ನಿರ್ಮಾಪಕ

'ಜಾಕಿ' ಮತ್ತು 'ಕಿಚ್ಚ-ಹುಚ್ಚ' ಚಿತ್ರದ ಮಿನಿ ಸಮರದಲ್ಲಿ ಯಾವ ನಾಯಕ ಗೆಲ್ಲುತ್ತಾನೆ, ಯಾರು ಸೋಲುತ್ತಾನೆ ಎಂದು ಹೇಳುವುದು ಕಷ್ಟ. ಆದರೆ ಸಂಗೀತ ನಿರ್ದೇಶಕ ಹರಿಕೃಷ್ಣ ಅವರಿಗಂತೂ ಈ ಮಿನಿ ಸಮರದಲ್ಲಿ ಗೆಲುವು ಕಟ್ಟಿಟ್ಟ ಬುತ್ತಿ. ಯಾಕೆಂದರೆ ಎರಡೂ ಚಿತ್ರಗಳಿಗೆ ಹರಿಕೃಷ್ಣ ಅವರೇ ಸಂಗೀತ ನಿರ್ದೇಶಕ!

ಈಗಾಗಲೇ ಎರಡೂ ಚಿತ್ರಗಳ ಹಾಡುಗಳು ಜನಮನಗೆದ್ದಿರುವುದರಿಂದ ಒಂದು ರೀತಿಯಲ್ಲಿ ಪಂದ್ಯಾರಂಭವಾಗುವ ಮೊದಲೇ ಹರಿಕೃಷ್ಣ ಜಯಭೇರಿ ಬಾರಿಸಿದ್ದಾರೆ. 'ಜಾಕಿ' ಚಿತ್ರದ ಐದು ಹಾಡುಗಳನ್ನು ನಿರ್ದೇಶಕ ಸೂರಿ ತನ್ನ ಮಿತ್ರ ಮತ್ತು ಗುರುಗಳಾದ ಯೋಗರಾಜ್ ಭಟ್‌ರಿಂದ ಬರೆಸಿದ್ದಾರೆ. ಹಾಗೆಯೇ ಇದೆ ಭಟ್ಟರು 'ಕಿಚ್ಚ-ಹುಚ್ಚ'ನಿಗೂ ಒಂದು ಹಾಡನ್ನು ಬರೆದಿದ್ದಾರೆ. ಹೀಗಾಗಿ ಒಂದು ರೀತಿಯಲ್ಲಿ ಗೀತರಚನಕಾರರಾಗಿ ಯೋಗರಾಜ್ ಭಟ್ ಕೂಡ ಈಗಾಗಲೇ ಜನ ಗಳಿಸಿದ್ದಾರೆ ಎನ್ನಬಹುದು. ●

ಅನಾಚಾರಿಗಳ ವಾಮಾಚಾರ!

ಅಧಿಕಾರಕ್ಕೆ ಬಂದಂದಿನಿಂದಲೂ ಪ್ರಜಾಪ್ರಭುತ್ವ ಮೌಲ್ಯಗಳ ಮೇಲೆ ಅತ್ಯಾಚಾರ ನಡೆಸುತ್ತಲೇ ಬಂದ ಬಿಜೆಪಿ ಮಂದಿ ಅದರ ಪರಿಣಾಮಗಳನ್ನು ದಕ್ಕಿಸಿಕೊಳ್ಳಲು ವಾಮಾಚಾರದ ಮೊರೆ ಹೋಗಿದ್ದಾರೆ!



ವಿಶ್ವಾಸ ಮತಯಾಚನೆಯ ಮುನ್ನಾದಿನ ವಿಧಾನಸೌಧದೆದುರು ಬಿದ್ದಿದ್ದ ಕೋಳಿಯ ತಲೆ, ನಿಂಬೆ ಹಣ್ಣು ಮುಂತಾದವುಗಳು ಬಿಜೆಪಿ ಬುದ್ಧಿಯನ್ನು ಸಾರಿ ಹೇಳಿವೆ.


ತಾವು ಮಾಡಿದ ಹೇಸಿಗೆಯನ್ನು ಪರರ ಮೈಗೆ ಮೆತ್ತುವುದು ಯಡ್ಡಿ ಪಟಾಲಂಗೆ ಸಲೀಸಿನ ಸಂಗತಿ. ಪ್ರಸ್ತುತ ಈ ವಾಮಾಚಾರ ಪ್ರಕರಣವನ್ನೂ ಪ್ರತಿಪಕ್ಷಗಳ ತಲೆಗೆ ಕಟ್ಟಲೆತ್ನಿಸುತ್ತಿರುವುದು ಆಶ್ಚರ್ಯದ ಸಂಗತಿಯಲ್ಲ, ಆದರೆ ಇದು ಬಿಜೆಪಿ ಪ್ರಭೃತಿಗಳದೇ ಕೆಲಸವೆಂಬುದು ತಲೆಯಿರುವವರಿಗೆಲ್ಲ ಅರ್ಥವಾಗುವ ವಿಚಾರ!

ಗಮನಿಸಿ ನೋಡಿ, ವಿಧಾನಸೌಧದ ಸುತ್ತ ಬಿಗಿ ಪೊಲೀಸ್ ಬಂದೋಬಸ್ತ್ ಇತ್ತು. ಇಂಥದ್ದರಲ್ಲಿ ಪ್ರತಿಪಕ್ಷಗಳವರು ಖಾಕಿ ಕಣ್ಗಾವಲು ತಪ್ಪಿಸಿ ಈ ಕೆಲಸ ಮಾಡುವುದು ಕನಸಿನ ಮಾತು. ಆ ತಾಕತ್ತಿರುವುದು ಆಡಳಿತಗಾರರಿಗೆ ಮಾತ್ರ. ಮತ್ತೂ ಹೇಳಬೇಕೆಂದರೆ, ವಾಮಾಚಾರ, ಬುರುಡೆ ಜ್ಯೋತಿಷ್ಯವನ್ನೆಲ್ಲ ಮನಸಾರೆ ನಂಬುವ ಮಳ್ಳುತನ ಅತಿಯಾಗಿರುವುದು ಬಿಜೆಪಿ ಮಂದಿಗೆ ಮಾತ್ರ.

ಈ ಆಸಾಮಿ ಯಡಿಯೂರಪ್ಪ ಅದ್ಯಾವನೋ ತಲೆಕೆಟ್ಟವ ಹೇಳಿದನೆಂದು ವಿಧಾನಸೌಧದ ಕೆಲ ಪ್ರವೇಶದ್ವಾರಗಳನ್ನೇ ಬಂದ್ ಮಾಡಿಸುತ್ತಾರೆ. ಶೀರಾ ಕಾನೂನಿನ ಅರಿವಿಲ್ಲದ ಅಬ್ಬೇಪಾರಿಯಂತೆ ವಿಧಾನಸೌಧದೊಳಗೆ ಹೋಮ ಹವನ ನಡೆಸುತ್ತಾರೆ. ತೀರಾ ಸಣ್ಣಗೊಂದು ಬಂಡಾಯ ಹುಟ್ಟಿಕೊಂಡರೂ ದೇವಸ್ಥಾನಗಳಿಗೆ ರೌಂಡು ಹೊಡೆಯುತ್ತಾರೆ. ಇಂಥಾ ಆಸಾಮಿ ಹ್ಯಾಗಾದರೂ ಸರ್ಕಾರ ಉಳಿಸುವ ಧಾವಂತಕ್ಕೆ ಬಿದ್ದು ವಾಮಾಚಾರ ಮಾಡಿಸುವುದಿಲ್ಲವೆಂದರೆ ನಂಬಲಾಗುವುದಿಲ್ಲ.

ಯಡ್ಡಿಯ 'ವಾಮ'ಬುದ್ಧಿಗೆ ಆತ ಮುಖ್ಯಭೂಮಿಕೆಗೆ ಬಂದ ನಂತರದ ಅನೇಕ ಉದಾಹರಣೆಗಳನ್ನು ಕೊಡಬಹುದಾಗಿದೆ. ಜೆಡಿಎಸ್-ಬಿಜೆಪಿ ಸಮ್ಮಿಶ್ರ ಸರ್ಕಾರಾವಧಿಯಲ್ಲಿ ಮುಖ್ಯಮಂತ್ರಿಯಾದ ಯಡ್ಡಿ ಹನ್ನೊಂದು ದಿನಕ್ಕೇ ಉದುರಿಬಿದ್ದರಲ್ಲಾ? ಆಗ ಬೆಂಗಳೂರಲ್ಲಿ ನಿಂತ ಯಡ್ಡಿ 'ದೇವೇಗೌಡ್ರು ನನ್ನ ವಿರುದ್ಧ ಮಾಟ ಮಂತ್ರ ಮಾಡಿಸಿದ್ದಾರೆ. ಅದರಿಂದಾಗೇ ಹೀಗೆ ಸಂಕಷ್ಟಗಳು ಬರುತ್ತಿವೆ' ಅಂತೆಲ್ಲ ಬಡಬಡಿಸಿ ನಗೆಪಾಟಲಿಗೀಡಾಗಿದ್ದರು.

ಇದಾಗಿ ಎರಡೇ ದಿನಕ್ಕೆ ಮತ್ತೊಂದು ವಾಮಪುರಾಣ ಗರಿಬಿಚ್ಚಿಕೊಂಡಿತ್ತು. ಅದರ ಭೂಮಿಕೆ ಶಿಕಾರಿಪುರದ ಹೆಲಿಪ್ಯಾಡ್. ಭದ್ರಾಪುರದಲ್ಲಿರುವ ಈ ಹೆಲಿಪ್ಯಾಡ್‌ನಲ್ಲಿ ಆರೆಸ್ಸೆಸ್ ಚೆಡ್ಡಿಯೊಂದು ಅರೆಸುಟ್ಟ ಸ್ಥಿತಿಯಲ್ಲಿ ಪತ್ತೆಯಾಗಿ ಅದರ ಸುತ್ತ ಕೋಳಿ ತಲೆ, ಅರಿಶಿನ-ಕುಂಕುಮ, ನಿಂಬೆಹಣ್ಣುಗಳೆಲ್ಲ ಪ್ರತ್ಯಕ್ಷವಾಗಿದ್ದವು. ತಕ್ಷಣ ಜಿ.ಪಂ. ಸದಸ್ಯ ಹಾಲಪ್ಪ ಎಂಬಾತ 'ದೇವೇಗೌಡರು ಯಡಿಯೂರಪ್ಪನ ಚೆಡ್ಡಿ ಉಪಯೋಗಿಸಿ ಮಾಟ ಮಾಡಿಸಿದ್ದಾರೆ' ಅಂತ ಹುಯಿಲೆಬ್ಬಿಸಿದ್ದ!



ತೊಲಗುವುದೇ ಶನಿ?


ಈ ಬಗ್ಗೆ 'ಲಂಕೇಶ್' ಬೆನ್ನು ಬಿದ್ದು ತನಿಖಾ ವರದಿಯೊಂದನ್ನು ಮಾಡಿತ್ತು. ವಾಸ್ತವವೆಂದರೆ ಈ ಹಾಲಪ್ಪನನ್ನು ಛೂಬಿಟ್ಟಿದ್ದೇ ಯಡ್ಡಿ. ಹಾಲಪ್ಪನ ಸಂಬಂಧಿ ದೊಡ್ಡಪೇಟೆ ಗಂಗಾಧರ ಎಂಬಾತ ಯಡ್ಡಿ ಮನೆಯಲ್ಲೇ ಕೆಲಸಕ್ಕಿರುವಾತ. ಇವರಿಬ್ಬರನ್ನು ಬಳಸಿಕೊಂಡು ಯಡ್ಡಿ ವಾಮಾಚಾರದ ಆಟ ಕಟ್ಟಿದ್ದರು. ದೇವೇಗೌಡ ಸಹ ನಾಮ-ವಿಭೂತಿ, ವಾಮಾಚಾರಗಳಿಗೆ ಬೆಲೆಕೊಡುವ ಆಸಾಮಿಯೆಂಬುದು ಬೇರೆ ಮಾತು. ಆದರೆ ಯಡ್ಡಿಯ ಚೆಡ್ಡಿ ಅವರಿಗೆ ಹೇಗೆ ಸಿಕ್ಕೀತು? ಅದು ಸಿಗುವ ಛಾನ್ಸ್ ಇರುವುದು ಯಡ್ಡಿ ಮನೆಯಲ್ಲಿ ಕೆಲಸ ಮಾಡುವ ಗಂಗಾಧರನೊಬ್ಬನಿಗೆ ತಾನೇ? ಇದು ಯಡ್ಡಿಯ ವಾಮಾಚಾರ ಬುದ್ಧಿಗೊಂದು ಸ್ಪಷ್ಟ ಉದಾಹರಣೆ.

ಇನ್ನು ಈ ವಾಮಾಚಾರ ಪ್ರಕರಣ ದಲ್ಲಿ ಟಿವಿ ಚಾನೆಲ್‌ಗಳು ನಡೆದುಕೊಂಡ ರೀತಿಯಂತೂ ತೀರಾ ಅಸಹ್ಯ ಹುಟ್ಟಿಸುತ್ತದೆ. ಈ ಬಗ್ಗೆ ದಗಲ್ಬಾಜಿ ಜ್ಯೋತಿಷಿಗಳನ್ನು ಗುಡ್ಡೆ ಹಾಕಿಕೊಂಡು ಮೌಢ್ಯಕ್ಕೇ ಮರುಕ ಹುಟ್ಟುವಂತೆ ನಡೆದುಕೊಳ್ಳಲಾಯಿತು. ಯಡ್ಡಿಯ ಜಾತಕ ತರಿಸಿ, ಆತನ ಅಂದಾದುಂದಿಗೆಲ್ಲಾ ಗ್ರಹಚಾರವೇ ಕಾರಣ ಅಂತೆಲ್ಲ ಬಿಂಬಿಸುವ ಪ್ರಯತ್ನಗಳೂ ನಡೆದವು.

ಸ್ಟುಡಿಯೋಗಳಲ್ಲಿ ಬೀಡು ಬಿಟ್ಟಿದ್ದ ಬೀಡಾಡಿ ಜ್ಯೋತಿಷಿಗಳು ಗಳಿಗೆ, ಕಾಲ ಅಂತೆಲ್ಲ ಕಾಗೆ ಹಾರಿಸುತ್ತಿದ್ದರೆ, ನಿರೂಪಕ ಶಿಖಾಮಣಿಗಳು ಭಯಭಕ್ತಿಯಿಂದ ಕರೆಂಟು ಹೊಡೆದವರಂತೆ ತೆಪ್ಪಗಿದ್ದರು. ಇವರುಗಳ ಕಂದಾಚಾರ ಯಾವ ಹಂತ ತಲುಪಿತೆಂದರೆ ತಲೆಕೆಟ್ಟ ಜ್ಯೋತಿಷಿಯೊಬ್ಬ ಭಾರತದ ಭೌಗೋಳಿಕ ಪರಿಸ್ಥಿತಿಯೇ ಜ್ಯೋತಿಷ್ಯಕ್ಕೆ ವಿರುದ್ಧವಾಗಿದೆ ಯೆಂದೂ, ಅದೇ ಇಂಥ ರಾಜಕೀಯ ತಲ್ಲಣಗಳಿಗೂ ಕಾರಣವೆಂದೂ ಒದರಿದ! ಆಳುವವರೇ ವಾಮಾಚಾರಿಗಳಾದ ಸಂದರ್ಭದಲ್ಲಿ ಅವನ್ನು ಎತ್ತಿ ತೋರಿಸಬೇಕಾದ ಮಾಧ್ಯಮ ಗಳೂ ಇಂಥ ಅಧೋಗತಿಗಿಳಿದರೆ ಅಧ್ವಾನಗಳಾಗದೆ ಇನ್ನೇನಾದಾವು?

• ಬಾಗಿಲಗದ್ದೆ

ರೇವಣ್ಣನ 'ಕರೇ ಅಮಾವಾಸೆ'



ಹೆಚ್ಚುಕಡಿಮೆಯಾದರೆ ರಾಜ್ಯದ ಉಪಮುಖ್ಯಮಂತ್ರಿಯಾಗೇ ಬಿಡುವ ಸಾಧ್ಯತೆಯಿದ್ದ ಎಚ್.ಡಿ. ರೇವಣ್ಣ ಕೂಡ ಮಾಟ-ಮಂತ್ರಗಳನ್ನು ನಂಬುವ ಆಸಾಮಿಯೇ.

ಬಿಜೆಪಿ ಭಿನ್ನಮತೀಯರ ಆಕ್ರೋಶ ಸ್ಫೋಟಗೊಂಡು ಯಡ್ಡಿ ಸರ್ಕಾರ ಅತಂತ್ರಗೊಂಡಾಗ, ವಿಶ್ವಾಸಮತ ಯಾಚನೆಯ ಗಳಿಗೆ ಹತ್ತಿರವಾಗುತ್ತಿದ್ದಾಗ ಈ ರೇವಣ್ಣ ಟಿವಿ ಚಾನಲ್‌ಗಳ ಎದುರು ಅವಿವೇಕದ ಮಾತುಗಳನ್ನಾಡುತ್ತಿದ್ದರು.

"ಕರೇ ಅಮಾವಾಸೆ ಹತ್ತಿರ ಬತ್ತಾ ಅದೆ, ಯಡಿಯೂರಪ್ಪನ ಸರ್ಕಾರ ಓಯ್ತದೆ, ನೋಡ್ತಾ ಇರಿ" ಅಂದಿದ್ದರು ರೇವಣ್ಣ.

ಏನಿದರ ಅರ್ಥ?

ರೇವಣ್ಣನ ಈ ಮೂರ್ಖ ಹೇಳಿಕೆ, ನಂಬಿಕೆಗಳಿಗೆ ಛೀಮಾರಿ ಹಾಕುವ ಜನ ಜೆಡಿಎಸ್‌ನಲ್ಲಿ ಯಾರೂ ಕಾಣುತ್ತಿಲ್ಲ.

ಅಮಾವಾಸೆ, ಕರೇ ಅಮಾವಾಸೆ, ಪೂರ್ಣಿಮೆಗಳ ಆಧಾರದಲ್ಲಿ ನಮ್ಮ ಪ್ರಜಾತಂತ್ರ ನಡೆಯುತ್ತಿದೆಯಾ? ಕಳೆದ ಮೂರು ದಶಕಗಳಿಂದ ರಾಜಕಾರಣದಲ್ಲಿರುವ ರೇವಣ್ಣ ಬರೀ ಮಾಟ-ಮಂತ್ರ ನಂಬಿ ಚುನಾವಣೆ ಗೆದ್ದು ಬಂದರಾ?

ಈ ರೇವಣ್ಣ ಎಂಥ ಅಪ್ರಬುದ್ಧನೆಂದರೆ ಇನ್ನೊಬ್ಬ ಅವಿವೇಕಿ ಯಡ್ಡಿ ಕೇರಳದ ರಾಜರಾಜೇಶ್ವರಿ ದೇವಾಲಯಕ್ಕೆ ಹೋಗಿ ಪೂಜೆ ಮಾಡಿಬಂದರೆ ಅದರ ಬಗ್ಗೆಯೂ ಒಂದು ಚಿಲ್ಲರೆ ಕಾಮೆಂಟು ಮಾಡಿದರು.

"ಯಡೂರಪ್ಪಂಗೆ ಅಲ್ಲಿ ಮಾಮಂಗಳಾರತಿ ಸಿಗಲಿಲ್ಲ, ಸರ್ಕಾರ ಉಳಿಯಲ್ಲ" ಅಂತ ಹೇಳಿಕೊಂಡು ಸಂಭ್ರಮಿಸಿದರು. ಆಶ್ಚರ್ಯ ಅಂದರೆ ಯಡ್ಡಿಗೆ ಅಲ್ಲಿ ಮಹಾಮಂಗಳಾರತಿ ಸಿಕ್ತಾ ಅಥವಾ ಇಲ್ಲವಾ ಎನ್ನುವ ಬಗ್ಗೆಯೂ ಈ ರೇವಣ್ಣ ನಿಗಾ ಮಾಡುತ್ತಿದ್ದರು ಎನ್ನುವುದು!

ಇಂಥವರಿದ್ದರೆ ರಾಜ್ಯ ಉದ್ಧಾರವಾಗುತ್ತಾ? ●

ಬೆಂಗಳೂರ್ ಮಿರರ್ ಪತ್ರಿಕೆಯ ಚಿಲ್ಲರೆ ಜರ್ನಲಿಸಂ!

"Security to Sachin, Pointing and co compromised to save government"

-ಇದು ಅಕ್ಟೋಬರ್ 12 ರಂದು ಬೆಂಗಳೂರ್ ಮಿರರ್ ಇಂಗ್ಲಿಷ್ ದಿನ ಪತ್ರಿಕೆ ಮುಖಪುಟದಲ್ಲಿ ಪ್ರಕಟಿಸಿ ರುವ ವರದಿ.

ಅಂದರೆ,

"ಸಚಿನ್ ತೆಂಡೂಲ್ಕರ್, ರಿಕಿ ಪಾಂಟಿಂಗ್ ಹಾಗೂ ಇತರೆ ಕ್ರಿಕೆಟ್ಟಿಗರಿಗೆ ಸೂಕ್ತ ರಕ್ಷಣೆ ಕೊಡದೆ ಸಿಟಿ ಪೊಲೀಸರು ವಿಧಾನಸೌಧದ ಬಳಿ ಕಾವಲು ಕಾಯಲು ಹೋಗಿದ್ದು ಘೋರ ಅಪರಾಧ" ಎಂದು.

ಇದರ ಹಿನ್ನೆಲೆ ಇಷ್ಟೆ.



SHOULD YOU PLAY FOOTSIE AT THE CANTEEN? THE PITFALLS OF OFFICE ROMANCE

BangaloreMirror

ABOARD MAGIC CARPETS

SECURITY TO SACHIN, PONTING & CO COMPROMISED TO SAVE GOVERNMENT

ಅಕ್ಟೋಬರ್ 11 ರಂದು ಸರ್ಕಾರ ವಿಶ್ವಾಸಮತ ಯಾಚನೆಗೆ ಅಣಿಯಾಗಿದ್ದಾಗ ಪೊಲೀಸರನ್ನು ದೊಡ್ಡ ಸಂಖ್ಯೆಯಲ್ಲಿ ವಿಧಾನಸೌಧದ ಸುತ್ತಮುತ್ತ ನಿಯೋಜಿಸಲಾಗಿತ್ತು, ಅದೇ ಸಮಯದಲ್ಲಿ ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಇಂಡಿಯಾ-ಆಸ್ಟ್ರೇಲಿಯಾ ನಡುವೆ ಕ್ರಿಕೆಟ್ ಟೆಸ್ಟ್ ಮ್ಯಾಚೂ ನಡೆದಿತ್ತು, ಮ್ಯಾಚ್ ಬಳಿ ಪ್ರತಿದಿನ 1200 ಕಾನ್ಸ್‌ಟೇಬಲ್‌ಗಳು, 72 ಎಎಸ್‌ಐ, 98 ಎಸ್‌ಐ, 50 ಸರ್ಕಲ್ ಇನ್ಸ್‌ಪೆಕ್ಟರ್‌ಗಳು, 14 ಎಸಿಪಿ ಹಾಗೂ 5 ಡಿಸಿಪಿಗಳೂ ಇರುವಂತೆ ವ್ಯವಸ್ಥೆ ಏರ್ಪಾಡಾಗಿತ್ತು, ಜೊತೆಗೆ ಇನ್ನೂರಾ ಎಪ್ಪತ್ತು ಮಂದಿ ವಿಶೇಷ ಪ್ರಹಾರದಳದವರೂ ಅಲ್ಲಿದ್ದರು.

ಆದರೆ ವಿಶ್ವಾಸಮತ ಯಾಚನೆಯ ದಿನ ಕಾನೂನು-ಸುವ್ಯವಸ್ಥೆ ನೋಡಿಕೊಳ್ಳಲು ಹೆಚ್ಚು ಪೊಲೀಸರು ಬೇಕಾಗಿಬಂತು. ಹಾಗಾಗಿ ಕ್ರಿಕೆಟ್ ಸ್ಟೇಡಿಯಂ ಹತ್ತಿರವಿದ್ದ ಸಾವಿರದ್ವೆನೂರರಲ್ಲಿ ಏಳುನೂರು ಪೊಲೀಸರನ್ನು ವಿಧಾನಸೌಧದತ್ತ ಡ್ಯೂಟಿಗೆ ಕಳಿಸಿದ್ದರು. ಉಳಿದ ಎಂಟುನೂರು ಮಂದಿ ಕ್ರಿಕೆಟ್ ಮೈದಾನದಲ್ಲೇ ಇದ್ದರು.


'ಇದು ಘೋರ ಅಪರಾಧ' ಅನ್ನುತ್ತಿದ್ದಾರೆ ಮಿರರ್ ಪತ್ರಕರ್ತರು.

ಈ ಅವಿವೇಕಿ ಇಂಗ್ಲಿಷ್ ಪತ್ರಕರ್ತ "ಸರ್ಕಾರ ಉಳಿಸುವ ಯಕಶ್ಚಿತ್ ಕಾರ್ಯಕ್ಕಾಗಿ ಸಚಿನ್, ರಿಕ್ಕಿ ಪಾಂಟಿಂಗ್ ತರದ ಕ್ರಿಕೆಟರ್‌ಗಳ ಸುರಕ್ಷತೆ ನಿರ್ಲಕ್ಷಿಸಬಹುದೆ? ನಮ್ಮ ಪೊಲೀಸರಿಗೆ ಏನಾದರೂ ಜವಾಬ್ದಾರಿ ಇದೆಯಾ?

-ಅಂತೆಲ್ಲಾ ಚೀರಿಕೊಂಡಿದ್ದಾರೆ-

ಇದಲ್ಲವಾ ತಮಾಷೆ.

ಇಂತಹ ಪತ್ರಕರ್ತರಿಗೆ ಕರ್ನಾಟಕದ ಜನ, ಪ್ರಜಾಪ್ರಭುತ್ವ, ಸರ್ಕಾರಗಳ ಅಳಿವು ಉಳಿವಿಗಿಂತ ಬ್ಯಾಟು ಬಾಲು ಆಡುವವರೇ ದೊಡ್ಡವರಂತೆ ಕಾಣುತ್ತಾರೆಂದರೆ, ಏನು ಹೇಳುವುದು!



ಯಡ್ಡಿ-ರೆಡ್ಡಿ ಡೀಲ್ ಕರುಣಾಕರ ರೆಡ್ಡಿ ಡಿಸಿಎಂ!

ಬಂಡಾಯದ ಆರಂಭದಲ್ಲಿ ಅದಕ್ಕೂ ತನಗೂ ಸಂಬಂಧವೇ ಇಲ್ಲದಂತಿದ್ದ ರೆಡ್ಡಿ ಇದೀಗ ಮುಖ್ಯ ಭೂಮಿಕೆಗೆ ಬಂದಿದ್ದಾಕೆ? ಅದೂ ಕೂಡಾ ಸರ್ಕಾರ ಉಳಿಸುವ ಆಪತ್ಬಾಂಧವನ ರೂಪದಲ್ಲಿ... ಇದು ಅನೇಕರನ್ನು ಕಾಡುತ್ತಿರುವ ಪ್ರಶ್ನೆ.

ಇದಕ್ಕೆ ಉತ್ತರ ಹುಡುಕುತ್ತಾ ಹೋದರೆ ರೀಸೆಂಟಾಗಿ ಮುಖ್ಯಮಂತ್ರಿ ಯಡಿಯೂರಪ್ಪ ಹಾಗೂ ಜನಾರ್ದನ ರೆಡ್ಡಿ ನಡುವೆ ನಡೆದಿರುವ ಅಪಾಯಕಾರಿ ಡೀಲೊಂದು ಎದುರುಗೊಳ್ಳುತದೆ. ಅದು ಬಂಡಾಯದ ಬಿಸಿ ಆರಿದ ಬಳಿಕ ಕರುಣಾಕರ ರೆಡ್ಡಿಯನ್ನು ಉಪಮುಖ್ಯಮಂತ್ರಿ ಮಾಡುವ ಒಪ್ಪಂದ!

ಇದರಿಂದ ಉತ್ಸಾಹ ತುಂಬಿಕೊಂಡ ಜನಾರ್ದನ ರೆಡ್ಡಿ ಏಕಾಏಕಿ ಸಂಧಾನಕಾರನಾಗಿ ಗೆಟಪ್ಪು ಬದಲಿಸಿದ. 'ಹೇಗಿದ್ರೂ ಬಂಡಾಯವೆದ್ದೋರು ನಿಮ್ಮ ಕಡೆಯವರೇ. ಈಗ ತಕ್ಷಣಕ್ಕೆ ಅವರ ಮನವೊಲಿಸಿ ಕರೆದುಕೊಂಡು ಬನ್ನಿ. ಮೊದಲು ಸರ್ಕಾರ ಸ್ಥಿರವಾಗಲಿ, ಅನಂತರ ನಿಮ್ಮ ಕಡೆಯವರನ್ನೇ ಉಪಮುಖ್ಯಮಂತ್ರಿ ಮಾಡ್ತೀನಿ' ಅಂದರಲ್ಲಾ ಯಡ್ಡಿ? ತಕ್ಷಣ ರೆಡ್ಡಿ ಬಂಡಾಯಗಾರರ ಠಾವು ಹುಡುಕಿ ಹೊರಟ. ಖುದ್ದು ಅತೃಪ್ತರೇ ಮುಸುಡಿಗೆ ಮಂಗಳಾರತಿ ಎತ್ತಿದ ಪರಿಣಾಮ ಎಡಬಿಡಂಗಿ ರೇಣುಕನನ್ನು ಕರೆದುಕೊಂಡು ವಾಪಸ್ಸಾದ. ತನ್ಮೂಲಕ ಸರ್ಕಾರದ ಪರವಿರುವ ನಿಷ್ಠಾವಂತನಂತೆ ಬಿಂಬಿಸಿಕೊಂಡ.

ಆದರೆ ಅದೆಲ್ಲದರ ಹಿಂದಿದ್ದದ್ದು ಕರುಣಾಕರ ರೆಡ್ಡಿಯನ್ನ ಉಪಮುಖ್ಯಮಂತ್ರಿಯಾಗಿಸುವ ಉಮೇದಷ್ಟೆ. ಅಷ್ಟಕ್ಕೂ ಇಂತಹದೊಂದು ಷಡ್ಯಂತ್ರ ರೆಡ್ಡಿ ಪಾಳೆಯದಲ್ಲಿ ಬಹುಹಿಂದೆಯೇ ನಡೆದಿತ್ತು. ಪ್ರಸ್ತುತ ಕರುಣಾಕರ ಉಪಮುಖ್ಯಮಂತ್ರಿಯಾದರೂ ಒಂದಷ್ಟು ಕಾಲದ ಬಳಿಕ ಯಡ್ಡಿಯನ್ನು ಕೆಡವಿ ಆತನನ್ನೇ ಮುಖ್ಯಮಂತ್ರಿಯಾಗಿಸುವುದು, ಆ ಮೂಲಕ ಕರ್ನಾಟಕವನ್ನು ಹಿಡಿತಕ್ಕೆ ತೆಗೆದುಕೊಳ್ಳುವುದು ಗಣಿಕಳ್ಳ ರೆಡ್ಡಿಯ ಹಾಲಿ ಹುನ್ನಾರ! ಒಂದು ವೇಳೆ ಸರ್ಕಾರ ಉಳಕೊಂಡದ್ದೇ ಆದರೆ ಅದರ ಆಯಸ್ಸು ಮತ್ತು ಯಡ್ಡಿಯ ಕುರ್ಚಿ ಎರಡಕ್ಕೂ ಸದ್ಯದಲ್ಲೇ ಸಂಚಕಾರ ಬರುವುದಂತೂ ಗ್ಯಾರಂಟಿ. ಯಡ್ಡಿಯಂಥ ಯಡವಟ್ಟನನ್ನು ಕಷ್ಟಪಟ್ಟು ಸಹಿಸಿಕೊಳ್ಳುತ್ತಿರುವ ಕರ್ನಾಟಕದ ಜನರಿಗೆ ಕರುಣಾಕರ ರೆಡ್ಡಿಯಂಥ ತಿರುಬೋಕಿಯಿಂದ ಆಳಿಸಿಕೊಳ್ಳುವ ಕರ್ಮ ಬಂದರೂ ಬರಬಹುದೇನೋ....!

ಇಷ್ಟೆಲ್ಲಾ ಹುನ್ನಾರಗಳ ನಡುವೆಯೇ ರೆಡ್ಡಿ ಎಲ್ಲಾ ಸರಿಮಾಡಬಲ್ಲ ಹೀರೋನಂತೆ ಪೋಸು ಕೊಡುತ್ತಿದ್ದಾನೆ. ಅದರ ಹಿಂದೆ ತನ್ನ ಗಣಿಕಳ್ಳತನ ಹಾಗೂ ಕಳ್ಳ ದಂಧೆಗಳನ್ನು ಸೇಫ್ ಮಾಡಿಕೊಳ್ಳುವ ಹುನ್ನಾರವಿರುವುದಂತೂ ಸತ್ಯ. ●

ನಾಯಿ ನಿಷ್ಠೆಯೂ ಶಾಸಕರ ಇಷ್ಟವೂ....!

ಮುಖ್ಯಮಂತ್ರಿಯೊಬ್ಬ ಆಡಬಾರದ ಮಾತುಗಳನ್ನು ಏನೂ ಹಿಂಜರಿಯದೆ ಆಡಿದ್ದು ಯಡ್ಡಿ.

ಭಿನ್ನಮತೀಯ ಬಿಜೆಪಿ ಶಾಸಕರ ಬಗ್ಗೆ ಕಾಮೆಂಟ್ ಮಾಡುವಾಗ "ನಾಯಿಗಿರುವ ನಿಷ್ಠೆಯೂ ಈ ಶಾಸಕರಿಗಿಲ್ಲ" ಅಂದುಬಿಟ್ಟರು ಯಡ್ಡಿ. ಹೀಗೆ ಶಾಸಕರನ್ನು ನಾಯಿಗಳಿಗೆ ಹೋಲಿಸುವ ಕೀಳು ಮಟ್ಟಕ್ಕಿಳಿದ ಯಡ್ಡಿ ಸ್ವತಃ ತಾನೇನು ಮಾಡಿದ್ದರೆಂಬುದನ್ನು ಇಷ್ಟು ಬೇಗ ಮರೆತುಬಿಟ್ಟರಾ? 'ಆಪರೇಷನ್ ಕಮಲ' ಎನ್ನುವ ಅತೀ ಭ್ರಷ್ಟ ವಿಧಾನ ಬಳಸಿ ವಿರೋಧ ಪಕ್ಷದ ಶಾಸಕರನ್ನು ಖರೀದಿಸುವಾಗ ಯಡ್ಡಿಗೆ ಯಾವ ನಿಷ್ಠೆಯಿತ್ತು?

ಅಧಿಕಾರಲಾಲಸೆಯೆಂಬ ನಿಷ್ಠೆ ತಾನೆ?

ಶಾಸಕರ ನಿಷ್ಠೆಯನ್ನು ಹಣ ಕೊಟ್ಟು ಖರೀದಿಸುವ ಹಾದಿ ಹಿಡಿದ ಯಡ್ಡಿಗೂ ಕೂಡ ನಾಯಿಗಳಿಗಿರುವ ನಿಷ್ಠೆ ಇಲ್ಲ ಎಂದರೆ ತಪ್ಪಾಗುತ್ತಾ?

ಗೋವಾದಲ್ಲಿ ರೆಡ್ಡಿ ಚೆಡ್ಡಿ ರಾಡಿ!

ನ್ನಮತೀಯರ ಮುಂದೆ ಯಡ್ಡಿ ಬೈದು ಬಚಾವಾದ ಶಕುನಿ ಮಾಮ


ದೋನ್ಮತ್ತ ಮೈನ್ಸ್ ಮಾಫಿಯಾ ಡಾನ್ ಜನಾರ್ದನ ಗರ್ವಭಂಗ ಭರ್ಜರಿಯಾಗೇ ಆಗಿಹೋಗಿದೆ! ದ ತಾಜ್ ಎಕ್ಸೋಟಿಕಾ ರೆಸಾರ್ಟ್‌ನಲ್ಲಿ ಅಡ್ಡೆ ಂಡಿದ್ದ ಬಿಜೆಪಿ ಭಿನ್ನ ಬಣದ ಶಾಸಕರನ್ನು ಮರಳಿ ಕರೆದೊಯ್ಯುವ ಜಂಬದಿಂದ ಬಂದಿದ್ದ ರೆಡ್ಡಿಗ್ಗಿಲ್ಲಿ ದಿಂದಲೂ ಅಪಶಕುನವೇ ಎದುರಾಗಿತ್ತು. ಯುದಿಂದ ಹೈರಾಣಾಗಿದ್ದ ಯಜಮಾನ ಯಡ್ಡಿಯ ನಾಗಿ ಬಾರ್ಗೆನಿಂಗ್ ಸೂತ್ರದೊಂದಿಗೆ ಬಂದಿದ್ದ ಡ್ಡಿಗೆ ಸರಣಿ ಸೋಲು-ಮುಖಭಂಗ-ಅಪಮಾನಗಳೇ ದವು. ಅಕಟಕಟಾ!! ಗೋಲಿ ಆಡುವಾಗಿಂದಲೂ ಕಾಣದ ಕಂತ್ರಿ ಅಜೇಯ ರೆಡ್ಡಿ ರಾಯರಿಗೆ ಪಜಯವಾ?!

ಸ್ಸ-ಗೋವಾಕ್ಕೆ ಯಡ್ಡಿಯ ರಾಯಭಾರಿಗಳಾಗಿ ವರೆಲ್ಲ ಭಿನ್ನರ ಒಲಿಸಲಾಗದೆ ಒಬ್ಬೊಬ್ಬರಾಗಿ ಬರಿಗೈಲಿ ಾಗ ರೈಡಿಗೆ ಸಂಧಾನಕಾರನಾಗಿ ಹೋಗುವ ತೆವಲು ಯ್ಯು, ತನ್ನ ಹಣದ ಥೈಲಿ ಅಥವಾ ತಾನೂ ತುವೇ ಎಂಬ ಭಾವನೆಯಿಂದ ಮರುಳು ಮಾಡಿ ೀಯರ ಖೆಡ್ಡಾಕ್ಕೆ ಹಾಕಬಹುದೆಂಬ ಲೆಕ್ಕಾಚಾರ ದಾಗಿತ್ತು. ಆದರೆ ಹಿಂದೆಲ್ಲ ರೆಡ್ಡಿ ಮಾತು ಕೇಳಿ ಯು ಎಬ್ಬಿಸಿ ಹಳ್ಳಕ್ಕೆ ಬಿದ್ದಿದ್ದ ಶಾಸಕರು ಈ ಸಲ ಆ ಯೊಂದಿಗೆ ಮಾತಾಡಲಿಕ್ಕೂ ರೆಡಿಯಿರಲಿಲ್ಲ. ಯೇ ಗೋವಾ ಪೊಲೀಸರು ರೆಸಾರ್ಟ್ ಗೇಟಿನಲ್ಲೇ ರಟ್ಟೆ ಹಿಡಿದು ತಡೆಯೊಡ್ಡಿದ್ದರು. ಅಷ್ಟೇ ಅಲ್ಲ ಬಂದ ಜೆಡಿಎಸ್ ಕಿಂಗ್ ಕುಮಾರಸ್ವಾಮಿಗೆ ಕೋಟೆಗೆ ಎಂಟ್ರಿ ಸಿಕ್ಕರೂ ರೆಡ್ಡಿಗೆ ಮಾತ್ರ ಗೇಟು ಪ್ರದೇ ಪ್ರಯಾಸವಾಯ್ತು.

ಗೋವಾದ ಕೋಲ್ವಾ ಬೀಚ್‌ನ ತಾಜ್ ಎಕ್ಸೋಟಿಕಾ ನ ರೂಮೊಂದರಲ್ಲಿದ್ದ ಹದಿನಾಲ್ಕು ಬಿಜೆಪಿ ಶಾಸಕರ ಾಗಲು ಶೂರಾಧಿಶೂರ ರೆಡ್ಡಿ ಬರೋಬ್ಬರಿ ದಿನ ಕಾಯಬೇಕಾಗಿ ಬಂತು. ಆತನ ಜತೆಗೆ ದ್ದ ರಾಜ್ಯಸಭಾ ಸದಸ್ಯ ಪ್ರಭಾಕರ ಕೋರೆ, ಸಂಸದ ಕತ್ತಿಗಳಂತೂ ರೆಸಾರ್ಟ್ ಹೊರಗಡೆಯೇ ದರೆ ರಾತ್ರಿ ವೇಳೆ ರೆಡ್ಡಿ ರೆಸಾರ್ಟ್‌ನೊಳಗೆ ೊಂದು ರೂಮೊಂದು ಹಿಡಿದು ಬಿದ್ದು ಕೊಂಡರು. ೀವ್ವಾದ ರೆಸಾರ್ಟ್‌ನ ಹೊರಗಡೆ ಅಂತರ್‌ಪಿಶಾಚಿ ಗಿರುವ 'ದುರಂತ ಕತೆ' ಕೇಳಿ ಗೋವಾದ ಮಾಜಿ ಾಲಿ ವಿರೋಧ ಪಕ್ಷ (ಬಿಜೆಪಿ)ದ ನಾಯಕ ಹರ ಪಾರಿಕ್ಕರ್ ತನ್ನ ದಂಡಿನೊಂದಿಗೆ ಬಂದು ಸರಿಗೆ ಹೆದರಿಸದಿದ್ದರೆ ಅಂದು ರೆಡ್ಡಿ ರೋಡಲ್ಲೇ ಳಿಯಬೇಕಾಗಿತ್ತು. ಇಂಥ ಹೀನಾಯಸ್ಥಿತಿ ಕರ್ನಾಟಕದ ಫುಲ್ ಮಿನಿಸ್ಟರ್, ಬಳ್ಳಾರಿಯ ರೆಡ್ಡಿ ರಿಪಬ್ಲಿಕ್‌ನ ಾಜನಿಗೆ ಗೋವಾದಲ್ಲಿ ಎದುರಾಗಿತ್ತು, ಪಾಪ!!

ೈನ್ಸ್ ಮಾಫಿಯಾದ ಸಹ ಉದ್ಯಮಿ ಶಾಸಕ ಆನಂದ್ ಜತೆ ರೆಸಾರ್ಟ್ ರೂಮಲ್ಲಿದ್ದ ರೆಡ್ಡಿ ಚಡಪಡಿಕೆ- ಯಲ್ಲೇ ರಾತ್ರಿ ಕಳೆದರು. ತನ್ನ ಪರಮ ಶತ್ರು ಸ್ವಾಮಿ ಭಿನ್ನಮತೀಯ ಎಮ್ಮೆಲ್ಲೆಗಳೊಂದಿಗೆ ಅದೇ ನಲ್ಲಿ ಮಾತುಕತೆ ನಡೆಸುತ್ತಿದ್ದುದು ರೆಡ್ಡಿಯನ್ನು ಹಿಂಸೆಗೀಡುಮಾಡಿತ್ತು. ಮುಂಜಾನೆ ಬಲುಬೇಗ ರೇಣುಕಾಚಾರ್ಯ, ಜಾರಕಿಹೊಳಿ, ಅಸ್ನೋಟಿಕರ್ ರಾಜ ಮರ್ಯಾದೆಯಿಂದ ಕರೆಯಲು ಬರಬಹು ಕಾದು ಕುಳಿತರು. ಆದರೆ ಮಧ್ಯಾಹ್ನ ಕಳೆದರೂ ಅತೃಪ್ತ ಶಾಸಕರನ್ನು ಸಂಧಿಸುವ ಭಾಗ್ಯ ಬರಲೇ ಅಂದರೆ ಮಾಜಿ ಸಿಎಂ ಕುಮಾರಸ್ವಾಮಿ-ರೆಬೆಲ್ ಗಳ ಸರಸ ಸಂಭಾಷಣೆ ಆದುವರೆಗೂ ಮುಗಿದಿರಲೇ


ಂತೂ ಮಧ್ಯಾಹ್ನ ಮುಗಿದ ಮೇಲೆ ರೆಡ್ಡಿಗೆ ಕೋರರ ಭೇಟಿಯಾಗುವ ಅವಕಾಶ ಸಿಕ್ಕಿತು. ಅದೂ ಭಿನ್ನರ ಬಿಡಾರ ಬಿಟ್ಟು ಬೆಂಗಳೂರಿಗೆ ಹಾರಿದ ನೇ! ಕುಮಾರಸ್ವಾಮಿ ಬಂಡುಕೋರರ ಮಾನಸಿಕ ಣೆ ಮಾಡಿ, ಯಡ್ಡಿ ಸರ್ಕಾರ ವಿರುದ್ಧ ಯುದ್ಧ ವ ಗೆರಿಲ್ಲಾ ಟ್ರೈನಿಂಗ್ ಕೊಟ್ಟೇ ಹೋಗಿದ್ದರು. ಗೋವಾ ರೆಸಾರ್ಟ್‌ನಲ್ಲಿದ್ದ 14 ರೆಬೆಲ್‌ಗಳ ಪೈಕಿ ಾಚಾರ್ಯ ಒಬ್ಬನ ಬಿಟ್ಟು ಉಳಿದ ಹದಿಮೂರು ಹಾ, ಆತ್ಮಹತ್ಯಾ ಬಾಂಬ್‌ಗಳಾಗಿ ತಯಾರಾಗಿ ದ್ದರು. ರೇಣುಕಾಚಾರ್ಯ ತನ್ನನ್ನು ಮಂತ್ರಿ ಮಾಡಿದ್ದ ಲಿಂಗಾಯತ ಮಠಾಧೀಶರ ಪ್ರತಿಕ್ಷಣದ ಒತ್ತಡದಿಂದ ಎಡಬಿಡಂಗಿಯಂತಾಗಿ ಹೋಗಿದ್ದ! ಮಠಾಧೀಶರ ಯಡ್ಡಿ ರೇಣುಕನನ್ನು ಪಂಥನಾಗಿಸಿದ್ದರು.



ಹೀಗಾಗಿ ರೆಡ್ಡಿ ಭಿನ್ನ ಮತೀಯರ ಮುಂದೆ ಲಗಾಟ ಹೊಡೆಯಬೇಕಾಯ್ತು. ಮಂತ್ರಿಗಿರಿ-ಥೈಲಿ ಆಮಿಷ ಕೊಟ್ಟರೂ ಅವರ್‍ಯಾರೂ ಜಪ್ಪಯ್ಯ ಅನ್ನಲಿಲ್ಲ. "ಇನ್ನೊಂದೆ ತಿಂಗಳಲ್ಲಿ ಯಡ್ಡಿ ನಾಯಕತ್ವ ಬದಲಾಗುತ್ತಿದೆ... ಸದ್ಯಕ್ಕೆ ಸ್ವಲ್ಪ ಅಡ್ಜೆಸ್ಟ್ ಮಾಡಿಕೊಳ್ಳಿ... ಬನ್ನಿ...." ಎಂದೂ ತಲೆ ಕೆಡಿಸಲು ನೋಡಿದರು. ಆದರೆ ರೆಡ್ಡಿ ಮಾತು ಕೇಳುವ ಸ್ಥಿತಿಯಲ್ಲಿ ಬಂಡು ಶಾಸಕರು ಇರಲೇ ಇಲ್ಲ. ಹಿಂದೆಲ್ಲ ರೆಡ್ಡಿ ಈ ರೆಬೆಲ್ ಎಮ್ಮೆಲ್ಲೆಗಳ ಬಳಸಿಕೊಂಡು ತನ್ನ ಕಳ್ಳ ಗಣಿ ಸಾಮ್ರಾಜ್ಯ ಸುರಕ್ಷಿಸಿಕೊಂಡಿದ್ದನೇ ಹೊರತು ಆತನಿಗೆ ನೆರವಾದ ಶಾಸಕರಿಗೆ ಯಾವ ಪ್ರಯೋಜನವೂ ಆಗಿರಲಿಲ್ಲ. ಈ ಬೇಸರ-ಬೇಗುದಿಯಿನ್ನೂ ರೆಬೆಲ್‌ಗಳಿಗೆ ಕಡಿಮೆಯಾಗಿರಲಿಲ್ಲ. ಅಲ್ಲದೆ ಕುಮಾರಸ್ವಾಮಿಗೆ ನೆರವಾಗಿ ಯಡ್ಡಿ ಸರ್ಕಾರ ಉರುಳಿಸುವ ಕಠೋರ ನಿರ್ಧಾರಕ್ಕೆ ಈ ಶಾಸಕರೆಲ್ಲ ಆದಾಗಲೇ ಬಂದಾಗಿತ್ತು.


ಜನಾರ್ದನ ರೆಡ್ಡಿ ತಾನು ಕಲಿತ ದಗಾಕೋರ ವಿದ್ಯೆಯನ್ನೆಲ್ಲ ಬಂಡಾಯಗಾರರ ಎದುರು ಪ್ರಯೋಗಿಸಿ ತಿಪ್ಪರಲಾಗ ಹಾಕಿದ. ಶಾಸಕರು ಮಾತ್ರ ಸಕಾರಾತ್ಮಕವಾಗಿ ಒಂಚೂರೂ ಸ್ಪಂದಿಸಲಿಲ್ಲ. ತನ್ನ ದೊಡ್ಡಸ್ತನಕ್ಕೆ ಹೆದರಬಹುದು; ಹಣದ ಥೈಲಿಗೆ ಬಾಯಿ ಬಿಡಬಹುದೆಂದು ಭಾವಿಸಿದ್ದ ರೆಡ್ಡಿ ಅತೃಪ್ತ ಶಾಸಕರ ಡೋಂಟ್ ಕೇರ್ ನಡೆನುಡಿಗೆ ಕಂಗಾಲಾಗಿಹೋದರು! ಭಿನ್ನರ ಸೆಳೆಯುವ ಪ್ರಯತ್ನದಲ್ಲಿ ತಾನು ವಿಫಲನಾಗುತ್ತಿದ್ದೇನೆಂಬುದು ಖಾತ್ರಿಯಾಗುತ್ತಲೇ ರೆಡ್ಡಿಯ ಚೆಡ್ಡಿ ರಾಡಿಯಾಗಿ ಹೋಯ್ತು. ಹತಾಶನಾದ ರೆಡ್ಡಿ ಕೈಕೈ ಹಿಸುಕಿಕೊಳ್ಳುತ್ತ ಸಿಎಂ ಯಡ್ಡಿಯ ದೂಷಣೆಗೆ ಇಳಿದುಬಿಟ್ಟರು!

ಆ ಸೋಲಿನ ಗಳಿಗೆಯಲ್ಲಿ ರೆಡ್ಡಿ ಹಲುಬಿದ್ದು ಕುತೂಹಲಕರವಾಗಿದೆ "....ಯಡ್ಡಿ ಪಕ್ಕಾ ಹುಂಬ. ಆಡಳಿತ ಮಾಡೋಕ್ಕೆ ಅವಂಗೆ ಬರೋದಿಲ್ಲಾ. ಲಿಂಗಾಯತ ಲಾಬಿ ಕಟ್ಟಿಕೊಳ್ಳಲು ಹೋಗಿ ಎಡವಿಬಿದ್ದಿದ್ದಾನೆ. ಯಾಕೆಬೇಕಿತ್ತು ಆ ಸೋತ ಸೋಮಣ್ಣ ಶೋಭಾರ ಮಂತ್ರಿ ಮಾಡೋ ವ್ಯಾಮೋಹ? ಇವನ ತೆವಲುಗಳಿಗಾಗಿ ದಕ್ಷಿಣ ಭಾರತದ ಮೊಟ್ಟ ಮೊದಲ ಬಿಜೆಪಿ ಸರ್ಕಾರವೇ ಬಲಿ ಬೀಳಬೇಕಾಗಿ ಬಂದಿದೆ! ತನ್ನವರನ್ನು ಮಂತ್ರಿ ಮಾಡೋ ಅವಸರದಲ್ಲಿ ಎಂತೆಂಥ ಎಡವಟ್ಟಾಯ್ತು ನೋಡಿ. ಸರ್ಕಾರ ಸ್ಥಾಪಿಸಲು ಕಷ್ಟಕಾಲದಲ್ಲಿ ಹೆಲ್ಪ್ ಮಾಡಿದ್ದ ಶಿವನಗೌಡ ನಾಯಕ್, ಗೂಳಿಹಟ್ಟಿ ಶೇಖರ್‌ನಂಥವರನ್ನೇ ಕೈಬಿಟ್ಟಿದ್ದಾರೆ. ಅವರೇನು ತಿಳಿದುಕೊಂಡಿದ್ದಾರೆ. ತಾನು ಹೇಳಿದ್ದೇ ಅಂತಿಮ ಎಂಬ ಅಹಂಕಾರದಲ್ಲಿದ್ದಾರೆ. ಈ ಯಡಿಯೂರಪ್ಪನ ಶೈಲಿ ನೋಡಿದರೆ ಬಿಜೆಪಿ ಆಡಳಿತ ಮಾಡಲು ಅರ್ಹವಲ್ಲ ಎಂಬ ಮೇಸೇಜ್ ಜನತೆಗೆ ಹೋಗುವಂತಿದೆ...." ಎಂದೆಲ್ಲ ಒಂದೇ ಸಮನೆ ರೆಡ್ಡಿ ತನ್ನ ಶೀತಲ ಶತ್ರು ಯಡ್ಡಿಯನ್ನೂ ಮೂದಲಿಸಿ ಮಾತಾಡಿದರು.



ತೊಲಗುವುದೇ ಶನಿ?

ಅಷ್ಟಕ್ಕೆ ರೆಡ್ಡಿ ಆಲಾಪ ನಿಂತಿಲ್ಲ "ಮಂತ್ರಿ ಮಂಡಲ ವಿಸ್ತರಣೆ ಈಗ ಬೇಡ.... ಜಿಪಂ-ತಾಪಂ ಇಲೆಕ್ಷನ್ ನಂತರ ಮಾಡಿ...ಈಗ ಮಾಡಿದ್ರೆ ಬಂಡಾಯ ಶುರುವಾಗ್ತದೆ ಎಂದು ನಾನು, ಸಂಸದ ಅನಂತ್‌ಕುಮಾರ್ ಸಿಎಂಗೆ ಅದೆಷ್ಟು ಬಾರಿ ಹೇಳಿಲ್ಲ? ಕೇಳಿದ್ರಾ? ಅವನು ಮಾಡಿದ ಪಾಪಕ್ಕೆ ನಾನು ನಿಮ್ಮ ಕೈ-ಕಾಲು ಹಿಡೀಬೇಕಾಗಿ ಬಂದಿದೆ



ನೋಡಿ. ನೀವೆಲ್ಲ ಅಧಿಕಪ್ರಸಂಗಿ ಹುಡುಗರು. ಅವಸರ ಮಾಡಿದ್ರಿ... ಒಂದೇ ತಿಂಗಳಲ್ಲಿ ಯಡ್ಡೀನ ಸಿಎಂ ಪೀಠದಿಂದ ಇಳಿಸಿ ಹೊಸ ನಾಯಕನ ಪ್ರತಿಷ್ಠಾಪಿಸೋ ಸ್ಕೆಚ್ ನಾವೆಲ್ಲಾ ಹಾಕಿದ್ವಿ... ಅದು ಆಗೇ ಆಗ್ತಿತ್ತು... ವಿರೋಧ ಪಕ್ಷದಿಂದ ಬರೋಬ್ಬರಿ 15 ಎಮ್ಮೆಲ್ಲೆಗಳನ್ನು ಸೆಳೆದು ತರೋಕ್ಕೆ ನಾನು ಪ್ಲಾನ್ ಹಾಕಿದ್ದೆ... ಈಗ ಎಲ್ಲ ಎಡವಟ್ಟಾಗಿ ಹೋಯ್ತು.... ಆಗಿದ್ದು ಆಯ್ತು... ಯಡ್ಡಿ ಮುಖ್ಯ ಅಲ್ಲ.... ಪಾರ್ಟಿ ಮುಖ್ಯ... ಪ್ಲೀಸ್... ನನ್ನೊಂದಿಗೆ ಬನ್ನಿ... ಬೆಂಗ್ಳೂರಿಗೆ ಹೋಗೋಣ...." ಎಂದು ಜನಾರ್ದನ ರೆಡ್ಡಿ ಒಂದೇ ಸಮನೆ ರೆಬೆಲ್‌ಗಳಿಗೆ ದುಂಬಾಲು ಬಿದ್ದಿದ್ದಾರೆ.


ಈ ರೆಡ್ಡಿಯ ರಗಳೆಯಿಂದ ಹೇಗಾದರೂ ತಪ್ಪಿಸಿಕೊಳ್ಳಬೇಕೆಂದು ಜಾರಕಿಹೊಳಿ ಮತ್ತು ಅಸ್ನೋಟಿಕರ್ 'ಅಸಾಧ್ಯ ಬೇಡಿಕೆ' ಮುಂದಿಟ್ಟರು. "ಸರಿ ನಿಮ್ಮೊಂದಿಗೆ ಬರ್ತೇವೆ.... ಆದರೆ ನಮ್ಮ ಗುಂಪಿನ 10 ಮಂದಿಗೆ ಮಂತ್ರಿಗಿರಿ, ಉಳಿದವರಿಗೆ ನಿಗಮ-ಮಂಡಳಿ ಕೊಡ್ತೀರಾ... ಬರ್ತೇವೆ.." ಎಂದುಬಿಟ್ಟರು. ಈ ಭರ್ಜರಿ ಬೇಡಿಕೆ ಕೇಳಿ ಹೌಹಾರಿದ ರೆಡ್ಡಿ "ಅದ್ಹೇಗೆ ಸಾಧ್ಯ.....? ನಮ್ಮ ಶ್ರೀರಾಮುಲು ಥರ ಮಿನಿಸ್ಟರಿಕೆ ಬಿಡೋಕೆ ಯಾರು ರೆಡಿಯಿದ್ದಾರೆ.. ಅವ ಶ್ರೀರಾಮನಂತೆ ಕಾಡಿಗೆ ಹೋಗೋ ಮಾತಾಡ್ತಾನೆ... ಆ ಕಟ್ಟಾನ ಮನೇಗೇ ಕಳಿಸಬೌದಾಗಿತ್ತು. ಸಿಎಂ ಯಡ್ಡಿಯೇ ಸಿದ್ಧರಿಲ್ಲ.. ಬೇಕಿದ್ದರೆ ಪಾಲೇಮಾರ್‌ನ ಬಿಡಬಹುದಷ್ಟೇ... ಮಂತ್ರಿಗಿರಿ ಕೊಡುವುದು ಕಷ್ಟ... ಕ್ಯಾಷ್ ಕೊಡ್ತೇನೆ... ಇದೊಂದು ಬಾರಿ ಕೋ-ಆಪರೇಟ್ ಮಾಡಿ... ಪ್ಲೀಸ್... ಪ್ಲೀಸ್...." ಎಂದು ಧೀರೋದಾತ್ತ ಸೋಲರಿಯದ ರೆಡ್ಡಿಜೀ ಭಿನ್ನರ ಮುಂದೆ ಮಂಡಿಯೂರಿ ಅಂಗಲಾಚಿದರು!!

ಆದರೆ ರೆಡ್ಡಿಯ ಈ ಕುದುರೆ ಖರೀದಿ ಡೀಲ್ ಸಾರಾಸಗಟಾಗಿ ತಿರಸ್ಕರಿಸಿದ ರೆಬೆಲ್‌ಗಳು ಆತನಿಗೆ ಬಾಗಿಲು ತೋರಿಸಿದ್ದಾರೆ. ತನ್ನ ಸಂಧಾನ ವಿಫಲವಾಗುತ್ತಿದ್ದಂತೆಯೇ ರೆಡ್ಡಿ ಅರ್ಧ ಖುಷಿ ಅರ್ಧ ಬೇಸರದಿಂದ ಹೊರಬಿದ್ದಿದ್ದಾರೆ ತಾಜ್ ಎಕ್ಸೋಟಿಕಾ ರೆಸಾರ್ಟ್‌ನಿಂದ. ಯಡ್ಡಿಯ ಸೊಕ್ಕನ್ನು ಈ ಶಾಸಕರು ಮುರಿಯುತ್ತಿದ್ದಾರೆಂದು ರೆಡ್ಡಿಗೆ ಖುಷಿಯಾಗಿದೆ. ಆದರೆ ಸರ್ಕಾರವೇ ಬಿದ್ದುಹೋದರೆ ತನ್ನ ಕಳ್ಳ ಗಣಿ ಉದ್ಯಮದ ಗತಿಯೇನೆಂದಾತ ಆತಂಕಿತರಾಗಿದ್ದಾರೆ. ರೆಡ್ಡಿ ಬಳಗಕ್ಕೆ ಜಗದೀಶ್ ಶೆಟ್ಟರ್‌ನಂಥ ತಮ್ಮ ಮಾತು ಕೇಳುವ ಸೂತ್ರದ ಬೊಂಬೆ ಸಿಎಂ ಪೀಠದಲ್ಲಿರುವುದು ಬೇಕಾಗಿದೆಯಷ್ಟೇ!

ಒಂದಂತೂ ಖರೆ. ಅಕಸ್ಮಾತ್ ಯಡ್ಡಿ ಸರ್ಕಾರ ಬಚಾವಾದರೆ ಒಂದೇ ಒಂದು ತಿಂಗಳಲ್ಲಿ ರೆಡ್ಡಿ-ಸುಷ್ಮಾ ಸ್ವರಾಜ್ ಗ್ಯಾಂಗ್ ಯಡ್ಡಿಯನ್ನು ಉರುಳಿಸಿ "ಪರ್ಯಾಯ ನಾಯಕ"ನ ಆಯ್ಕೆಗೆ ಬಂಡಾಯ ಬಾವುಟ ಹಾರಿಸಲಿದೆ! ಅದನ್ನು ಜನಾರ್ದನ ರೆಡ್ಡಿ ಗೋವಾದಲ್ಲಿದ್ದ ಭಿನ್ನಮತೀಯ ಶಾಸಕ ಎದುರೇ ಹೇಳಿದ್ದಾರೆ. ಅಷ್ಟೇ ಅಲ್ಲ ಗೋವಾದಲ್ಲಿ ಮಾಧ್ಯಮದವರಿಗೂ "ಆಫ್ ದಿ ರೆಕಾರ್ಡ್" ಎಂದು ಯಡ್ಡಿ ಹಠಾವೋ ತಂತ್ರಗಾರಿಕೆಯ ಸ್ಕೆಚ್ ಹಾಕಲಾಗಿತ್ತೆಂದು ಹೇಳಿಹೋಗಿದ್ದಾರೆ. ರೆಬೆಲ್‌ಗಳ ಅಪಾಯಿಂಟ್‌ಮೆಂಟ್ ಸಿಗದೆ ನೊಣ ಹೊಡೆಯುತ್ತಿದ್ದ ಹೊತ್ತಲ್ಲಾತ ಕೆಲವು ಮಾಧ್ಯಮದವರೊಂದಿಗೆ ಹರಟೆ ಕೊಚ್ಚುತ್ತಿದ್ದರು.

ಆಗ "ಸತ್ಯ" ಹೊರಬಂದಿದೆ!!

• ನಹುಶ



ರೇಣುಗೆ ಲಾತಾ!!

ಯಡ್ಡಿ ವಿರುದ್ಧ ಬಂಡೆದ್ದು ಕುಮಾರಸ್ವಾಮಿ ಕಸ್ಟಡಿ ಸೇರಿದ್ದ ರೆಬೆಲ್ ಎಮ್ಮೆಲ್ಲೆಗಳನ್ನು ಹೈಜಾಕ್ ಮಾಡಲು ವಿಫಲನಾದ ಜನಾರ್ದನ ರೆಡ್ಡಿಗೆ ಗೋವಾದಿಂದ ಪಲಾಯನ ಮಾಡಿದರೆ ಸಾಕಾಗಿತ್ತು. ಸೋಲು-ಅವಮಾನದಿಂದಾತ ಕಳೆಗೆಟ್ಟು ಹೋಗಿದ್ದರು. ರೆಡ್ಡಿಯ ಕ್ಯಾಶ್ ಅಂಡ್ ಕ್ಯಾರಿ ಸೂತ್ರಕ್ಕೆ ಒಪ್ಪಿದ್ದು ಬಫೂನ್ ರೇಣುಕಾಚಾರ್ಯ ಮಾತ್ರ. ಯಡ್ಡಿಯ ಏಜೆಂಟರಾದ ಕೆಲವು ಲಿಂಗಾಯತ ಮಠಾಧೀಶರ ಫರ್ಮಾನಿಗಾತ ಪಕ್ಕಾಗಿದ್ದ. ಹಾಗಾಗಿ ರೆಡ್ಡಿ ಗೋವಾದಿಂದ ಹೋಗುವಾಗ ರೇಣುಕಾಗ 'ಮರಳಿ ಯತ್ನವ ಮಾಡು' ಎಂದ್ಹೇಳಿ ಹೋಗಿದ್ದರು.

ರೆಡ್ಡಿ ಅತ್ತ ಹೋದ ಮೇಲೆ ಇತ್ತ ರೇಣುಕಾ ರೆಡ್ಡಿಜೀ ಸೂತ್ರ ಒಪ್ಪಿಕೊಳ್ಳುವಂತೆ ಬಂಡುಕೋರರಿಗೆ ವರಾತ ಹಚ್ಚಿದ್ದಾನೆ. ತಮ್ಮನ್ನು ಬಂಡಾಯಕ್ಕೆ ಪ್ರೇರೇಪಿಸಿ ಚೆನ್ನೈ, ಏರಡಿ, ಗೋವಾ ಎಂದೆಲ್ಲ ಅಂಡಲೆಸಿ ಈ ರೇಣು ಯೂ-ಟರ್ನ್ ಹೊಡೆಯುತ್ತಿರುವುದು ರೆಬೆಲ್‌ಗಳ ಕೆರಳಿಸಿಬಿಟ್ಟಿತು... "ಏನೋ... ರೇಣುಕಾ... ನಮ್ಮನ್ನೆಲ್ಲ ಬಳಸಿಕೊಂಡು ಮಂತ್ರಿಯಾದೆ.... ಈಗ ನಮ್ಮೇ ಬಲಿ ಕೊಟ್ಟು ಡಿಸಿಎಂ ಆಗೋಕೆ ಆಟ ಆಡ್ತೀಯಾ.... ಮಗನೆ..." ಎಂದು ರೆಬೆಲ್‌ಗಳು ಸಮಾ ತದುಕಿದ್ದಾರೆ. "ನಿನ್ನ ದಾರಿ ನಿಂಗೆ... ನಮ್ಮ ದಾರಿ ನಮ್ಗೆ...." ಎನ್ನುತ್ತ ಕುಮಾರಸ್ವಾಮಿ ಸಾರಥಿ ಜಮೀರ್ ಅಹ್ಮದ್ ಜೊತೆ ರೆಸಾರ್ಟ್‌ನಿಂದ ಒಟ್ಟಾಗಿ ಹದಿಮೂರು ಎಮ್ಮೆಲ್ಲೆಗಳು ಹೊರಬಿದ್ದಿದ್ದಾರೆ.

ಹೊನ್ನಾಳಿ ಹೊಡೆತ ತಿಂದು ಸುಸ್ತಾಗಿದ್ದ ರೇಣುಕಾಚಾರ್ಯ ರೆಸಾರ್ಟ್‌ನಿಂದ ಹೊರಬಂದು ಮಾಧ್ಯಮದವರ ಮುಂದೆ "ನನ್ನ ಹದಿಮೂರು ಎಮ್ಮೆಲ್ಲೆ ಮಿತ್ರರನ್ನು 200 ಗೂಂಡಾಗಳ ಗ್ಯಾಂಗ್ ಅಪಹರಿಸಿಕೊಂಡು ಹೋಯ್ತು...." ಎಂದು ಅಳುಮೋರೆ ಹಾಕಿದ. ಏಕಾಂಗಿ ರೇಣುಕಾ "ನನ್ನವರು ಯಾರೂ ಇಲ್ಲಾ... ಯಾರಿದ್ದರೂ ಸುಖವೇನಿಲ್ಲಾ" ಅನ್ನುತ್ತಾ ಎಂಪಿ ರಮೇಶ್ ಕತ್ತಿ, ಪ್ರಭಾಕರ ಕೋರೆ, ಮತ್ತಿತರರೊಂದಿಗೆ ಬೆಂಗಳೂರಿಗೆ ಹೊರಟ.

ಇದು ಯಡ್ಡಿಯ "ಮಾನಸಿಕ" (ಅಸ್ವಸ್ಥ) ಪುತ್ರ ರೇಣು ನಾಟಕ!!

ಬಂಡಾಯಕ್ಕೆ ಸುರಿದದ್ದು 300 ಕೋಟಿ!

ನಿಜ, ಕಳೆದ ಹದಿನೈದಿಪ್ಪತ್ತು ದಿನಗಳಿಂದೀಚೆಗೆ ನಡೆಯುತ್ತಿರುವ ಬಂಡಾಯ ಪ್ರಹಸನ ಅಖಂಡ ಮುನ್ನೂರು ಕೋಟಿಯನ್ನು ಬಡಿದು ಬಾಯಿಗಿಟ್ಟುಕೊಂಡಿದೆ.

ಎಲ್ಲರಿಗೂ ತಿಳಿದಿರುವಂತೆ ಈ ಬಂಡಾಯದ ಸುತ್ತ ಈ ಕ್ಷಣದವರೆಗೂ ಗಿರಕಿಹೊಡೆಯುತ್ತಿರುವುದು ಖರೀದಿ ವ್ಯವಹಾರ. ಲಫಂಗ ಶಾಸಕ, ಸಚಿವನೊಬ್ಬ ಬಂಡಾಯದ ಒಳಹೊಕ್ಕರೂ, ಹೊರಬಂದರೂ ಅಲ್ಲಿ ಕೋಟಿಗಳ ಲೆಕ್ಕದ ಡೀಲಿದೆಯೆಂದೇ ಅರ್ಥ.

ಎಕ್ಸೈಸ್ ಸಚಿವನಾಗಿದ್ದ ರೇಣುಕಾಚಾರ್ಯನ ನೇತೃತ್ವದಲ್ಲಿ ಹದಿನೆಂಟು ಮಂದಿ ಬಂಡಾಯ ಹೊರಟಾಗಲೂ ಎಲ್ಲರಿಗೂ ಕೋಟಿಗಳ ಲೆಕ್ಕದಲ್ಲಿ ಹಣ ಸಂದಾಯವಾಗಿತ್ತು. ಆ ಹಣ ಹಾಗಿರಲಿ, ತೀರಾ ಸರ್ಕಾರಕ್ಕೆ ನಿಷ್ಠನಾಗಿ ವಾಪಾಸಾದನಲ್ಲಾ ರೇಣುಕಾಚಾರ್ಯ? ಅದಕ್ಕಾಗಿ 25 ಕೋಟಿಯಷ್ಟು ಖರ್ಚಾಗಿತ್ತು. ಇನ್ನು ಅವಿವೇಕದ ಮೂಟೆ ವರ್ತೂರು ಪ್ರಕಾಶ್ ಕೂಡಾ ಕೋಟಿಗಳನ್ನು ನುಂಗಿದ ಬಳಿಕವೇ ಬಿಜೆಪಿ ಪಾಳೆಯದಲ್ಲಿ ನಿಂತು ಹಲ್ಲು ಕಿರಿದಿದ್ದು. ಇದಲ್ಲದೆ ನಾಪತ್ತೆಯಾಗಿರುವ ಶಾಸಕ ಜೆಡಿಎಸ್‌ನ ಅಶ್ವತ್ಥ್ ತಲಾ 25 ಕೋಟಿ ಗುಂಜಿದ್ದಾರೆಂಬ ಬಲವಾದ ಗುಮಾನಿಗಳಿವೆ. ಹಣ ಖರ್ಚು ಮಾಡಿದ್ದು ಬಿಜೆಪಿ ಮಂದಿಯೆಂಬುದು ಬಹಿರಂಗ ಸತ್ಯ. ಇನ್ನು ವಿಶ್ವಾಸ ಮತಯಾಚನೆ ಸಂದರ್ಭದಲ್ಲೂ ಗೈರುಹಾಜರಾಗಿ ತಲೆ ತಪ್ಪಿಸಿಕೊಂಡಿರುವಾತ ಬಿಜೆಪಿಯ ಮಾನಪ್ಪ ಉಜ್ಜಲ. ಈತನಿಗೂ ಇಪ್ಪತ್ತೈದು ಕೋಟಿಯಷ್ಟು ಬಂಡಾಯದ 'ಫಂಡು' ಹೋಗಿದೆ. ಇನ್ನುಳಿದಂತೆ ಹರಿಹರ ಶಾಸಕ ಹರೀಶ್ ಬಂಡಾಯ ಪಾಳೆಯದಿಂದ ಓಡಿ ಬಂದಿದ್ದ, ಈತನಿಗಂತೂ ವಾಪಾಸಾದುದಕ್ಕೆ ಹಾಗೂ ಪ್ರಾಣ ಬೆದರಿಕೆ ಅಂತೆಲ್ಲ ಪ್ರತಿಪಕ್ಷಗಳ ಮೇಲೆ ಗೂಬೆ ಕೂರಿಸಿದಕ್ಕೂ ಸೇರಿ ಬಂಪರ್ ಹೊಡೆದಿರಬಹುದು. ಇದೆಲ್ಲಕ್ಕಿಂತಲೂ ಒಳ್ಳೆಯವರೆನ್ನಲಾದ ಬೆಳ್ಳುಬ್ಬಿಯಂತೂ ಎಲ್ಲೂ ನಿಲ್ಲಲೊಲ್ಲದೆ ಅಡ್ಡಾಡಿದರು. ಅಖಂಡ ನಾಲ್ಕು ಬಾರಿ 'ಬಂದು ಹೋಗು'ವ ನಾಟಕ ನಡೆಸಿ ಕೊನೆಗೂ ಬಂಡಾಯದ ಮೇಲೆ ನೆಲೆ ನಿಂತಿದ್ದಾರೆ. ಈ ಅಂದರ್‌ಬಾಹರ್‌ನಲ್ಲಿ ಬೆಳ್ಳುಬ್ಬಿ ಸರಿಯಾಗಿ ಕಮಾಯಿಸಿರುವುದಂತೂ ದಿಟ.



ತೊಲಗುವುದೇ ಶನಿ?

ಹಾಗಾದರೆ ಬಂಡಾಯದ ಬುಡಕ್ಕೆ ಸುರಿದ ಅಷ್ಟು ದೊಡ್ಡ ಮೊತ್ತದ ಹಣ ಎಲ್ಲಿಂದ ಬಂತೆಂಬ ಪ್ರಶ್ನೆ ಪ್ರಮುಖವಾಗುತ್ತದೆ. ಒಂದು ಮೂಲದ ಪ್ರಕಾರ ಅನಿಲ್ ಲಾಡ್ ಹಾಗೂ ರಾಹುಲ್ ಬಲ್ಡೋಟ ಕುಮಾರಸ್ವಾಮಿಯ ಮೂಲಕ ಈ ಹಣ ಪೂರೈಸಿದ್ದಾರೆ. ಆದರೆ ಬಲ್ಡೋಟಾನ ಆಪ್ತ ಮೂಲಗಳು ಆತ ಹಣಬಿಚ್ಚುವ ಆಸಾಮಿ ಅಲ್ಲವೇ ಅಲ್ಲ ಅಂತ ವಾದಿಸುತ್ತಿವೆ. ಆದರೆ ಲಾಡ್ ಬಳಗ ಫೈನಾನ್ಸ್ ಮಾಡಿದೆಯೆಂಬ ವಿಚಾರವನ್ನು ಸುಲಭಕ್ಕೆ ತಳ್ಳಿ ಹಾಕಲಾಗುವುದಿಲ್ಲ.

ಯಾಕೆಂದರೆ, ಗಣಿಗಳ್ಳ ರೆಡ್ಡಿ ಪಡೆ ಸರ್ಕಾರ ಅಸ್ತಿತ್ವಕ್ಕೆ ಬಂದನಂತರ ಲಾಡ್ ಗ್ಯಾಂಗನ್ನು ಇನ್ನಿಲ್ಲದಂತೆ ಕಾಡಿದೆ. ಇದರಿಂದಾಗಿಯೇ ಅವರ 'ವ್ಯವಹಾರ'ಗಳಿಗೂ ಪೆಟ್ಟುಬಿದ್ದಿದೆ. ಜೊತೆಗೆ ಯಡಿಯೂರಪ್ಪ ಕೂಡಾ ರೆಡ್ಡಿಗಳ ಆದೇಶಕ್ಕೆ ಮಣಿದು ಲಾಡ್ ಗ್ಯಾಂಗಿನ ಮೇಲೇರಿ ಹೋದದ್ದೂ ನಡೆದಿತ್ತು. ಇದೆಲ್ಲದರಿಂದಾಗಿಯೇ ಅನಿಲ್ ಲಾಡ್ ಸರ್ಕಾರ ಬೀಳಿಸಲು ಸಹಾಯ ಮಾಡಿದ್ದರಲ್ಲಿ ಆಶ್ಚರ್ಯವಿಲ್ಲ. ತೀರಾ ಬಂಡಾಯಗಾರರಿಗೆ ಕೊಟ್ಟ ಹಣದ ಖರ್ಚು ಬದಿಗಿಟ್ಟರೆ ಚೆನ್ನೈ, ಗೋವಾ, ದೆಹಲಿ ಅಂತ ನಡೆಸಿದ ಪಿಕ್‌ನಿಕ್‌ಗಳ ಖರ್ಚೇ ಕೋಟಿ ದಾಟುತ್ತದೆ.

ಹೀಗೆ ನೀರಿನಂತೆ ಖರ್ಚಾದ ಹಣಕ್ಕೂ ಕರ್ನಾಟಕದ ಸದ್ಯದ ಪರಿಸ್ಥಿತಿಗೂ ಹೋಲಿಸಿ ನೋಡಿದರೆ ನಿಜಕ್ಕೂ ನಾಚಿಕೆಯಾಗುತ್ತದೆ. ಈ ಹಲಾಲುಕೋರರಿಗೆ ಉತ್ತರ ಕರ್ನಾಟಕದಲ್ಲಿ ನೆರೆಗೆ ಸಿಕ್ಕು ಬದುಕು ಕಳೆದುಕೊಂಡವರಿಗೆ ಸೂರು ಕಲ್ಪಿಸುವ ಯೋಗ್ಯತೆಯಿಲ್ಲ. ಈಗ ಬಂಡಾಯಕ್ಕೆ ಹಣ ಸುರಿದು ಹೀರೋಗಳಾಗಲು ಹವಣಿಸಿದವರಿಗೂ ಈ ನೆಲದ ಬಡ ಜನತೆ ನೆನಪಾಗುವುದಿಲ್ಲ. ದುರಂತವೆಂದರೆ, ಒಂದರ್ಥದಲ್ಲಿ ಜನರ ದುಡ್ಡನ್ನೇ ತಿಂದು ತಿಮಿರು ಹತ್ತಿಸಿಕೊಂಡ ಅಸ್ನೋಟಿಕರ್, ಗೂಳಿಹಟ್ಟಿ ಹಾಗೂ ಶಿವನಗೌಡ ಮುಂತಾದ ಲಫಂಗರು ಸಾಮಾಜಿಕ ನ್ಯಾಯದ ಬಗ್ಗೆ ಮಾತಾಡುತ್ತಾರೆ!

ಒಂದಂತೂ ಸತ್ಯ: ಬಿಜೆಪಿ ಸರ್ಕಾರ ಉರುಳಿಸಲೋಸ್ಕರ ದುಡ್ಡು ಸುರಿದವರೂ, ಪ್ರತಿಪಕ್ಷಗಳ ಪ್ರಭೃತಿಗಳು ಬೀಳಿಸಲು ಲಾಗ ಹಾಕಿದರೂ ಅದರ ಹಿಂದೆ ಮಂತ್ರಿಯಾಗುವ ಮುಖ್ಯಮಂತ್ರಿಯಾಗುವ ಸ್ವಾರ್ಥದ ಹೊರತಾಗಿ ಜನಹಿತದ ಲವಲೇಶವೂ ಇರಲು ಸಾಧ್ಯವಿಲ್ಲ.

ಆದರೆ ಖರ್ಚು ಮಾಡಿದ 300 ಕೋಟಿ ಹ್ಯಾಗೆ ಸಂಪಾದಿಸಿದ ಹಣವೆಂಬುದು ಮಾತ್ರ ಮುಖ್ಯಪ್ರಶ್ನೆಯಾಗುಳಿಯುತ್ತದೆ. ●



ಸದನದಲ್ಲಿ ಪೋಲೀಸ್ ಪ್ರಭುತ್ವ ರಕ್ಷಿಸಲು ಪರದಾಡಿದ ಬಿದರಿ!

ಪ್ರಭುತ್ವ ತನ್ನ ಸ್ವಹಿತಾಸಕ್ತಿಗಾಗಿ ತೆಗೆದುಕೊಳ್ಳುವ ಸಂವಿಧಾನ ವಿರೋಧಿ ಕ್ರಮಗಳನ್ನು ಜಾರಿಗೆ ತರಲು ಹೋಗುವ ಅಧಿಕಾರಿಗಳಿಗೇನೂ ಕಮ್ಮಿ ಇಲ್ಲ. ಆದರೆ ಆ ಕ್ರಮಗಳು ವ್ಯಾಪಕ ಟೀಕೆಗೆ ಗುರಿಯಾಗಿ, ಅದು ಅಧಿಕಾರಿಗಳ ಬುಡಕ್ಕೆ ಬಂದಾಗ, ಅವರು ತಮ್ಮ ಪ್ರಭುಗಳು ಸಿಕ್ಕಿಬೀಳದಂತೆ ಹಾಗೂ ತಾವೂ ಕಾನೂನು ಪ್ರಕಾರವಾಗಿಯೇ ನಡೆದುಕೊಂಡಿದ್ದೇವೆ ಎಂದು ಸಾಧಿಸಲು ಪಟ್ಟು ಹಿಡಿಯುತ್ತಾರೆ.


ಹಾಗೆ ಮಾಡಲು ಹೊರಟಿರುವ ಬೆಂಗಳೂರು ನಗರ ಪೊಲೀಸ್ ಕಮೀಷನರ್ ಶಂಕರ್ ಬಿದರಿಯವರು ಅದನ್ನು ಸಾಧಿಸಲು ತಿಪ್ಪರಲಾಗ ಹಾಕಿ ವಿಫಲರಾಗುತ್ತಿದ್ದಾರೆ.

ವಿಷಯದ ಹಿನ್ನೆಲೆ ಇಷ್ಟೇ: ಇದೇ ಅಕ್ಟೋಬರ್ 11ರಂದು ನಡೆದ (ಮೊದಲ!) ವಿಶ್ವಾಸಮತದ ವೇಳೆ ಕಮೀಷನರ್ ಶಂಕರ್ ಬಿದರಿ ನೇತೃತ್ವದಲ್ಲಿ ಸಾವಿರಾರು ಪೊಲೀಸರು ವಿಧಾನಸಭೆಯ ಕಲಾಪ ನಡೆಯುವ ಸಭಾಂಗಣಕ್ಕೆ ನುಗ್ಗಿ, ಆಳುವ ಬಿಜೆಪಿ ಸರ್ಕಾರಕ್ಕೆ ಅನುಕೂಲವಾಗುವಂತೆ ವರ್ತಿಸಿದ್ದರು. ಇದು ಅವರ ಅಧಿಕಾರವ್ಯಾಪ್ತಿಯನ್ನು ಮೀರಿದ್ದಾಗಿತ್ತಲ್ಲದೇ, ಶಾಸಕಾಂಗದ ಕಾರ್ಯಕಲಾಪಗಳಲ್ಲಿ ಅನಗತ್ಯ ಹಸ್ತಕ್ಷೇಪ ಮಾಡಿದ ಅಪರಾಧವಾಗಿತ್ತು.

ವಿಧಾನಸಭೆಯ ಕಾರ್ಯ ಕಲಾಪಗಳಲ್ಲಿ, ಸದನದ ನಡಾವಳಿಕೆಗಳಿಗೆ ಅಪಚಾರ ಉಂಟಾದಾಗ ಅದನ್ನು ನಿಯಂತ್ರಿಸಲು ಮಾರ್ಷಲ್‌ಗಳಿರುತ್ತಾರೆ. ಪರಿಸ್ಥಿತಿ ತೀರಾ ವಿಕೋಪಕ್ಕೆ ಹೋದಾಗ ಸ್ಪೀಕರ್ ಪೊಲೀಸರ ಮೊರೆ ಹೋಗಬಹುದು. ಈಗ ತಮ್ಮ ತಪ್ಪನ್ನು ಮುಚ್ಚಿಕೊಳ್ಳಲು ಶಂಕರ್ ಬಿದರಿ ಸ್ಪೀಕರ್ ಕಡೆ ಬೆರಳು ತೋರಿಸುತ್ತಿದ್ದಾರೆ.

'ಸದನದ ಪರಿಸ್ಥಿತಿ ಹತೋಟಿ ತಪ್ಪಿ ಹೋಗುತ್ತಿರುವುದರಿಂದ, ಪೊಲೀಸರು ಮಧ್ಯಪ್ರವೇಶಿಸಿ ಸದನವನ್ನು ನಿಯಂತ್ರಣಕ್ಕೆ ತರಲು ನೆರವು ನೀಡಬೇಕು' ಎಂದು ಸ್ಪೀಕರ್ ಬೋಪಯ್ಯನವರು ತಮಗೆ ಲಿಖಿತ ಪತ್ರ ಕಳಿಸಿದ್ದರಿಂದ ತಾವು ತಮ್ಮ ಪಡೆಯೊಂದಿಗೆ ಸದನವನ್ನು ಪ್ರವೇಶಿಸಿ ಈ ನೆಲದ ಕಾನೂನಿಗನುಗುಣವಾಗಿ ಕಾರ್ಯ ನಿರ್ವಹಿಸಿದ್ದೇನೆ ಎಂದು ಬಿದರಿ ತಮ್ಮ ಕಾರ್ಯವೈಖರಿಯನ್ನು ಸಮರ್ಥಿಸಿಕೊಳ್ಳಲು ಹೆಣಗಾಡುತ್ತಿರುವುದು ನಿಜಕ್ಕೂ ಹಾಸ್ಯಾಸ್ಪದವಾಗಿದೆ.

ಎಲ್ಲ ಮಾಧ್ಯಮಗಳಿಗೂ ತಮ್ಮನ್ನು ಸಮರ್ಥಿಸಿಕೊಂಡು ಅವರು ಕಳಿಸಿರುವ ಪತ್ರದ ಜೊತೆಗೆ ಅದಕ್ಕೆ 'ದಾಖಲೆ'ಯನ್ನೂ ನೀಡಿದ್ದಾರೆ.



ಸದಸ್ಯ, ಕರ್ನಾಟಕ ವಿಧಾನ ಸಭೆ
MEMBER, KARNATAKA LEGISLATIVE ASSEMBLY

To The [illegible] of Police Bangalore.

Since the situation is out of control civil police [illegible] help may be taken to control the situation

Bangalore 11-10-2010 Yours

ಸ್ಪೀಕರ್ ಹೆಸರಿನ ಬೋಗಸ್ ಪತ್ರ

ಅವರ ಪ್ರಕಾರ ಆ ದಾಖಲೆ 'ಸ್ಪೀಕರ್ ಅವರು ಸದನದ ನಿಯಂತ್ರಣ ಮಾಡಲು ಕೋರಿದ ಲಿಖಿತ ಪತ್ರ...' ಆದರೆ ಈ ಪತ್ರವೇ ಸಂಶಯಾಸ್ಪದವಾಗಿದೆ. ಏಕೆಂದರೆ ಈ ಪತ್ರ ಇರುವುದು ಸ್ಪೀಕರ್ ಲೆಟರ್‌ಹೆಡ್‌ನಲ್ಲಲ್ಲ, ಅದಿರುವುದು 'ಸದಸ್ಯ ಕರ್ನಾಟಕ ವಿಧಾನಸಭೆ' ಎಂಬ ತಲೆಬರಹದ ಕಚ್ಚಾ ಪ್ಯಾಡ್ ಹಾಳೆಯಲ್ಲಿ. ಅಂದರೆ ಎಮ್ಮೆಲ್ಲೆಗಳಿಗೆ ಸದನದ ಕಲಾಪದ ವೇಳೆಯಲ್ಲಿ ನೋಟ್ಸ್ ಮಾಡಿಕೊಳ್ಳಲು ನೀಡುವ ಪ್ಯಾಡ್‌ನಿಂದ ಕಿತ್ತುಕೊಂಡ ಹಾಳೆಯಲ್ಲಿ ಬಿದರಿಯವರಿಗೆ 'ಅವರ ಸೇವೆ ಕೋರಿರುವ' ಪತ್ರ ಬಂದಿದೆ!

ಈ ಪತ್ರವನ್ನು ಕೈಬರಹದಲ್ಲಿ ಗಡಿಬಿಡಿಯಲ್ಲಿ ಗೀಚಲಾಗಿದೆ ಮತ್ತು ಬರೆದವರ ಸಹಿ ಅಸ್ಪಷ್ಟವಾಗಿದೆ. ಜೊತೆಗೆ ಸಹಿಯ ಅಡಿ ಹೆಸರನ್ನೂ ದಾಖಲಿಸಿಲ್ಲ. ಇದೆಲ್ಲ ಸಾಲದೆಂಬಂತೆ ಈ ಪತ್ರದಲ್ಲಿ ಸ್ಪೀಕರ್ ಕಚೇರಿ ಸೀಲ್ ಕೂಡಾ ಇಲ್ಲ.

ಅಂದರೆ 11ರಂದು ಸದನದಲ್ಲಿ ಖಾಕಿ ಅಧ್ವಾನ ನಡೆದು ಟೀಕೆಗೆ ಗುರಿಯಾದ ನಂತರ ಎಚ್ಚೆತ್ತುಕೊಂಡ ಬಿದರಿ ಸಾಹೇಬರು ತಮ್ಮ ಇಂಟಲಿಜೆನ್ಸ್ ಬುದ್ಧಿಯನ್ನು ತುರ್ತಾಗಿ ಬಳಸಿ ಇಂತಹ 'ಪತ್ರ'ವೊಂದನ್ನು ಸೃಷ್ಟಿಸಿದ್ದಾರೆಯೇ? 'ಸ್ಪೀಕರ್ ಆದೇಶ'ದ ಮೇರೆಗೆ ತಾವು ಸದನ ಪ್ರವೇಶಿಸಿದ್ದು ಎಂದು ತೋರಿಸುವ ಉಮೇದಿನಲ್ಲಿ ಅವರು ಎಮ್ಮೆಲ್ಲೆಗಳ ಉಪಯೋಗಕ್ಕಿರುವ ಲೆಟರ್‌ಹೆಡ್ ಕೂಡಾ ಅಲ್ಲದ ಹಾಳೆಯೊಂದರಲ್ಲಿ ಯಾರಿಂದಲೋ ಇದನ್ನು ಗೀಚಿಸಿಕೊಂಡಿದ್ದಾರೆಯೇ?

ಇಲ್ಲಿ ನಾವು ಗಮನಿಸಬೇಕಾದ ಅಂಶವೆಂದರೆ, ಶಂಕರ್ ಬಿದರಿಯವರು ಸ್ವನಿರ್ಧಾರದಿಂದ ಸದನವನ್ನು ಪ್ರವೇಶಿಸಿಲ್ಲ ಎಂಬುದು. ಆದರೆ ಲಿಂಗವಂತ ಯಡಿಯೂರಪ್ಪರ ರಾಜ್ಯ ಸರ್ಕಾರ ವೀರಶೈವ ಬಿದರಿಯವರಿಗೆ 'ಸಹಾಯ' ಮಾಡುವಂತೆ ಅಲಿಖಿತ ಆದೇಶ ನೀಡಿದೆ. ಪ್ರಭುಗಳ ಈ ಆದೇಶವನ್ನು ಪಾಲಿಸಲು ಹೋದ ಬಿದರಿ ಸಾಹೇಬರು ಪೇಚಿಗೆ ಸಿಕ್ಕಿದ್ದಾರೆ.

ಅಂದಂತೆ ಸೀಲು, ಲೆಟರ್‌ಹೆಡ್ ಏನೂ ಇಲ್ಲದ 'ಸ್ಪೀಕರ್ ಪತ್ರ'ದಲ್ಲಿರುವ ಸಹಿ ಯಾರದು?

ಬಿಡಿ, ಮುಖ್ಯಮಂತ್ರಿಯೇ ಅಕ್ರಮ ಡಿನೋಟಿಫಿಕೇಷನ್ ಮಾಡುವಾಗ 'ಬಿಎಸ್‌ವೈ' ಎಂದು ಶಾರ್ಟ್ ಸಿಗ್ನೇಚರ್ ಹಾಕುತ್ತಿರುವ ರಾಜ್ಯದಲ್ಲಿ 'ಸ್ಪೀಕರ್ ಪತ್ರ'ದಲ್ಲಿ ಯಾರೋ ಸಹಿ ಹಾಕಿರುವುದೇನೂ ಮಹಾಪರಾಧ ಅಲ್ಲ, ಅಲ್ಲವೇ?

ಸರ್ಕಾರದ ಸ್ವಹಿತಾಸಕ್ತಿಯ ದುಡುಕು ನಿರ್ಧಾರಗಳನ್ನು ಜಾರಿಗೆ ತರಲು ಹೋಗಿ ಮತ್ತೆ ಪೇಚಿಗೆ ಬೀಳದಿರಲಿ ಶಂಕರ್ ಬಿದರಿಯವರು... ●

ರಣಹಸಿವಿನ ರೇಣುಕ: ಕೊಳಕು ರಾಜಕಾರಣದ ಪ್ರತೀಕ!

ರೆಸಾರ್ಟ್ ರಾಜಕಾರಣದ ಮೂಲಕವೇ ಮುಖ್ಯಮಂತ್ರಿಗೆ ಬ್ಲ್ಯಾಕ್‌ಮೇಲ್ ಮಾಡಿ, ಒಂದಿಷ್ಟು ಕೋಟಿಗಳನ್ನು ಬಾಚಿಕೊಂಡು ಮಂತ್ರಿಯಾದವನೀತ.


ಒಂದೇ ವರ್ಷದಲ್ಲಿ ಮತ್ತದೇ ರೆಸಾರ್ಟ್ ಪಾಲಿಟಿಕ್ಸ್ ಮೂಲಕ ಸಿ.ಎಂ. ವಿರುದ್ಧ ಭಿನ್ನಮತ ಮೊಳಗಿಸಿ ಮತ್ತೊಂದಿಷ್ಟು ಕೋಟಿಗಳನ್ನು ಬಾಚಿಕೊಂಡವನೂ ಈತನೇ. ಇನ್ನೇನು ಕ್ಲೈಮ್ಯಾಕ್ಸ್ ಹತ್ತಿರ ಬಂತು ಅನ್ನುವಾಗ ಬಿಗ್‌ಡೀಲ್ ಕುದುರಿಸಿಕೊಂಡು ಮುಖ್ಯಮಂತ್ರಿಗಳ ಪರ ಸಡನ್ ವಿಶ್ವಾಸ ವ್ಯಕ್ತಪಡಿಸಿದ್ದೂ ಈತನೇ...

ಇವನು ಮಾನಗೇಡಿ ಅಬಕಾರಿ ಸಚಿವ ಎಂ.ಪಿ.ರೇಣುಕಾಚಾರ್ಯ ಎಂದು ಬಿಡಿಸಿಹೇಳಬೇಕಾಗಿಲ್ಲ. ಟಿ.ವಿ.ಮಾಧ್ಯಮಗಳಿಂದಾಗಿ ಈ ಕ್ಷುಲ್ಲಕ, ಚಿಲ್ಲರೆ ರಾಜಕಾರಣಿಯೀಗ ರಾಜ್ಯಾದ್ಯಂತ ಪರಿಚಿತ. ಇವತ್ತು ಕರ್ನಾಟಕ ರಾಜಕಾರಣ ಕೊಚ್ಚೆಗುಂಡಿ ಪಾಲಾಗಿರುವುದರ ಸಂಕೇತದಂತೆ, ಪ್ರತೀಕದಂತೆ ಈ ರೇಣುಕಾಚಾರಿ ಎಂಬ ಎಮ್ಮೆಲ್ಲೆ ನಮ್ಮ ಮುಂದಿದ್ದಾನೆ. ವಿಚಿತ್ರ ಅಂದರೆ ಇವನ ಎಲ್ಲ ಶೋಕಿ, ಐಲಾಟ, ಮಂಗಾಟಗಳನ್ನು ನೋಡಿಯೂ ಈತನ ಅನೈತಿಕ ರಾಜಕಾರಣದ ವಿರುದ್ಧ ಯಾರೂ ಉಗಿಯುತ್ತಿಲ್ಲ.

ಬಹುಶಃ ಬಹುತೇಕ ಎಮ್ಮೆಲ್ಲೆಗಳು ಇವತ್ತು ಈ ರೇಣುಕನ ತದ್ರೂಪಿಗಳಂತೆಯೇ ವರ್ತಿಸುತ್ತಿರುವುದರಿಂದ ಜನ ರೇಣುಕನ ನಿರ್ಲಜ್ಜತನವನ್ನು ಸೀರಿಯಸ್ ಆಗಿ ತೆಗೆದುಕೊಂಡಿಲ್ಲವೇನೋ? ಹಾಗಿರುವುದಾದರೆ, ಅದು ಒಟ್ಟು ಕರ್ನಾಟಕ ರಾಜಕೀಯದ ದುರಂತವೇ ಸರಿ.

ಇವತ್ತು ಹೊಲಸುತನದ ಕಟ್ಟಕಡೆಯ ಹಂತ ತಲುಪಿರುವ ರಾಜ್ಯ ಬಿಜೆಪಿ ಸರ್ಕಾರದಲ್ಲಿ ಈ ಸಲ ಭಿನ್ನಮತ ಶುರುವಾದಾಗ, ಅದರ ನಾಯಕನಾಗಿದ್ದವನು ಸಚಿವ ರೇಣುಕಾಚಾರ್ಯ. ಯಡಿಯೂರಪ್ಪನ ವಿರುದ್ಧ 'ಭೀಕರ' ಬಂಡಾಯ ಸಾರಿದ ಪಕ್ಷೇತರರು ಮತ್ತು ಕೆಲ ಬಿಜೆಪಿ ಎಮ್ಮೆಲ್ಲೆಗಳ ಗುಂಪಿಗೆ ಈ ಪಡಪೋಶಿಯನ್ನು ನಾಯಕನನ್ನಾಗಿ ಮಾಡಲು ಕುಮಾರಸ್ವಾಮಿ ಅದೆಷ್ಟು 'ಬಾಬ್ತು' ಕೊಟ್ಟಿದ್ದರೋ ಗೊತ್ತಿಲ್ಲ. ಚೆನ್ನೈ, ಪಣಜಿಗಳ ರೆಸಾರ್ಟ್‌ಗಳಲ್ಲಿ ಈ ಭಿನ್ನಮತೀಯರ ಜೊತೆಗಿದ್ದ (ಖಳ)ನಾಯಕ ರೇಣುಕಾಚಾರಿ ಯಡ್ಡಿಯ ದುರಾಡಳಿತದ ವಿರುದ್ಧ ಮಾತಾಡಿದ್ದೇನು? 'ಇದೆಲ್ಲ ಜನರ ಹಿತಕ್ಕೋಸ್ಕರ' ಎಂದು ಬಡಬಡಿಸಿದ್ದೇನು? ಟಿವಿ ಮಾಧ್ಯಮಗಳಲ್ಲಿ ಬಂಡಾಯ ನಾಯಕನಂತೆ ಮಿಂಚಿದ್ದೇನು?

ಆದರೆ ಭಿನ್ನಮತೀಯರ ಗುಂಪು ಗೋವಾದ ಮಡಗಾಂವ್‌ನ ಹೋಟೆಲ್ ಹೊಕ್ಕ ಮೇಲೆ ರೇಣುಕನ ಆಟಾಟೋಪದ ಹೇಳಿಕೆಗಳು ತಣ್ಣಗಾಗತೊಡಗಿದ್ದವು. ಕ್ಯಾಪು ಸಿಕ್ಕರೆ ಕೊಚ್ಚೆಗುಂಡಿಗೂ ಬೀಳಬಲ್ಲ ಇವನ ಸ್ವಭಾವವನ್ನು ಹತ್ತಿರದಿಂದಲೇ ನೋಡಿದ್ದ ಯಡ್ಡಿ-ರೆಡ್ಡಿಗಳು ರೇಣುಕನಿಗೆ ಮತ್ತೆ ಬೆಣ್ಣೆ ಒರೆಸತೊಡಗಿದರು.



ಎಂಜಲನ್ನೇ ಪ್ರಸಾದ ಎನ್ನುವ ಲಿಂಗವಂತ ರೇಣುಕ ಥಟ್ ಅಂತ ಪ್ಲೇಟು ಬದಲಿಸತೊಡಗಿದ. ಅಕ್ಟೋಬರ್ 11ರ ವಿಶ್ವಾಸಮತಕ್ಕೆ ನಾಲ್ಕು ದಿನ ಬಾಕಿ ಇರುವಾಗ ಟಿವಿ ಮಾಧ್ಯಮಗಳ ಮೂಲಕ ಬಾಯಿ ತೆರೆದ ರೇಣುಕ, ಅಲ್ಲಿವರೆಗೂ ಏನೇನೂ ಆಗೇ ಇಲ್ಲವೆಂಬಂತೆ, 'ನಾವೆಲ್ಲ ಯಡಿಯೂರಪ್ಪರ ನೇತೃತ್ವದಲ್ಲಿ ಅಚಲ ವಿಶ್ವಾಸ ಹೊಂದಿದ್ದೇವೆ. ಶುಕ್ರವಾರ (ಅಕ್ಟೋಬರ್ 8)ದಂದು ಎಲ್ಲರೂ ಬೆಂಗಳೂರಿಗೆ ಬರಲಿದ್ದೇವೆ' ಎಂದು ಮಡಗಾಂವ್ ಹೋಟೆಲ್‌ನಿಂದ ಏಕಾಏಕಿ ಘೋಷಿಸಿ ರಾಜ್ಯದ ರಾಜಕೀಯ ವಲಯ ಗಲಿಬಿಲಿಗೊಳ್ಳುವಂತೆ ಮಾಡಿದ. ಇವನ ಜೊತೆಗಿದ್ದ ಭಿನ್ನಮತೀಯರು ಈ ಕಮಂಗಿಯ ದಿಢೀರ್ ಬದಲಾವಣೆಯನ್ನು ಕಂಡು ಹೌಹಾರಿದರು. ಇಂಥವನು ತಮ್ಮ ಜೊತೆಗಿದ್ದರೆ ಉಳಿದಿರೋ ಮೂರು ಕಾಸಿನ ಮರ್ಯಾದೆಯೂ ಹೋಗುತ್ತದೆ ಎಂದರಿತ ಭಿನ್ನಮತೀಯರು ರೇಣುಕನನ್ನು ಒದ್ದು ಆಚೆ ಕಳಿಸಿದರು. ಬೆಂಗಳೂರಿಗೆ ಏಕಾಂಗಿಯಾಗಿ ಬಂದ ರೇಣುಕನ ಬಾಂಬ್ ಠುಸ್ ಆಗಿತ್ತು, ಆದರೆ ಅವನ ಜೇಬಂತೂ ಭರ್ತಿಯಾಗಿತ್ತು. ಎರಡೂ ಕಡೆಯಿಂದಲೂ ಬಾಚಿದ ರೇಣುಕ ಮುಂದಿನ ಬೆಳವಣಿಗೆಗಳ ಬಗ್ಗೆ ತಲೆಕೆಡಿಸಿಕೊಳ್ಳದೇ ಸೈಲೆಂಟಾಗಿಬಿಟ್ಟ...

ಇದು ರೇಣುಕನ ಹುಟ್ಟುಗುಣ. ಕಳೆದ ವರ್ಷವಷ್ಟೇ ಮಂತ್ರಿಗಿರಿಗಾಗಿ ಈ ಎಡವಟ್ಟು ಯಡ್ಡಿ ವಿರುದ್ಧ ತಿರುಗಿಬಿದ್ದಿದ್ದ. ಆಗ ಯಡ್ಡಿ ಸರ್ಕಾರದ ವಿರುದ್ಧ ಭಿನ್ನಮತ ಶುರು ಮಾಡಿದ್ದ ಬಳ್ಳಾರಿ ರೆಡ್ಡಿಗಳ ಬಾಲಂಗೋಚಿಯಾಗಿದ್ದ ರೇಣುಕ, ಇಲ್ಲಿ ನೆರೆಪ್ರವಾಹ ಪೀಡಿತರು ಸಾಯುತ್ತಿರುವಾಗ ಹೈದರಾಬಾದಿನ ರೆಸಾರ್ಟಿನಲ್ಲಿ ಮೋಜು-ಮಸ್ತಿ ನಡೆಸಿದ್ದ. ಅಲ್ಲಿ ರೆಡ್ಡಿಗಳಿಂದ ಸಿಕ್ಕಷ್ಟು ಗೆಬರಿಕೊಂಡ ಈತ, ಭಿನ್ನಮತ ಶಮನವಾದ ನಂತರ ಲಿಂಗಾಯತ ಸ್ವಾಮಿಗಳ ಕಾಲಿಗೆ ಬಿದ್ದು ಯಡ್ಡಿಯ ಸಚಿವ ಸಂಪುಟದಲ್ಲಿ ಅಬಕಾರಿ ಸಚಿವನಾದ. ಅಬಕಾರಿ ಖಾತೆಯಲ್ಲೂ ಸಾಕಷ್ಟು ಗೋಲ್‌ಮಾಲ್ ಶುರುಮಾಡಿ ಹೊಸಹೊಸ ಯೋಜನೆಗಳನ್ನು ತೇಲಿಬಿಟ್ಟು ಅಬಕಾರಿ ಕುಳಗಳಿಂದ ಭರ್ತಿ ವಸೂಲಿ ಮಾಡಿದ. ಹೋದಲ್ಲಿ, ಬಂದಲ್ಲಿ 'ಯಡಿಯೂರಪ್ಪ ನನ್ನ ಅಪ್ಪನಿದ್ದಂತೆ' ಎಂದು ಬಹುಪರಾಕ್ ಹಾಕಿದ. ಲೋಕಾಯುಕ್ತರ ತನಿಖೆಯ ಕಾರಣದಿಂದಾಗಿ ಯಡ್ಡಿ ಅಕ್ರಮ ಗಣಿಗಾರಿಕೆಯ ವಿರುದ್ಧ ಕೆಲ ಕ್ರಮಗಳನ್ನು ತೆಗೆದುಕೊಂಡಾಗ ರೆಡ್ಡಿಗಳು ಮುನಿಸಿಕೊಂಡು ಮತ್ತೆ ಭಿನ್ನಮತದ ಧ್ವನಿ ಎತ್ತಿದಾಗ, ಯಡ್ಡಿಯ ಪರವಿದ್ದ ರೇಣುಕ, 'ಈ ರಾಜ್ಯದ ಸಂಪತ್ತನ್ನು ಕೊಳ್ಳೆ ಹೊಡೆದ ಗಣಿ ಮಾಫಿಯಾಕ್ಕೆ ಪಾಠ ಕಲಿಸಬೇಕು' ಎಂದು ಎಗರಾಡಿದ.

ಈಗ ಯಡ್ಡಿ ವಿರುದ್ಧ ಹೋಗಿ, ಅಷ್ಟೇ ವೇಗದಲ್ಲಿ ಯಡ್ಡಿ-ರೆಡ್ಡಿಗಳ ಪಾದಕ್ಕೆ ಬಿದ್ದಿರುವ ಈ ಮಾನಗೇಡಿ ಸಚಿವ ಎರಡೂ ಕಡೆಗಳಿಂದಲೂ ಭಕ್ಷೀಸು ಪಡೆದು ಕೃತಾರ್ಥನಾಗಿದ್ದಾನೆ. ಅಂದಂತೆ ಸದ್ಯ ಹತ್ತಾರು ಕೋಟಿಗಳ ಲೆಕ್ಕದಲ್ಲಿ ಕುದುರೆ ವ್ಯಾಪಾರ ನಡೆಯುತ್ತಿರುವುದನ್ನು ನೋಡಿದರೆ ಈ ಜಾತ್ರೆಯಲ್ಲಿ ಗೆದ್ದವನೇ ರೇಣುಕ ಎಂದು ಜನ ಆಡಿಕೊಳ್ಳುವಂತಾಗಿದೆ...

ಎಲ್ಲಿಗೆ ಬಂತು ನೋಡಿ ರಾಜ್ಯ ರಾಜಕಾರಣ?

● ಮಲ್ಲನಗೌಡರ್

ಯಡ್ಡಿ ಫ್ಯಾಮಿಲಿ ಭೂದಾಹಕ್ಕೆ ಕುಟುಂಬ ಬಲಿ

ಮುಖ್ಯಮಂತ್ರಿಯೊಬ್ಬನ ಸಣ್ಣಬುದ್ಧಿ ಆತನ ಕುಟುಂಬದ ಭೂದಾಹದ ವಿರುದ್ಧ ಕೇವಲ ಮಂತ್ರಿಗಳು ಶಾಸಕರಷ್ಟೇ ಅಲ್ಲ ಸ್ವಂತ ಊರಿನ ಜನ ಕೂಡ ತಿರುಗಿಬಿದ್ದಿದ್ದಾರೆ!

ಯಡ್ಡಿ ಕುಟುಂಬದ ಕ್ರೌರ್ಯ ಮತ್ತು ಲೋಭಿತನಕ್ಕೆ ಬಹುಶಃ ಇದಕ್ಕಿಂತ ಮತ್ತೊಂದು ನಿದರ್ಶನ ಸಿಗಲಿಕ್ಕಿಲ್ಲ. ಕೇವಲ 5.24 ಎಕರೆ ಭೂಮಿಗಾಗಿ ಶಿಕಾರಿಪುರದ ನಿರ್ಗತಿಕ ಕುಟುಂಬವೊಂದಕ್ಕೆ ಮುಖ್ಯಮಂತ್ರಿ ಮತ್ತು ಮಗ ರಾಘವೇಂದ್ರ ಕೊಟ್ಟ ಕಾಟ ಮತ್ತು ನಡೆಸಿದ ದೌರ್ಜನ್ಯವನ್ನು



ಶಿವಮೊಗ್ಗದ ಯಾವೊಂದು ಪತ್ರಿಕೆಯೂ ಬರೆಯುತ್ತಿಲ್ಲ. ಜನಪರ ಹೋರಾಟಗಾರರು, ವಿರೋಧಿ ಮುಖಂಡರು ಯಾರಿಗೂ ಶಿಕಾರಿಪುರದ ಈ ನಿರ್ಗತಿಕ ಕುಟುಂಬದ ಕಣ್ಣೀರು ಕಾಣಿಸುತ್ತಿಲ್ಲ.

ಅದು ರೇವಣಕರ್ ಕುಟುಂಬ. ತಮ್ಮ ಆಸ್ತಿ ಲಪಟಾಯಿಸಿದ ಮುಖ್ಯಮಂತ್ರಿಯ ಕುಟುಂಬದ ವಿರುದ್ಧ ಶಿಕಾರಿಪುರದ ತಾಲ್ಲೂಕು ಕಚೇರಿಯ ಎದುರು ರೇವಣಕರ್ ಕುಟುಂಬ ಧರಣಿ ಸತ್ಯಾಗ್ರಹ ಆರಂಭಿಸಿ ಇವತ್ತಿಗೆ 78 ದಿನಗಳಾದವು. 2010 ರ ಜುಲೈ 26 ರಿಂದ ಯಡ್ಡಿ ಕುಟುಂಬದ ದೌರ್ಜನ್ಯದ ವಿರುದ್ಧ ಸರದಿ ಉಪವಾಸ ಸತ್ಯಾಗ್ರಹ ಆರಂಭಿಸಿದ ರೇವಣಕರ್ ಕುಟುಂಬದ ವಿರುದ್ಧ ದಬ್ಬಾಳಿಕೆಗೇ ನುಗ್ಗಿದ ಮಗ ರಾಘವೇಂದ್ರ ಧಮಕಿ ಹಾಕಿದ್ದಾನೆ. ಈ ಬಗ್ಗೆ ಶಿಕಾರಿಪುರ ಪೊಲೀಸರಿಗೆ ದೂರು ಕೊಟ್ಟರೆ ಪೊಲೀಸರು ಅದನ್ನು ಕಸದಬುಟ್ಟಿಗೆ ಎಸೆದಿದ್ದಾರೆ.

ರೇವಣಕರ್ ಕುಟುಂಬ

ತಮ್ಮ ಪಿತ್ರಾರ್ಜಿತ ಆಸ್ತಿಗೆ ಕಾಲಿಟ್ಟ ರೇವಣಕರ್ ಕುಟುಂಬವನ್ನು ಯಡ್ಡಿ ಮಗ ರಾಘು ಪೊಲೀಸರನ್ನು ಛೂಬಿಟ್ಟು ಹೊಡೆಸಿದ್ದಾನೆ. ಲಾಕಪ್ಪಿಗೆ ಹಾಕಿಸಿದ್ದಾನೆ. ಒಂದಲ್ಲ ಅನೇಕ ಬಾರಿ ರೇವಣಕರ್ ವಂಶಸ್ಥರನ್ನು ಶಿಕಾರಿಪುರ ಪೊಲೀಸರು ಬಂಧಿಸಿದ್ದಾರೆ. ಬೆದರಿಸಿದ್ದಾರೆ. ಬಾಡಿಗೆ ಬಂಟರನ್ನು ಬಿಟ್ಟು ಪೀಡಿಸಿದ್ದಾರೆ. ಇಷ್ಟಾಗ್ಯೂ ತಮ್ಮ 5.24 ಎಕರೆ ಪಿತ್ರಾರ್ಜಿತ ಆಸ್ತಿಗಾಗಿ ಕಳೆದ ಎರಡೂವರೆ ತಿಂಗಳಿಂದ ಶಿಕಾರಿಪುರದ ತಹಶೀಲ್ದಾರ್ ಕಚೇರಿ ಎದುರು ಸರದಿ ಉಪವಾಸ ಸತ್ಯಾಗ್ರಹ ನಡೆಸುತ್ತಿರುವ ರೇವಣಕರ್ ಕುಟುಂಬಕ್ಕೆ ನ್ಯಾಯ ಕೊಡಿಸುವ ಕನಿಷ್ಠ ಪ್ರಜ್ಞೆಯಾಗಲಿ, ಕಾಳಜಿಯಾಗಲಿ ಮುಖ್ಯಮಂತ್ರಿಗಿದ್ದಂತಿಲ್ಲ.

ಶಿಕಾರಿಪುರದ ಶಿವಮೊಗ್ಗದ ರಸ್ತೆಯಲ್ಲಿರುವ ಐದೆಕರೆ ... ಗುಂಟೆ ಜಮೀನಿನ ಮೇಲೆ ಯಡ್ಡಿ ಮಗ ರಾಘು ಕಣ್ಣು ಹಾಕಿದ್ದು 2007 ರಲ್ಲಿ. ಈ ಭೂಮಿಗೆ ಹೊಂದಿಕೊಂಡಂತೆಯೇ ಯಡ್ಡಿ ಒಡೆತನದ ಕುಮುದ್ವತಿ ಕಾಲೇಜಿನ ಕಟ್ಟಡವಿದೆ. ಯಡ್ಡಿಯ ಸ್ವಾಮಿ ವಿವೇಕಾನಂದ ಎಜ್ಯುಕೇಷನ್ ಟ್ರಸ್ಟ್ ವತಿಯಿಂದ ನಡೆಯುವ ಕುಮುದ್ವತಿ ಕಾಲೇಜೆಂದರೆ ಅದು ಬಿಎಡ್, ಟಿಸಿಎಚ್, ನರ್ಸಿಂಗ್, ಕಾನ್ವೆಂಟು, ಸ್ಕೂಲು, ವಿವಿಧ ಹಾಸ್ಟೆಲ್‌ಗಳಿರುವ ವಿಶಾಲ ಐವತ್ತೆಕರೆಯ ಇನ್‌ಸ್ಟಿಟ್ಯೂಷನ್ ಹುತ್ತವಿದ್ದಂತೆ. ಇಷ್ಟೆಲ್ಲ ಕಾಲೇಜು-ಕಾನ್ವೆಂಟು ಇದ್ದರೂ ರೊಕ್ಕ ಬಾಚಲು ಸಿಬಿಎಸ್‌ಸಿ ಸ್ಕೂಲು ಇದ್ದರಷ್ಟೇ ದಕ್ಕೋಬಹುದು ಯಡ್ಡಿ ಮಗ ರಾಘವೇಂದ್ರನ ದುರಾಶೆ. ಇಂಥದೊಂದು ಸಿಬಿಎಸ್‌ಸಿ ಸ್ಕೂಲಿಗೆಂದೇ ಕುಮುದ್ವತಿ ಕಾಲೇಜಿಗೆ ಹೊಂದಿಕೊಂಡಿದ್ದ ರೇವಣಕರ್ ಕುಟುಂಬದ ಆಸ್ತಿಗೆ ವಕ್ಕರಿಸಿದ. ಈ 5.24 ಎಕರೆ ಆಸ್ತಿಗೆ ಮೂಲಪುರುಷರಾಗಿದ್ದದ್ದು ಸುಬ್ರಹ್ಮಣ್ಯ ರೇವಣಕರ್. 1976 ರಲ್ಲಿ ಇದನ್ನು ಖರೀದಿಸಿದ್ದ ಸುಬ್ರಹ್ಮಣ್ಯ ರೇವಣಕರ್‌ಗೆ 8 ಮಂದಿ ಗಂಡು ಮಕ್ಕಳು ಮತ್ತು ಐದು ಹೆಣ್ಣುಮಕ್ಕಳು. ಈ ಪೈಕಿ ನಾಗೇಶ್ವರ್, ಮನೋಹರ್, ಗೋಪಾಲ್, ನಾರಾಯಣ, ಚಂದ್ರಕಾಂತ್, ಕೃಷ್ಣ, ವೆಂಕಟೇಶ್ ಮತ್ತು ಸುರೇಶ್ ಮದುವೆಯಾಗಿದ್ದಾರೆ. ಇವರಿಗೆ ಸುಬ್ರಹ್ಮಣ್ಯ, ಮಂಜುನಾಥ್, ನಾಗರಾಜ್, ಪ್ರವೀಣ್ ಮತ್ತು ದೀಪು ಎಂಬ ವಯಸ್ಕ ಮಕ್ಕಳಿದ್ದಾರೆ. ಯಾರೂ ಅನುಕೂಲಸ್ಥರಲ್ಲ. ಆಸ್ತಿ ಇನ್ನೂ ಹಂಚಿಕೆಯಾಗಿಲ್ಲ.

ಬೆದರಿಸಿ ಬರೆಸಿಕೊಂಡದ್ದು

ಕುಮಾರಸ್ವಾಮಿ ಸರ್ಕಾರದಲ್ಲಿ ಯಡ್ಡಿ ಉಪಮುಖ್ಯಮಂತ್ರಿಯಾಗಿದ್ದೇ ರಾಘು ರೇವಣಕರ್ ಆಸ್ತಿಗೆ ವಕ್ಕರಿಸಿಬಿಟ್ಟ. 8 ಮಂದಿ ಮಕ್ಕಳ ಪೈಕಿ 6ನೆಯವನಾದ ಕೃಷ್ಣ ರೇವಣಕರ್‌ಗೆ ಅಷ್ಟಿಷ್ಟು ಕಾಸು ತಿನ್ನಿಸಿದ್ದೇ ಆತನನ್ನು ತನ್ನ ಮನೆಗೇ ಕರೆಸಿಕೊಂಡು ಅಗ್ರಿಮೆಂಟ್ ಮಾಡಿಸಿಕೊಂಡ. ಇದಾಗಿ 6 ತಿಂಗಳಿಗೇ 85 ವರ್ಷದ ಮುದುಕಿ ರತ್ನಾಬಾಯಿಯನ್ನು ಶಿಕಾರಿಪುರದ ರಿಜಿಸ್ಟ್ರಾರ್ ಕಚೇರಿಗೆ ಕರೆಸಿಕೊಂಡ ರಾಘು ಇಡೀ ಆಸ್ತಿಯನ್ನು ತನ್ನ ಛೇಲಾ ಮತ್ತು ವಿವೇಕಾನಂದ ಶಿಕ್ಷಣ ಟ್ರಸ್ಟ್‌ನ ಏಜೆಂಟ್ ಎಂ.ಬಿ. ಶಿವಕುಮಾರ್‌ನ ಹೆಸರಿಗೆ ವರ್ಗಾಯಿಸಿಕೊಂಡ.


ಸುಬ್ರಹ್ಮಣ್ಯ ರೇವಣಕರ್‌ರ ವಯೋವೃದ್ಧ ಪತ್ನಿ ರತ್ನಾಬಾಯಿ, ಮಗ ಕೃಷ್ಣ ಮತ್ತು ಇತರೇ ಐದು ಮಂದಿಯನ್ನು ಬಿಟ್ಟರೆ ಹಕ್ಕುದಾರರಾಗಿದ್ದ ಇನ್ನೂ 13 ಮಂದಿಯನ್ನು ಲೆಕ್ಕಕ್ಕೇ ಇಡಲಿಲ್ಲ. 20 ಮಂದಿ ವಾರಸುದಾರರ ಪೈಕಿ ಕೇವಲ 8 ಮಂದಿಯ ಸಹಿಯನ್ನಷ್ಟೇ ಹಾಕಿಸಿಕೊಂಡು 2008 ರ ಜನವರಿ 10 ರಂದು ಛೇಲಾ ಶಿವಕುಮಾರನ ಹೆಸರಿಗೆ ರಿಜಿಸ್ಟ್ರೇಷನ್ ಮಾಡಿಸಿಕೊಂಡ ರಾಘು ಇದಾಗಿ ತಿಂಗಳಿಗೇ ಜಮೀನಿನ ಖಾತೆ ಬದಲಾವಣೆಯನ್ನೂ ಮಾಡಿಸಿಬಿಟ್ಟ.




ಇದು ಗೊತ್ತಾಗಿದ್ದೇ ಮೊಮ್ಮಗ ಸುಬ್ರಹ್ಮಣ್ಯ ರೇವಣಕರ್, ಮಂಜುನಾಥ್, ಪ್ರವೀಣ್, ದೀಪು ಮುಂತಾದವರೆಲ್ಲ ಖಾತೆ ಬದಲಾಯಿಸದಂತೆ ಶಿಕಾರಿಪುರದ ತಹಶೀಲ್ದಾರ್‌ಗೆ ದೂರು ಕೊಟ್ಟಿದ್ದಾರೆ. ಜೊತೆಗೆ ವಂಶವೃಕ್ಷವನ್ನೂ ಲಗತ್ತಿಸಿ ದೂರು ಕೊಟ್ಟಿದ್ದರೂ ಶಿಕಾರಿಪುರದ ತಹಶೀಲ್ದಾರ್ ಶಿವಕುಮಾರನ ಹೆಸರಿಗೆ ಖಾತೆ, ಪಹಣಿ ಮಾಡಿ ಕೊಟ್ಟುಬಿಟ್ಟರು. ಈ ಹಂತದಲ್ಲಿ ಮುಖ್ಯಮಂತ್ರಿ ಕುಟುಂಬ ತನ್ನೆಲ್ಲಾ ಅಧಿಕಾರ ಬಳಸಿ ಹೆಜ್ಜೆ ಹೆಜ್ಜೆಗೂ ಕಾನೂನನ್ನು ಉಲ್ಲಂಘಿಸಿದ್ದು ಮಾತ್ರವಲ್ಲ ಒಂದರ ಮೇಲೊಂದು, ಅಕ್ರಮಗಳನ್ನು ಎಸಗುತ್ತಲೇ ಹೋಯಿತು.

ರಾಘು ಹೆಸರಿಗೆ?

ಯಾವುದೇ ಭೂಮಿಯ ರಿಜಿಸ್ಟ್ರೇಷನ್ ನಡೆದ ತಿಂಗಳಿಗೇ ಖಾತೆ ಬದಲಾವಣೆಗೆ ತಕರಾರು ಪರಿಶೀಲಿಸಬೇಕಿತ್ತು, ಮುಟೇಶನ್‌ನ ನಮೂನೆ 21 ಅನ್ನು ಜಾರಿ ಮಾಡಬೇಕಿತ್ತು, ರೇವಣಕರ್ ಕುಟುಂಬದ ಬಹುತೇಕರು ಸಲ್ಲಿಸಿದ ದೂರನ್ನು ಸ್ವೀಕರಿಸಿದ ಶಿಕಾರಿಪುರದ ತಹಶೀಲ್ದಾರ್ ಸಾಗರದ ಕಂದಾಯ ಉಪ ವಿಭಾಗಾಧಿಕಾರಿಗೆ ದೂರು ಸಲ್ಲಿಸುವಂತೆ ಹೇಳಿ ಜಾರಿಕೊಂಡರೆ, ಸಾಗರದ ಉಪ ವಿಭಾಗಾಧಿಕಾರಿಯೇ ನಿಂತು ರೇವಣಕರ್ ಕುಟುಂಬದವರನ್ನು ವಂಚಿಸಿಬಿಟ್ಟ. ಖಾತೆ ಬದಲಾವಣೆಯನ್ನು ತಡೆಯುವ ಎಲ್ಲಾ ಅವಕಾಶ ಮತ್ತು ಅಧಿಕಾರ ಇದ್ದೂ ಸಾಗರದ ಅಸಿಸ್ಟೆಂಟ್ ಕಮೀಷನರ್ 2 ವರ್ಷಗಳ ಕಾಲ ವಿಚಾರಣೆ ಮುಂದೂಡಿಕೊಂಡೇ ಬಂದ. 2008 ರ ಏಪ್ರಿಲ್ 2 ರಂದು ಕೊಟ್ಟ ಅರ್ಜಿಯ ದಿನಾಂಕವನ್ನು 2010 ರ ಏಪ್ರಿಲ್ 19 ರಂದು ತಿದ್ದಿದ್ದ ಅಂತಿಮವಾಗಿ 2010 ರ ಜೂನ್ 2 ರಂದು ಮತ್ತೆ ಸಿವಿಲ್ ಕೋರ್ಟ್‌ಗೆ ಹೋಗುವಂತೆ ಷರಾ ಬರೆದು ಕೊಟ್ಟ.



ಈ ಮಧ್ಯೆ 2010 ರ ಜನವರಿ 12 ರಂದು ಶಿವಕುಮಾರ್ ರೇವಣಕರ್ ಕುಟುಂಬದ ಇಡೀ ಆಸ್ತಿಯನ್ನು ಯಡ್ಡಿ ಮಗ ಬಿ.ವೈ. ರಾಘವೇಂದ್ರನ ಹೆಸರಿಗೆ ವರ್ಗಾಯಿಸಿದ್ದ. ರೇವಣಕರ್‌ರ ಸೊತ್ತಿನಲ್ಲಿ ಸದ್ದಿಲ್ಲದೇ ಕುಮುದ್ವತಿ ಸಿಬಿಎಸ್‌ಸಿ ಸ್ಕೂಲಿನ ಕಟ್ಟಡ ತಲೆ ಎತ್ತಲಾರಂಭಿಸಿತು. ಗಾಬರಿಗೊಂಡ ರೇವಣಕರ್ ಕುಟುಂಬದವರು ಇನ್ನೆಲ್ಲಿ ಜಮೀನು ಕೈತಪ್ಪುತ್ತೋ ಎಂದು ಸ್ಕೂಲಿನ ಕಟ್ಟಡದ ಎದುರೇ ಹೋಗಿ ಧರಣಿ ಕುಂತರು. ಅಷ್ಟಕ್ಕೇ ಮೂರು ಜೀಪುಗಳ ತುಂಬ ಪೊಲೀಸರನ್ನು ಕರೆತಂದ ಸರ್ಕಲ್ ಇನ್ಸ್‌ಪೆಕ್ಟರ್ ಸುರೇಶ್‌ಕುಮಾರ್ ಮತ್ತು ಡಿವೈಎಸ್‌ಪಿ ವಿದ್ಯಾಶಂಕರ್ ಶಾಮಿಯಾನಾ ಸಮೇತ ರೇವಣಕರ್ ಕುಟುಂಬದವರನ್ನು ಎಳೆದೊಯ್ದು ಲಾಕಪ್ಪಿಗೆ ದಬ್ಬಿದ್ದರು.



ತೊಲಗುವುದೇ ಶನಿ?

ಪೊಲೀಸ್ ದೌರ್ಜನ್ಯದ ವಿರುದ್ಧ ಕೊಟ್ಟ ದೂರಿಗೆ ಕವಡೆ ಕಿಮ್ಮತ್ತು ಸಿಗಲಿಲ್ಲ. ಸ್ಕೂಲಿನ ಉದ್ಘಾಟನೆಗೆಂದು ಬಂದ ಮುಖ್ಯಮಂತ್ರಿ ಯಡ್ಡಿಗೆ ತಮಗಾದ ಅನ್ಯಾಯದ ವಿರುದ್ಧ ಮನವಿಪತ್ರ ಸಲ್ಲಿಸಲು ಯತ್ನಿಸಿದ ರೇವಣಕರ್ ಕುಟುಂಬದವರನ್ನು ರಾಘುವೇ ಪೊಲೀಸರನ್ನು ಛೂಬಿಟ್ಟು ಆರೆಸ್ಟ್ ಮಾಡಿಸಿದ್ದ. ಕಾರ್ಯಕ್ರಮ ಮುಗಿದು ಮುಖ್ಯಮಂತ್ರಿ ಊರು ಬಿಡುವತನಕ ರೇವಣಕರ್ ವಂಶಸ್ಥರನ್ನೆಲ್ಲ ಪೊಲೀಸ್ ಠಾಣೆಯಲ್ಲಿ ಬಂಧಿಸಿಡಲಾಗಿತ್ತು. ಕೊನೆಗೆ ರೋಸತ್ತ ರೇವಣಕರ್ ಕುಟುಂಬ 2010 ರ ಜುಲೈ 26 ರಿಂದ ಶಿಕಾರಿಪುರದ ತಹಶೀಲ್ದಾರ್ ಕಛೇರಿ ಎದುರು ಅನಿರ್ದಿಷ್ಟಾವಧಿಯ ಸರದಿ ಉಪವಾಸ ಸತ್ಯಾಗ್ರಹವನ್ನು ಆರಂಭಿಸಿದೆ.

ಕುಟೀರಕ್ಕೇ ನುಗ್ಗಿದ

ದುರಂತವೆಂದರೆ ಶಿವಮೊಗ್ಗದ ಪತ್ರಿಕೆಗಳಾಗಲಿ, ಶಿಕಾರಿಪುರದ ಪತ್ರಕರ್ತರಾಗಲಿ ಮುಖ್ಯಮಂತ್ರಿ ಕುಟುಂಬದ ಈ ಅಟ್ಟಹಾಸದ ವಿರುದ್ಧ ಕಾಟಾಚಾರಕ್ಕೂ ಸುದ್ದಿ ಮಾಡಲಿಲ್ಲ. ಇನ್ನೂ ಧಾರ್ಷ್ಟ್ಯವೆಂದರೆ ತನ್ನ ಹುಟ್ಟುಹಬ್ಬಕ್ಕೆಂದು ಶಿಕಾರಿಪುರಕ್ಕೆ ಬಂದಿದ್ದ ಸಂಸದ ರಾಘವೇಂದ್ರ 2010 ರ ಆಗಸ್ಟ್ 16 ರ ರಾತ್ರಿ ಒಂಭತ್ತೂವರೆಗೆ ತನ್ನ ಭಟ್ಟಂಗಿ ಪಡೆ ಕಟ್ಟಿಕೊಂಡಿದ್ದೇ ಏಕಾಏಕಿ ಸತ್ಯಾಗ್ರಹದ ಕುಟೀರಕ್ಕೇ ನುಗ್ಗಿ ರೇವಣಕರ್ ಕುಟುಂಬದ ಚಂದ್ರಕಾಂತ್, ವೆಂಕಟೇಶ್, ನಾಗರಾಜ್, ಮನೋಜ್ ಮತ್ತು ಸುಬ್ರಹ್ಮಣ್ಯ ಮುಂತಾದವರಿಗೆ ಧಮಕಿ ಹಾಕಿಬಿಟ್ಟ.

'ನನಗೆ ಜಮೀನು ಮಾರಿದ್ದು ನೀವಲ್ಲ ಶಿವಕುಮಾರ್. ನೀವುಂಟು ಶಿವಕುಮಾರ್ ಉಂಟು. ನಮ್ಮ ಫ್ಯಾಮಿಲಿ ಹೆಸರು ಎಳೆದರೆ ನಿಮ್ಮನ್ನ ಸುಮ್ಮನೇ ಬಿಡೋಲ್ಲ, ಏನು ಮಾಡಬೇಕೋ ಗೊತ್ತಿದೆ. ಮಾಡಿ ತೋರಿಸ್ತೀನಿ...' ಎಂದು ವಿಷಕಾರಿದ ರಾಘು ವಿರುದ್ಧ ಆವತ್ತೇ ಪೊಲೀಸರಿಗೆ ದೂರು ಕೊಟ್ಟಿದ್ದಾರೆ. ಮುಖ್ಯಮಂತ್ರಿ ಮಗನ ವಿರುದ್ಧ ದೂರು ದಾಖಲಾಗುವುದುಂಟಾ? ಪೊಲೀಸರು ಕ್ರಮ ಜರುಗಿಸಲು ಸಾಧ್ಯವಾ? ಈ ಬಗ್ಗೆ ಶಿವಮೊಗ್ಗದ ಎಸ್‌ಪಿಗೂ ದೂರು ಕೊಟ್ಟ ಯಡ್ಡಿ ಪೀಡಿತರು ವ್ಯರ್ಥ ಅಲೆದದ್ದು ಬಿಟ್ಟರೆ ನಯಾಪೈಸೆಯ ಪ್ರಯೋಜನವಾಗಿಲ್ಲ.

ಉಪವಾಸ ಶುರುವಾಗಿ ಎರಡೂವರೆ ತಿಂಗಳಾಗುತ್ತಾ ಬಂದಿದೆ. ಹೊರಪ್ರಪಂಚಕ್ಕಿದು ಗೊತ್ತೇ ಆಗದಂತೆ ಬಂದೋಬಸ್ತು ಮಾಡಿದ ರಾಘುವಿಗಾಗಲಿ, ಅಪ್ಪ ಯಡ್ಡಿಗಾಗಲಿ ರೇವಣಕರ್ ವಾರಸುದಾರರಿಗೆ ಒಂದೆರಡು ಕೋಟಿ ಕೊಡುವುದು ಯಾವ ಮಹಾ? ಆದರೆ ದುರಾಶೆ ಬಿಡಬೇಕಲ್ಲ; ಅಣ್ಣತಮ್ಮಂದಿರ ಪೈಕಿ ಒಬ್ಬನಿಗೆ ಚೂರುಪಾರು ಕಾಸು ಕೊಟ್ಟು ಮಿಕ್ಕವರನ್ನು ಬೆದರಿಸಿ ಸಹಿ ಪಡೆದಿದ್ದಾರೆ. ತಮ್ಮ ಏಜೆಂಟನ ಮೂಲಕ ಹುಷಾರಾಗಿ ಆಸ್ತಿ ಲಪಟಾಯಿಸಿದ್ದಾರೆ. ಅದಕ್ಕೆ ತಹಶೀಲ್ದಾರ್, ಉಪ ವಿಭಾಗಾಧಿಕಾರಿಗಳನ್ನೂ ಬಳಸಿಕೊಂಡಿದ್ದಾರೆ. ಅವರಿಂದ ಪದೇಪದೇ ಕಾನೂನನ್ನು ಉಲ್ಲಂಘಿಸುವಂತೆ ಮಾಡಿದ್ದಾರೆ.

ನರಸತ್ತ ಕಾನೂನು

ಹಾಳಾಗಲಿ, ಓರ್ವ ಮುಖ್ಯಮಂತ್ರಿಯಾಗಿದ್ದು ತಾನು ಕನಿಷ್ಠ ಕಾನೂನನ್ನಾದರೂ ಪಾಲಿಸಬೇಕಲ್ಲವೆ? ರೇವಣಕರ್ ಆಸ್ತಿಯನ್ನು ಲಪಟಾಯಿಸಿದ ನಂತರವಾದರೂ ಅಲ್ಲಿ ಕಾನ್ವೆಂಟ್ ಕಟ್ಟಿಸಬೇಕೆಂದರೆ, ಕೃಷಿ ಭೂಮಿಯನ್ನು ಭೂಪರಿವರ್ತನೆ ಮಾಡಿಸಬೇಕಿತ್ತು. ಕಾಯ್ದೆ ಪ್ರಕಾರ ಅಂಥ ಕೃಷಿ ಭೂಮಿಯನ್ನು ಯಡ್ಡಿ ಮಗ ಖರೀದಿಸಲು ಸಾಧ್ಯವೇ ಇಲ್ಲ. ಹಾಗೊಮ್ಮೆ ಟ್ರಸ್ಟ್ ಹೆಸರಿಗೆ ಖರೀದಿಸಬೇಕೆಂದರೆ ಅದಕ್ಕೆ ಕಂದಾಯ ಇಲಾಖೆಯಿಂದ ಅನುಮತಿ ಬೇಕು.


ಇದ್ಯಾವುದನ್ನೂ ಮಾಡದೇ ಭೂಸುಧಾರಣಾ ಕಾಯ್ದೆಯ 109 ನೇ ಕಲಮನ್ನು ಉಲ್ಲಂಘಿಸಿದೆ ಯಡ್ಡಿ ಕುಟುಂಬ. ಎಕರೆಗೆ ಕನಿಷ್ಠ 40 ಲಕ್ಷದಂತೆ ಲೆಕ್ಕ ಹಾಕಿದರೂ ರಾಘು ಲಪಟಾಯಿಸಿರುವುದು ಎರಡೂಕಾಲು ಕೋಟಿಯ ಆಸ್ತಿಯನ್ನು. ರೇವಣಕರ್ ಕುಟುಂಬದ ಒಂದಿಬ್ಬರಿಗೆ ಹೆಚ್ಚೆಂದರೆ ಐವತ್ತು ಲಕ್ಷ ಕೊಟ್ಟಿದ್ದರೂ ಒಂದೂಮುಕ್ಕಾಲು ಕೋಟಿಯ ಸೊತ್ತನ್ನು ಮುಖ್ಯಮಂತ್ರಿ ಪಟಾಲಂ ನುಂಗಿ ಮುಂಡಾಯಿಸಿದೆ.

ಇದಕ್ಕಾಗಿ ಎಷ್ಟೆಲ್ಲ ಕಾಯ್ದೆ ಕಾನೂನುಗಳನ್ನು ಉಲ್ಲಂಘಿಸಿದರೂ ಸರ್ಕಾರಿ ಅಧಿಕಾರಿಗಳಿಂದ ದುರಾಚಾರವೆಸಗಿದರೂ ಏಕೆ ವಿರೋಧ ಪಕ್ಷಗಳು ಬಾಯಿಮುಚ್ಚಿ ಕೂತಿವೆ? ಲೋಕಾಯುಕ್ತಕ್ಕಿದು ಏಕೆ ಮುಖ್ಯವೆನಿಸುತ್ತಿಲ್ಲ?

ಜನಸಾಮಾನ್ಯನಿಗೊಂದು ಕಾಯ್ದೆ ಮುಖ್ಯಮಂತ್ರಿಗೊಂದು ಕಾಯ್ದೆಯೆ?


• ರಾ. ಸೋಮನಾಥ್
ra.somanath2010@gmail.com

ಶಿಕಾರಿಪುರದ ಹಳೇ ಹುಲಿ ಶಾಂತವೀರಪ್ಪ ಗೌಡರ ಗುಡ್‌ಬೈ



ಇತ್ತ ಬೆಂಗಳೂರಿನಲ್ಲಿ ಯಡ್ಡಿ ಏನೆಲ್ಲಾ ಸರ್ಕಸ್ ಮಾಡಿ ಬಚಾವಾದರೂ ಶಿಕಾರಿಪುರದ ಮಟ್ಟಿಗೆ ಯಡ್ಡಿ ಬುಡಕ್ಕೆ ಬೆಂಕಿಬಿದ್ದಿದೆ. ಈ ಕ್ಷಣಕ್ಕೇ ಮತ್ತೇನಾದರೂ ಚುನಾವಣೆ ಬಂತೆಂದರೆ ಯಡ್ಡಿ ಮಣ್ಣು ಮುಕ್ಕುವುದಂತೂ ಗ್ಯಾರಂಟಿ. ಶಿಕಾರಿಪುರದ ಯಡ್ಡಿ ಭದ್ರಕೋಟೆಗೇ ಬಾಂಬ್ ಇಟ್ಟಿದ್ದಾರೆ ಮಾಜಿ ಎಮ್ಮೆಲ್ಸಿ ಶಾಂತವೀರಪ್ಪ ಗೌಡ. ಯಡ್ಡಿ ಪುರಸಭೆಗೆ ನಿಂತು ಗೆದ್ದಾಗಿನಿಂದ ಹಿಡಿದು ಮುಖ್ಯಮಂತ್ರಿಯಾಗುವ ತನಕ ಅವರಿಗೆ ಆನೆ ಬಲದಂತಿದ್ದ ಶಾಂತವೀರಪ್ಪಗೌಡ ಇಲ್ಲಿಗೆ ತಿಂಗಳ ಹಿಂದಷ್ಟೇ ಬಿಜೆಪಿಗೆ ಗುಡ್‌ಬೈ ಹೇಳಿ ಕಾಂಗ್ರೆಸ್‌ಗೆ ಬಂದಿದ್ದಾರೆ. ಶಿಕಾರಿಪುರದ ಮಟ್ಟಿಗೆ ಯಡ್ಡಿಯ ಪಾಲಿಗಿದು ದೊಡ್ಡ ಹಿನ್ನಡೆಯೇ-ಂ

ಇಡೀ ಶಿಕಾರಿಪುರದ 38 ಸಾವಿರದಷ್ಟಿರುವ ಲಿಂಗಾಯಿತರ ಪೈಕಿ 22 ಸಾವಿರದಷ್ಟಿರುವ ಸಾದರರಿಗೆ ಶಾಂತವೀರಪ್ಪ ಗೌಡರೇ ಲೀಡರ್. ಆ ಕಾರಣಕ್ಕೆ ಯಡ್ಡಿ ಅವರನ್ನು ಎಮ್ಮೆಲ್ಸಿ ಮಾಡಿದ್ದರು. ಪ್ರತಿ ಚುನಾವಣೆಯಲ್ಲೂ ಯಡ್ಡಿ ಪರವಾಗಿ ಇನ್ನಿಲ್ಲದಂತೆ ಹೆಣಗಾಡುತ್ತಿದ್ದ ಶಾಂತವೀರಪ್ಪಗೌಡರನ್ನು ಮುಖ್ಯಮಂತ್ರಿಯಾಗಿದ್ದೇ ಯಡ್ಡಿ ಮೂಲೆಗುಂಪು ಮಾಡಿದರು. ಹಕ್ಕಾ ಬಿಡ್ಡಿ ಪದ್ಮನಾಭ ಭಟ್ಟ, ಭಟ್ಟಂಗಿ ಕೆ. ಶೇಖರಪ್ಪ ಹಾಲಿ ಎಮ್ಮೆಲ್ಸಿ ಸಿದ್ರಾಮಣ್ಣ ಮುಂತಾದವರನ್ನು ಸಿಕ್ಕಾಪಟ್ಟೆ ಬೆಳೆಸತೊಡಗಿದರು. ತಮ್ಮ ಅನಾಚಾರಗಳ ವಿರುದ್ಧ ಕಿಡಿಕಾರುತ್ತಿದ್ದ ಶಾಂತವೀರಪ್ಪ ಗೌಡರನ್ನು ಯಡ್ಡಿಯಾಗಲಿ, ಮಗ ರಾಘುವಾಗಲಿ ಹೇಗೇ ತಾನೇ ಸಹಿಸಲು ಸಾಧ್ಯ? ಬರುಬರುತ್ತ ಯಡ್ಡಿಯ ಜೊತೆ ಮಾತುಕತೆಯನ್ನೇ ನಿಲ್ಲಿಸಿದ ಶಾಂತವೀರಪ್ಪ ಗೌಡ ಅಂತಿಮವಾಗಿ ಕಾಂಗ್ರೆಸ್ ಸೇರುವ ಮೂಲಕ ಬಿಜೆಪಿಗೆ ಪೆಟ್ಟು ಕೊಟ್ಟಿದ್ದಾರೆ. ಶಿಕಾರಿಪುರದ ಕಾಂಗ್ರೆಸ್ ಮಟ್ಟಿಗಿದು ಬಂಪರ್ ಲಾಟರಿಯೇ. ಸದ್ಯ ತಾಲ್ಲೂಕು ಕಾಂಗ್ರೆಸ್ ಅಧ್ಯಕ್ಷರಾಗಿರುವ ಗೋಣಿ ಮಾಲತೇಶ್ ಹೇಳಿಕೇಳಿ ಬಂಗಾರಪ್ಪನವರ ನಂಬಿಕಸ್ತ ಬಂಟ.



ಗೋಣಿ ಮಾಲತೇಶ್

ಒಂದೆಡೆ ಶಾಂತವೀರಪ್ಪ ಗೌಡ ಮತ್ತೊಂದೆಡೆ ಗೋಣಿ ಮಾಲತೇಶ್, ಮಗದೊಂದೆಡೆ ವಿಜಯಲಕ್ಷ್ಮಿ ತಂಬೂರಾ ಸೇರಿದರೆಂದರೆ ಯಡ್ಡಿ ಪಟಾಲಂ ನೆಲಕಚ್ಚುವುದು ಯಾವ ಮಹಾ? ಶಿಕಾರಿಪುರದ ಮಟ್ಟಿಗೆ ಯಡ್ಡಿಯ ಪಾಪದ ಕೊಡ ತುಂಬಿರುವುದಂತೂ ಗ್ಯಾರಂಟಿ-

ತೊಲಗುವುದೇ ಶನಿ?


ಸದ್ಯದ ಪರಿಸ್ಥಿತಿಯನ್ನು ನೋಡುತ್ತಿದ್ದರೆ ಯಡಿಯೂರಪ್ಪ ಅಂಡ್ ಕಂಪೆನಿ ಎಂಬ ಶನಿಗಳು ಕರ್ನಾಟಕದ ಜನರ ಹೆಗಲ ಮೇಲಿನಿಂದ ಕೆಳಗಿಳಿಯುವಂತೆ ಕಾಣುತ್ತಿಲ್ಲ.

ಎರಡನೇ ಸುತ್ತಿನ ವಿಶ್ವಾಸ ಮತ ಯಾಚನೆಯ ಬಿಜೆಪಿಯ ಗೆಲುವನ್ನು 'ಕೇವಲ ಸೆಮಿಫೈನಲ್ ಮಾತ್ರ' ಎಂದು ಕುಮಾರಸ್ವಾಮಿ, ಸಿದ್ಧರಾಮಯ್ಯ ಬಣ್ಣಿಸಿದ್ದೇನೋ ಸರಿ. ಆದರೆ ಅಕ್ಟೋಬರ್ 18ರ ನಂತರ ನಡೆಯಬಹುದಾದ ಫೈನಲ್ ಮ್ಯಾಚ್‌ಗೆ ಬಿಜೆಪಿಯು ಅನೇಕ ಆಯಾಮಗಳ ತಯಾರಿಯನ್ನು ಈಗಾಗಲೇ ಆರಂಭಿಸಿದೆ.

ಹೈಕೋರ್ಟ್ ತೀರ್ಪು ಪಕ್ಷೇತರರ ಪರವಾಗಿ ಬಂದರೆ ಒಂದು ರೀತಿಯ ತಂತ್ರ, ಬಿಜೆಪಿ ಭಿನ್ನಮತೀಯರ ಪರ ಬಂದರೆ ಇನ್ನೊಂದು ಕಾರ್ಯ ತಂತ್ರಕ್ಕೆ ಬಿಜೆಪಿ ಈಗ ತಯಾರಾಗುತ್ತಿದೆ. ಒಂದು ವೇಳೆ ಕೋರ್ಟ್ ತೀರ್ಪು ಬಿಜೆಪಿಗಳ ಪರವಾಗಿಯೇ ಅಕಸ್ಮಾತ್ ಬಂದೇಬಿಟ್ಟರೆ ಅದಕ್ಕೂ ಒಂದು ವ್ಯೂಹತಂತ್ರ ಇದೆ. ಪರಿಸ್ಥಿತಿ ಕೈಮೀರಿದರೆ ಮತ್ತೆ 'ಆಪರೇಷನ್ ಕಮಲ' ನಡೆಸುವ ಯೋಚನೆಯೂ ಇದೆ. ಕೊನೆಗೆ ಪರಿಸ್ಥಿತಿ ತೀರಾ ಹದಗೆಟ್ಟರೆ ವಿಧಾನಸಭೆಯನ್ನೇ ವಿಸರ್ಜಿಸಿ ಹೊಸ ಜನಾದೇಶ ಪಡೆಯಲೇಬೇಕೆಂಬ ಭಂಡ ಧೈರ್ಯವೂ ಯಡ್ಡಿಗೆ ಬರುತ್ತಿದೆ.

ಪಕ್ಷೇತರರು ಗೆದ್ದರೆ?

ಆಗ ಸದನದ ಒಟ್ಟು ಶಾಸಕರ ಸಂಖ್ಯೆ 213ಕ್ಕೇರಿ ಸರಳ ಬಹುಮತಕ್ಕೆ ಯಡ್ಡಿಗೆ 107 ಶಾಸಕರ ಬೆಂಬಲ ಬೇಕಾಗುತ್ತದೆ. ಅದೇ ವೇಳೆಗೆ ವಿರೋಧ ಪಕ್ಷಗಳ ಸದಸ್ಯರ ಸಂಖ್ಯೆ 105ಕ್ಕೇರಿದರೆ ಯಡ್ಡಿ ಪರ ಈಗಿರುವ 106 ಅಷ್ಟೇ ಉಳಿದು ಬಿಕ್ಕಟ್ಟು ಮತ್ತೆ ತಲೆ ಎತ್ತಬಹುದು. ಮೂರನೇ ಬಾರಿ ಮತ್ತೆ ಬಹುಮತ ಸಾಬೀತುಪಡಿಸಬೇಕಾದ ಅನಿವಾರ್ಯತೆಯೂ ಏಳಬಹುದು. ವಿರೋಧ ಪಕ್ಷಗಳು ಇದುವರೆಗೂ ಒಮ್ಮೆಯೂ ಅವಿಶ್ವಾಸ ಗೊತ್ತುವಳಿ ಮಂಡಿಸಿಲ್ಲವಾದ ಕಾರಣ ಒಮ್ಮೆ ವಿಶ್ವಾಸಮತ ಸಾಬೀತುಮಾಡಿದ ಆರು ತಿಂಗಳ ಒಳಗೆ ಮತ್ತೆ ವಿಶ್ವಾಸಮತ ಕೋರುವ ಅಗತ್ಯವಿಲ್ಲ ಎಂಬ ನಿಯಮ ಇಲ್ಲಿ



ಅನ್ವಯಿಸುವುದಿಲ್ಲ. ಆದರೆ ಪಕ್ಷೇತರರ ಪರ ತೀರ್ಪು ಬಂದಲ್ಲಿ ಯಡ್ಡಿ ಗ್ಯಾಂಗ್ ಸುಪ್ರೀಂಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿ ಇನ್ನಷ್ಟು ಕಾಲ ಎಳೆದಾಡುವ ಸಾಧ್ಯತೆಯೂ ಇದೆ. ಆಗಲೂ ಸಂಖ್ಯಾಬಲದಲ್ಲಿ ಬಿಜೆಪಿಗೆ ಒಬ್ಬ ಶಾಸಕನ ಹೆಚ್ಚುವರಿ ಬೆಂಬಲ ಇದ್ದೇ ಇರುತ್ತದೆ.

ಆತ ವರ್ತೂರು ಪ್ರಕಾಶ್!

ಪಕ್ಷೇತರ ವರ್ತೂರ್ ಪ್ರಕಾಶ್ ಹೊರತುಪಡಿಸಿದರೆ ಪರ-ವಿರೋಧವಾಗಿ ತಲಾ 105 ಸಂಖ್ಯೆ ಆಗುತ್ತದೆ. ಆಗ ವರ್ತೂರು ಪ್ರಕಾಶನ ಬೆಂಬಲವೇ ಇಬ್ಬರಿಗೂ ನಿರ್ಣಾಯಕ. ಸಂಖ್ಯಾಬಲ ಅಕಸ್ಮಾತ್ ಟೈ ಆದಲ್ಲಿ ಸ್ಪೀಕರ್ ಬೋಪಯ್ಯನ ಓಟು ಹೇಗಿದ್ದರೂ ಬಿಜೆಪಿಗೇ ಸಿಗುವುದರಿಂದ ಪಕ್ಷೇತರರಿಗೆ ಸಂಬಂಧಿಸಿದ ಕೋರ್ಟ್ ತೀರ್ಪು ಒಂದೇ ಬಿಜೆಪಿಗಳನ್ನು ಮೈನಾರಿಟಿ ಸರ್ಕಾರವಾಗಿಸಲಾರದು.

ಆಗ ಎಲ್ಲರೂ ಬಿಜೆಪಿ ಭಿನ್ನರ ಹಣೆಬರಹ ಏನಾಗುತ್ತದೋ ಕಾದು ನೋಡಬೇಕಾಗುತ್ತದೆ.

ಪಾರ್ವತೀಶ
bparvateesha@gmail.com

ಭಿನ್ನರೇ ನಿರ್ಣಾಯಕ

ಹೈಕೋರ್ಟ್ ತೀರ್ಪು ಯಾರ ಪರ ಅಥವಾ ವಿರುದ್ಧವಾಗೇ ಬರಲಿ ಅಂತಹವರು ಸುಪ್ರೀಂಕೋರ್ಟ್‌ಗೂ ಅಪೀಲ್ ಹೋಗಬಹುದೆಂಬುದನ್ನು ಪರಿಗಣಿಸಿಯೂ ಅದರ ತಕ್ಷಣದ ಪರಿಣಾಮವಂತೂ ಸರ್ಕಾರದ ಮೇಲೆ ಆಗಿಯೇ ತೀರುತ್ತದೆ.

ತೀರ್ಪು ಭಿನ್ನರ ಪರ ಬಂದರೆ ಯಡ್ಡಿ ಸರ್ಕಾರ ಹೋಯಿತೆಂತಲೇ ಅರ್ಥ. ಬಹುತೇಕ ಆ ಸಂದರ್ಭದಲ್ಲಿ ಯಡ್ಡಿ ವಿಧಾನಸಭೆ ವಿಸರ್ಜಿಸುವ ಸಾಧ್ಯತೆಗಳೇ ಹೆಚ್ಚಿವೆ. ಕಳೆದ ಎರಡು ವರ್ಷದಲ್ಲಿ ನಡೆದ ಆರೆಂಟು ಉಪಚುನಾವಣೆಗಳಲ್ಲಿ ಬಿಜೆಪಿ ಹೆಚ್ಚು ಸ್ಥಾನ ಗೆದ್ದಿರುವುದು, ಕೆಎಂಎಫ್ ಗೆದ್ದು ವಶಪಡಿಸಿಕೊಂಡಿದ್ದು, ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆ ಗೆದ್ದದ್ದೆಲ್ಲ ಬಿಜೆಪಿಗಳ ಸ್ಥೈರ್ಯ ಹೆಚ್ಚಿಸಿದೆ. ಈಗಂತೂ ಸಹಜವಾಗಿಯೇ 2 ಬಾರಿ ವಿಶ್ವಾಸಮತ ಗೆದ್ದ ನಂತರವೂ ಸರ್ಕಾರ ವಿಸರ್ಜಿಸಿ ಮತ್ತೆ ಜನರ ಬಳಿ ಹೋದರೆ ಜನರ ಸಿಂಪಥಿ ಬಿಜೆಪಿ ಪರ ಏಳುವ ನಿರೀಕ್ಷೆ ಯಡ್ಡಿಗಿದೆ. ಜೊತೆಗೆ ಯಡ್ಡಿ ಕೈಲೀಗ ಸಾಕಷ್ಟು ಹಣವೂ ಇದೆ. ಲಿಂಗಾಯತ + ಬ್ರಾಹ್ಮಣ+ನಾಯಕ ಹಾಗೂ ಕೆಲ ದಲಿತ ಜಾತಿಗಳ ಓಟ್ ಬ್ಯಾಂಕ್ ಸಾಲಿಡ್ಡಾಗಿ ಬಿಜೆಪಿ ಪರ ಹರಿದುಬರುವ ಗ್ಯಾರಂಟಿಯೂ ಬಿಜೆಪಿಗಳಿಗಿದೆ.

ಒಂದು ವೇಳೆ ಕೋರ್ಟ್‌ನಲ್ಲಿ ಭಿನ್ನರಿಗೆ ಸೋಲಾದರೆ ಅವರು ಪ್ರತಿನಿಧಿಸುತ್ತಿರುವ 11 ಕ್ಷೇತ್ರಗಳು ಖಾಲಿಯಾಗಲಿವೆ. ಇಲ್ಲೆಲ್ಲಾ ಮತ್ತೆ ಮರುಚುನಾವಣೆಗಳಾಗಿ ಅಲ್ಲಿ ಬಿಜೆಪಿಗೆ ಕನಿಷ್ಠ ಏಳು ಕಡೆ ಗೆಲುವು ಸಾಧಿಸಬೇಕಾಗುತ್ತದೆ. ಆದರೆ ಅದು ಅಷ್ಟು ಸುಲಭವಲ್ಲ. ಏಕೆಂದರೆ ಜಾರಕಿಹೊಳಿ, ಅಸ್ನೋಟಿಕರ್, ಶಿವನಗೌಡ ನಾಯಕ ಮುಂತಾದವರೆಲ್ಲ ತಮ್ಮ ಸ್ವಂತ ವರ್ಚಸ್ಸಿನ ಮೇಲೆ ರಾಜಕೀಯ ಮಾಡಿ ಗೆದ್ದು ಬರಬಲ್ಲ ಪ್ರಚಂಡರು. ಇವರನ್ನೆಲ್ಲಾ ಮಣಿಸುವುದು ಯಡ್ಡಿಗೆ ಅಷ್ಟೊಂದು ಸುಲಭವಲ್ಲ.

ಹೀಗೆ ಹನ್ನೊಂದು ಕಡೆ ಮಿನಿ ಮಹಾಚುನಾವಣೆ ನಡೆಸಿ ಒದ್ದಾಡುವ ಬದಲಾಗಿ ಒಮ್ಮೆಗೆ ಹೊಸ ವಿಧಾನಸಭಾ ಚುನಾವಣೆಗೆ ಹೋಗುವುದೇ ಲೇಸೆಂಬ ಅಭಿಪ್ರಾಯ ಆರೆಸ್ಸೆಸ್ಸಿಗೂ ಇದೆ. ನಾಳೆ ಅಕಸ್ಮಾತ್ ಖಚಿತ ಬಹುಮತ ಬಂದರೆ ಮುಂದಿನ ಐದು ವರ್ಷಕಾಲ ಯಾವ ಯೋಚನೆಯೂ ಇರದೆ ಆಡಳಿತ ನಡೆಸಬಹುದೆಂಬ ಕನಸು ಅವರದ್ದು.

ಆದರೆ ಒಟ್ಟಾರೆಯಾಗಿ ಇವೆಲ್ಲಾ ಕೇವಲ ಅಂಕಿ-ಅಂಶಗಳ ಆಟವಾಗಿ ಮಾತ್ರ ಉಳಿಯುವುದಿಲ್ಲ. ಕರ್ನಾಟಕದ ರಾಜಕೀಯ ಬಿಕ್ಕಟ್ಟು ಈಗ ರಾಷ್ಟ್ರಮಟ್ಟದಲ್ಲೇ ಚರ್ಚೆಯಾಗುತ್ತಿದೆ. ಸಂವಿಧಾನದ 10ನೇ ಶೆಡ್ಯೂಲ್, ಆರ್ಟಿಕಲ್ 356 ಬಗ್ಗೆ ಪಕ್ಷಾಂತರ ಕಾಯ್ದೆಯ ಇತಿಮಿತಿಗಳ ಬಗ್ಗೆಯೂ ವಿವಾದವೇಳುತ್ತಿದೆ. ಇವತ್ತು ಪ್ರಕರಣ ಹೈಕೋರ್ಟ್‌ನಲ್ಲಿದೆ. ನಾಳೆ ಇದು ಸುಪ್ರೀಂಕೋರ್ಟ್‌ಗೂ ಖಂಡಿತಾ ಹೋಗುತ್ತದೆ. ಆಗ ಇನ್ನಷ್ಟು ಎಳೆದಾಟ ಜಗ್ಗಾಟಗಳೆಲ್ಲಾ ನಡೆಯುತ್ತವೆ.

ಏನಪ್ಪಾ ಅಂದರೆ ಅಧಿಕಾರಕ್ಕೆ ಬಂದ ದಿನದಿಂದಲೂ ಯಡಿಯೂರಪ್ಪನ ಸರ್ಕಾರ ಸದಾ ಒಂದಿಲ್ಲೊಂದು ವಿವಾದ, ಹಗರಣ, ಭಿನ್ನಮತ, ಭ್ರಷ್ಟಾಚಾರಗಳ ಸುಳಿಯಲ್ಲಿ ಸಿಕ್ಕುತ್ತಲೇ ಈ ಎರಡು ವರ್ಷ ಮುಗಿಸಿದೆ. ಸದ್ಯದ ಪರಿಸ್ಥಿತಿಯಲ್ಲಿ ಯಡ್ಡಿ ಎಂಬ ಶನಿ ನಿಜಕ್ಕೂ ತೊಲಗುವುದೇ ಎಂಬ ಪ್ರಶ್ನೆಗೆ ಖಚಿತ ಉತ್ತರ ಯಾರ ಬಳಿಯೂ ಇಲ್ಲ.

ಪಾಪಿ ಚಿರಾಯು ಅಷ್ಟೆ.


ಮೊಯ್ಲಿ, ಖರ್ಗೆ, ಕೃಷ್ಣರ ಷಡ್ಯಂತ್ರ

ಕೈಕೊಟ್ಟ ಹೈಕಮಾಂಡ್ ಮತ್ತು ಮಣ್ಣುಪಾಲಾದ ಸಿದ್ದು ಕನಸು

ರಾಷ್ಟ್ರಪತಿ ಆಳ್ವಿಕೆಗೆ ಶಿಫಾರಸು ಮಾಡಿದ ನಂತರವೂ ಮತ್ತೊಮ್ಮೆ ಬಹುಮತ ಸಾಬೀತು ಮಾಡಲು ಯಡ್ಡಿಗೆ ಎರಡನೇ ಅವಕಾಶ ಕೊಟ್ಟ ರಾಜ್ಯಪಾಲರ ವರ್ತನೆಗೆ ಕಾರಣವೇನು?

ಅತೃಪ್ತರನ್ನಾಗಲಿ, ಪಕ್ಷೇತರರನ್ನಾಗಲಿ ಅನರ್ಹಗೊಳಿಸದೇ ಅಕ್ಟೋಬರ್ 6 ರ ಬಲಾಬಲವನ್ನೇ ಆಧರಿಸಿ ವಿಶ್ವಾಸಮತ ಯಾಚಿಸುವಂತೆ ಆದೇಶಿಸಿದ ಮೇಲೂ ಅದನ್ನು ಧಿಕ್ಕರಿಸಿದ ಸ್ಪೀಕರ್‌ರ ಕ್ರಮ ಮತ್ತು ಅಕ್ಟೋಬರ್ 11 ರ ಗೋಲ್‌ಮಾಲ್ ಬಹುಮತವನ್ನೂ ಕಂಡೂ ತಮ್ಮದೇ ರಾಷ್ಟ್ರಪತಿ ಆಳ್ವಿಕೆಯ ಒತ್ತಾಯಕ್ಕೆ ರಾಜ್ಯಪಾಲರು ಉಲ್ಟಾ ಹೊಡೆದದ್ದು ಏಕೆ?

ಪರಿಸ್ಥಿತಿಯ ಗಂಭೀರತೆ ಗೊತ್ತಿದ್ದೂ ಕೋರ್ಟು ಏಕೆ ಪಕ್ಷೇತರರ ಪ್ರಶ್ನೆಯಲ್ಲಿ ಹುಡುಗಾಟಿಕೆ ಆಡಿತು? ರಾಷ್ಟ್ರಪತಿ ಆಳ್ವಿಕೆಗೆ ಕೇಂದ್ರ ಸರ್ಕಾರ ಹಿಂಜರಿದಿದ್ದರ ಹಿಂದಿನ ನಿಗೂಢ ಕಾರಣವಾದರೂ ಏನಿತ್ತು?







ಇತ್ಯಾದಿ ಯಾರಿಗೂ ಅರ್ಥವಾಗದ ರಾಜ್ಯಪಾಲರ ವರ್ತನೆ, ಕೇಂದ್ರದ ಮೀನಮೇಷ, ರಾಜ್ಯ ಕಾಂಗ್ರೆಸ್ ನಾಯಕರ ಬೇಗುದಿ ಮತ್ತು ಬಿಜೆಪಿ ದುರಾಡಳಿತ ಕಂಡೂ ಕಣ್ಣುಮುಚ್ಚಿ ಕೂತ ನ್ಯಾಯಾಂಗ ನಿರ್ಧಾರಗಳ ಹಿಂದೆ ಕಾಣದ ಕೈಯೊಂದು ಸದ್ದಿಲ್ಲದೇ ಕಾರ್ಯ ಸಾಧಿಸಿತೆ?

ಈ ಥರದ ಪ್ರಶ್ನೆಗಳನ್ನು ಮುಂದಿಟ್ಟುಕೊಂಡೇ ಸಾಮೂಹಿಕ ರಾಜೀನಾಮೆ ಕೊಡುತ್ತೇವೆನ್ನುವ ಕೆಲ ಕಾಂಗ್ರೆಸ್ ಶಾಸಕರ ವರ್ತನೆಗೂ ಕಾರಣವಿದೆ. ಸಿದ್ದು ಮುಖ್ಯಮಂತ್ರಿಯಾಗುವುದನ್ನು ಶತಗತಾಯ ತಡೆಗಟ್ಟಲು, ರಾಜ್ಯದಲ್ಲಿ ಕಾಂಗ್ರೆಸ್-ಜೆಡಿಎಸ್ ಮೈತ್ರಿಯಾಗದಂತೆ ಮಾಡಲು ಮತ್ತು ಯಾವುದೇ ಕಾರಣಕ್ಕೂ ದೇವೇಗೌಡರ ಕುಟುಂಬದ ಕೈಗೆ ಅಧಿಕಾರ ಸಿಗದಂತೆ ನೋಡಿಕೊಳ್ಳುವುದೇ ಕೆಲ ಕಾಂಗ್ರೆಸ್ ನಾಯಕರ ಹರಕತ್ತಾಗದೇ ಹೋಗಿದ್ದರೆ; ಈ ಹೊತ್ತಿಗಾಗಲೇ ರಾಷ್ಟ್ರಪತಿ ಆಳ್ವಿಕೆ ಜಾರಿಯಾಗಿರುತ್ತಿತ್ತು?

ಇದು ಕೇವಲ ಜೆಡಿಎಸ್ ನಾಯಕರ ಲೆಕ್ಕಾಚಾರವಷ್ಟೇ ಅಲ್ಲ; ರಾಜ್ಯ ಕಾಂಗ್ರೆಸ್ಸಿನ ಬಹುತೇಕ ಸಿದ್ದು ನಿಷ್ಠರ ವಾದ ಕೂಡ. ಮೊಯ್ಲಿ, ಖರ್ಗೆ, ಧರ್ಮಸಿಂಗ್, ಎಸ್.ಎಂ. ಕೃಷ್ಣ ಮತ್ತು ಕೆ.ಎಚ್. ಮುನಿಯಪ್ಪ ಸೇರಿಕೊಂಡೇ ಸಿದ್ದು ತಲೆ ಮೇಲೆ ಮಣ್ಣು ಹಾಕಿದ್ದಾರೆಂಬುದು ಲೋಕಲ್ ಕಾಂಗ್ರೆಸ್ ನಾಯಕರ ಒಟ್ಟಾರೆಯ ಆಕ್ರೋಶ!

ಮೊದಲು ರಾಷ್ಟ್ರಪತಿ ಆಳ್ವಿಕೆಗೆ ಶಿಫಾರಸು ಮಾಡಿ ಮರುದಿನಕ್ಕೇ ಉಲ್ಟಾ ಹೊಡೆದ ರಾಜ್ಯಪಾಲರು ತಮ್ಮ ಸ್ವಇಚ್ಛೆಯಿಂದ ಅಂಥದೊಂದು ನಿರ್ಧಾರಕ್ಕೆ ಬಂದಿಲ್ಲ, ಕೇಂದ್ರದ ಸೂಚನೆ ಮೇರೆಗೇ ಮಾಡಿದ್ದಾರೆ. ಹಾಗೇ ಮಾಡಿಸುವಲ್ಲಿ ಮೊಯ್ಲಿ, ಖರ್ಗೆ, ಧರ್ಮಸಿಂಗ್, ಕೃಷ್ಣ ಮತ್ತು ಮುನಿಯಪ್ಪ ಒಳಗೊಳಗೇ ಕೆಲಸ ಮಾಡಿದ್ದಾರೆ. ಇವರೆಲ್ಲರಿಗೂ ಜೆಡಿಎಸ್-ಕಾಂಗ್ರೆಸ್ ಮೈತ್ರಿಯಾಗದಂತೆ ಕಲ್ಲು ಹಾಕುವುದಕ್ಕೆ ಅವರವರದೇ ಹಿತಾಸಕ್ತಿ ಮತ್ತು ಅಸ್ತಿತ್ವದ ಕಾರಣಗಳಿದ್ದುದರಿಂದಲೇ ಪ್ರಧಾನಿ ಮನಮೋಹನ್ ಮೂಲಕ ಮತ್ತೆ ಬಿಜೆಪಿಗೆ ಅವಕಾಶ ಕಲ್ಪಿಸಿಕೊಟ್ಟಿದ್ದಾರೆಂಬುದು ಲೋಕಲ್ ಕಾಂಗ್ರೆಸ್ಸಿಗರ ಹಿಡಿಶಾಪ.

ಅದು ದೇವೇಗೌಡರೇ ಮಾಡಿಕೊಂಡ ಸ್ವಯಂಕೃತಾಪರಾಧದ ಫಲ ಕೂಡ. ಕಳೆದ ರಾಜ್ಯಸಭಾ ಚುನಾವಣೆಯಲ್ಲಿ ಹಿರಿಯ



ಕಾಂಗ್ರೆಸ್ ನಾಯಕ ಬಿ.ಕೆ. ಹರಿಪ್ರಸಾದ್ ಇನ್ನೇನು ರಾಜ್ಯಸಭೆಗೆ ಆಯ್ಕೆಯಾಗೇ ಬಿಟ್ಟರು ಎನ್ನುವಾಗಲೇ ದೇವೇಗೌಡರು ಬತ್ತಿ ಇಟ್ಟರು. ವಿಧಿಯಿಲ್ಲದೇ ಮಲ್ಯನನ್ನು ಕೆಲ ಕಾಂಗ್ರೆಸ್ ಶಾಸಕರು ಬೆಂಬಲಿಸಬೇಕಾಯಿತು.

ದೇವೇಗೌಡರ ಕಾರಸ್ತಾನದ ವಿರುದ್ಧ ಒಳಗೊಳಗೇ ಕುದಿಯುತ್ತಿದ್ದ ಬಿ.ಕೆ. ಹರಿಪ್ರಸಾದ್‌ಗೆ ಮೊನ್ನೆ ಅವಕಾಶ ಸಿಕ್ಕಿತ್ತು. ಅತ್ತ ಕುಮಾರಸ್ವಾಮಿ ಗೋವಾ ರೆಸಾರ್ಟಿನ ಮುಂದೆ ಅತೃಪ್ತ ಬಿಜೆಪಿ ಶಾಸಕರ ಜೊತೆ ಡೀಲು ಕುದುರಿಸುತ್ತಿದ್ದರೆ ಇತ್ತ ಹರಿಪ್ರಸಾದ್ ಟೀವಿಗಳಲ್ಲಿ ಪ್ರತ್ಯಕ್ಷರಾಗಿ ಕಾಂಗ್ರೆಸ್ ಯಾವುದೇ ಕಾರಣಕ್ಕೂ ಜೆಡಿಎಸ್ ಜೊತೆ ಕೈಜೋಡಿಸಬಾರದೆಂದು ಗುಡುಗಿಬಿಟ್ಟರು.

ಏಕಾಏಕಿ ಹರಿಪ್ರಸಾದ್ ಎಂಟ್ರಿ ಕೊಟ್ಟು ಹೇಳಿದ ಈ ಮಾತುಗಳ ಆಳವನ್ನು ಸಿದ್ಧರಾಮಯ್ಯ ಗ್ರಹಿಸಲಿಲ್ಲ. ಇದರ ಮರುದಿನವೇ ಯಡ್ಡಿ ತಮ್ಮೆಲ್ಲಾ ಶಾಸಕರನ್ನು ಕರೆದೊಯ್ದು ರಾಷ್ಟ್ರಪತಿ ಭವನದಲ್ಲಿ ಪೆರೇಡ್ ಮಾಡಿಸಲು ಹವಣಿಸುತ್ತಿರುವಾಗಲೇ ದೆಹಲಿ ಮಟ್ಟದಲ್ಲಿ ರಾಜ್ಯದ ಕಾಂಗ್ರೆಸ್ ಅಧಿಪತಿಗಳಾದ ಕೃಷ್ಣ, ಖರ್ಗೆ, ಮೊಯ್ಲಿ 'ಬಲೆ' ಹೆಣೆಯತೊಡಗಿದ್ದರು.

ತಮ್ಮ ವಿರುದ್ಧ ಖರ್ಗೆಯನ್ನು ಎತ್ತಿಕಟ್ಟಿ ರಾಜ್ಯ ರಾಜಕಾರಣ ದಿಂದಲೇ ಹೊರದಬ್ಬುವಂತೆ ಮಾಡಿದ ದೇವೇಗೌಡರ ವಿರುದ್ಧ ಕೃಷ್ಣ ಒಳಗೊಳಗೇ ಕುದಿಯುತ್ತಿದ್ದರು. ಯಡ್ಡಿ ಸರ್ಕಾರ ತೊಲಗಿ ಪರ್ಯಾಯ ಸರ್ಕಾರ ಬಂತೆಂದರೆ ಸಹಜವಾಗೇ ಗೌಡರ ಕುಟುಂಬಕ್ಕೆ ಅಧಿಕಾರ ಸಿಕ್ಕಂತಾಗುತ್ತದೆ. ಅದಕ್ಕೆ ಕಾಂಗ್ರೆಸ್ ನೀರೆರೆಯಬೇಕೆ? ಪ್ರಧಾನಿ ಮನಮೋಹನ್ ಮುಂದೆ ಬಹುಶಃ ಕೃಷ್ಣ ಇಂಥದ್ದೇ ಪ್ರಶ್ನೆಯಿಟ್ಟಿರಬೇಕು. ಆದರೆ ಖರ್ಗೆಗೆ ಸಿಟ್ಟಿರುವುದು ದೇವೇಗೌಡರ ಮೇಲಲ್ಲ, ಸಿದ್ದು ಮೇಲೆ. ಸಿದ್ದು ಒಮ್ಮೆ ಮುಖ್ಯಮಂತ್ರಿಯಾದರೆಂದರೆ ಧರ್ಮಸಿಂಗ್ ಮತ್ತು ಖರ್ಗೆ ಪಾಲಿಗೆ ಅದು ದೊಡ್ಡ ಹಿನ್ನಡೆಯಾದಂತೆ.

ಕರ್ನಾಟಕದ ಮಟ್ಟಿಗೆ ತಾವಷ್ಟೇ ಹಿಂದುಳಿದ ವರ್ಗಗಳ ಅಧಿನಾಯಕರಂತೆ ಕಾಂಗ್ರೆಸ್ ಹೈಕಮಾಂಡನ್ನು ನಂಬಿಸಿಕೊಂಡೇ ಬಂದ ಮೊಯ್ಲಿ, ಕೆ.ಎಚ್. ಮುನಿಯಪ್ಪರಿಗೂ ಸಿದ್ದು ಪಟ್ಟಕ್ಕೆ ಬರುವುದು ಇಷ್ಟವಿಲ್ಲ. ಮುನಿಯಪ್ಪ ಕೂಡ ಪ್ರಧಾನಿ ತಲೆ ತಿಕ್ಕಿ ರಾಷ್ಟ್ರಪತಿ ಆಳ್ವಿಕೆ ತಾರದ ಹಾಗೇ ಕಿವಿಕಚ್ಚಿದ್ದಾರೆಂಬುದು ಕೆಲವರ ಅಂದಾಜು. ಸದ್ಯ ನ್ಯಾಯಾಂಗ ವ್ಯವಸ್ಥೆಯಿರುವುದು ಮೊಯ್ಲಿಯ ಕೈಯಲ್ಲಿ. ಪಕ್ಷೇತರ ಶಾಸಕರ ಅನರ್ಹತೆಯ ಪ್ರಶ್ನೆಯನ್ನು ಹೈಕೋರ್ಟ್ ಮನಸ್ಸು ಮಾಡಿದ್ದರೆ ರಾತ್ರೋರಾತ್ರಿ ನಿರ್ಧರಿಸಿಬಿಡಬಹುದಿತ್ತು.

ಅದೆಂಥಾ ತಾಂತ್ರಿಕ ದೋಷಗಳಿದ್ದರೂ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಪಕ್ಷೇತರ ಪ್ರಶ್ನೆಯನ್ನು ಬಗೆಹರಿಸಬಹುದಿದ್ದ ಹೈಕೋರ್ಟ್ ಪ್ರಕರಣವನ್ನು ವಿನಾಕಾರಣ ಎಳೆಯುತ್ತಾ ಹೋದದ್ದು ಕಾನೂನಿಗಿಂತಲೂ ನ್ಯಾಯಾಧಾತರ ವಿವೇಚನೆಗೇ ಒತ್ತುಕೊಟ್ಟಂತಿತ್ತು. ಇದರ ಹಿಂದಿದ್ದದ್ದು ಕೇಂದ್ರ ಕಾನೂನು ಮಂತ್ರಿ ಮೊಯ್ಲಿ?

ಒಂದೆಡೆ ದೇವೇಗೌಡರ ವಿರುದ್ಧ ಕುದಿಯುತ್ತಿದ್ದ ಕೃಷ್ಣ

▶▶ 12

...ಂಟಲ್ ಪ್ರಕಾಶ-ಹಲಾಲುಟೋಪಿ ರೇಣುಕಾ

...ಮೊಂಥರದ ಕಿಲಾಡಿ ಜೋಡಿಯಿದ್ದಂತೆ. ಒಬ್ಬ ...ದುಕ. ಮತ್ತೊಬ್ಬ ಹುಟ್ಟಾ ಲಂಪಟ. ಯಾರಿಗೆ ...ನಿಷ್ಠರಲ್ಲ, ಉಂಡ ತಟ್ಟೆಯಲ್ಲೇ ಉಚ್ಚೆ ಹೊಯ್ಯಲು ...ಕ್ಷಣಕ್ಕೂ ಇವರು ಹೇಸುವುದಿಲ್ಲ. ಇವತ್ತು ...ತ್ತಾರೆ? ನಾಳೆ ಏನು ಮಾಡುತ್ತಾರೆ? ಎಂಬುದು ...ವರಿಗೇ ಗೊತ್ತಿಲ್ಲ. ಯಾವ ಹೊತ್ತಲ್ಲಿ ಯಾರ ...ಬೇಕಾದರೂ ಇರಿಯಬಲ್ಲರು, ಜಗಿಯಬಲ್ಲರು; ...ಕಾದರೂ ಹೊಲಸು ವಿಸರ್ಜಿಸಿ ಜಾಗ ಖಾಲಿ ...ಬಲ್ಲರು.

...ಮೆಂಟಲ್ ಪ್ರಕಾಶ್, ಮತ್ತೊಬ್ಬ ...ಟೋಪಿ ರೇಣುಕಾ!



...ನಾಟಕ ಕಂಡ ಅತ್ಯಂತ ವಿಲಕ್ಷಣ ...ವಿಚಿತ್ರ ಬುದ್ಧಿಯ ಈ ಇಬ್ಬರು ...ಗಳೇ ಯಡ್ಡಿ ಸರ್ಕಾರಕ್ಕೆ ಮುಳುಗು ...ತರುತ್ತಾರೆ ಮತ್ತು ನಂಬಿದ ...-ಕಾಂಗ್ರೆಸ್‌ಗಳನ್ನು ವಗೆಪಾಟಲು ...ಡುತ್ತಾರೆ!

...ದಲು ರೇಣುಕಾಚಾರ್ಯನನ್ನೇ ... ಗಣಿರೆಡ್ಡಿಗಳು ಹಿಂಡುಗಟ್ಟಲೇ ...ನ್ನು ಹೈದ್ರಾಬಾದಿಗೆ ಹಾರಿಸಿಕೊಂಡು ...ಯಡ್ಡಿ ಕುತ್ತಿಗೆಗೆ ಕೈಹಾಕಿದಾಗ ಅದರ ನೇತೃತ್ವ ... ಹೊನ್ನಾಳಿ ಶಾಸಕ ರೇಣುಕಾಚಾರ್ಯ. ಅದಕ್ಕೂ ...ರ್ಸ್ ಜಯಲಕ್ಷ್ಮಿ ಜೊತೆ ಭಾನಗಡಿ ಮಾಡಿಕೊಂಡು ...ತ್ರ ಮತ್ತು ತನ್ನ ಮಾನವನ್ನೂ ಸೇರಿಸಿ ಹರಾಜಿಗಿಟ್ಟಿದ್ದ ...ಗೆ ಆದೆಲ್ಲಿಂದ ಮಂತ್ರಿಗಿರಿ ಕೊಟ್ಟಾರು?

...ರೆ ಬ್ಲಾಕ್‌ಮೇಲ್‌ಗಿಳಿದ ರೇಣುಕಾ ಹೇಗೋ ರೆಡ್ಡಿಗಳ ...ಕೈಜೋಡಿಸಿ ಮಂತ್ರಿಯಾದ. ಮಂತ್ರಿಯಾದ ...ನಕ್ಕೇ ರೆಡ್ಡಿಗಳ ವಿರುದ್ಧ ಹಾವಳಿಯಿಟ್ಟು ತಾನು ...ಯಡ್ಡಿ ನಿಷ್ಠನೆಂಬಂತೆ ಪೋಜು ಕೊಟ್ಟ. ನಂಬಿದ ...ಎಂಥಾ ಆಘಾತ ಕಾದಿತ್ತೆಂದರೆ; ಬಂಡೆದ್ದು ಚೆನ್ನೈನ ... ಹೊಕ್ಕು ಯಡ್ಡಿ ವಿರುದ್ಧ ತೊಡೆತಟ್ಟಿದ ಅತೃಪ್ತ ...ಶಾಸಕರ ನೇತೃತ್ವವನ್ನು ಸ್ವತಃ ರೇಣುಕಾಚಾರ್ಯನೇ ...ವಹಿಸಿಕೊಂಡಿದ್ದ!


ನಕ್ಕಿದ್ದು ರೆಡ್ಡಿಗಳು. ಚೆನ್ನೈನಿಂದ ಗೋವಾ ರೆಸಾರ್ಟಿಗೆ ಬರುವ ಹೊತ್ತಿಗಾಗಲೇ ರೇಣುಕನ ವರಸೆ ಬದಲಾಗಿತ್ತು. ಒಮ್ಮೆ ಯಡ್ಡಿಯೇ ತಮ್ಮ ಲೀಡರ್ ಎಂದ. ಮತ್ತೊಮ್ಮೆ ಶಾಸಕರೆಲ್ಲ ನಾಳೆ ಬೆಳಗ್ಗೆಯೇ ಬೆಂಗಳೂರಿಗೆ ಬರುತ್ತೇವೆಂದ. ನಂಬಿದ ಜನಾರ್ದನ ರೆಡ್ಡಿ ಅದೆಲ್ಲಿಲ್ಲಿಂದಲೋ ಹೊಂಚಿ 80 ಕೋಟಿಯಷ್ಟನ್ನು ರೇಣುಕನ ಕೈ ಸೇರಿಸಿದ್ದರು. ತನ್ನ ಬೇನಾಮಿ ಶೇಖರಯ್ಯನ ಮೂಲಕ ರೆಡ್ಡಿಗಳು ಕೊಟ್ಟ ದುಡ್ಡನ್ನು ಬಟವಾಡೆ ಮಾಡಿಸಿದ (ಈ ಪೈಕಿ ಅತೃಪ್ತ ಶಾಸಕರಿಗೆ ಎಷ್ಟೆಷ್ಟು ಕೊಟ್ಟನೋ?) ರೇಣುಕ ಅದರ ಮರುಕ್ಷಣವೇ ಮತ್ತೆ ಉಲ್ಟಾ ಹೊಡೆದ.

ನೂರಾರು ಮಂದಿ ಗೂಂಡಾಗಳು ಬಂದರಂತೆ, ಆತನ ಜೊತೆಗಿದ್ದ ಶಾಸಕರನ್ನೆಲ್ಲ ಕಿಡ್ನಾಪ್ ಮಾಡಿಕೊಂಡು ಹೋದರಂತೆ!

ಕಿಡ್ನಾಪ್ ಮಾಡ್ಕೊಂಡು ಹೋಗೋಕೆ ನಾವೇನು ಚಿಕ್ಕ ಮಕ್ಕಳಾ ಎಂದು ಅತ್ತ ಬೇಳೂರು ಗುಟುರು ಹಾಕುತ್ತಿದ್ದರೆ ರೇಣುಕ ಬೆವರೊರೆಸಿಕೊಳ್ಳುತ್ತಿದ್ದ. ತನ್ನ ಡಬ್ಬಲ್ ಗೇಮ್ ವಿರುದ್ಧ ತಿರುಗಿಬಿದ್ದ ಜೊತೆಗಾರರಿಂದಲೇ ಒದೆತಿಂದು ಉಟ್ಟ ಬಟ್ಟೆಯಲ್ಲೇ ಬೆಂಗಳೂರಿನ ವಿಮಾನ ಹತ್ತಿದ. ಸದ್ಯ ರೇಣುಕ ಯಡ್ಡಿ ನಿಷ್ಠನಂತೆ. ಸರ್ಕಾರದ ಪರವಾಗೇ ಓಟು ಕೂಡ ಕೊಟ್ಟಿದ್ದಾನಂತೆ. ಎದುರಿಗೇ ಇದ್ದರೂ ಆತನ ಮುಖ ನೋಡಲು ಯಡ್ಡಿಗೆ ಅಸಹ್ಯ. ಕೊಟ್ಟ 80 ಕೋಟಿ ಏನಪ್ಪಾ ಮಾಡ್ದೆ? ಎಂದು ಗಣಿ ರೆಡ್ಡಿಗಳು ವಸೂಲಿಗೆ ನಿಂತಿದ್ದರೆ ಮತ್ತೊಂದೆಡೆ ದುಡ್ಡೆಲ್ಲ ಜಾರಕಿಹೊಳಿ-ಬೇಳೂರು ಹೊಡಕೊಂಡು ಹೋದ್ರು ಎಂದು ರೇಣುಕ ಆಣೆ ಪ್ರಮಾಣ ಹಾಕುತ್ತಿದ್ದಾನೆ.

ನಂಬಿ ಬಂದ ಅತೃಪ್ತರು ಒದೆ ಕೊಟ್ಟು ಹೊರದಬ್ಬಿದ್ದಾರೆ. ಕರೆತಂದ ರೆಡ್ಡಿ ಗ್ಯಾಂಗ್ ಕೊಟ್ಟು ದುಡ್ಡಿನ ವಸೂಲಿಗೆ ನಿಂತಿದೆ. ಯಡ್ಡಿ ಕೈ ಹಿಡಿಯುವುದಿರಲಿ, ಇದ್ದ ಮಂತ್ರಿಗಿರಿಯನ್ನೂ ಕಿತ್ತು ಮೂಲೆಗೆ ಹಾಕದಿದ್ದರೆ ಅದೇ ರೇಣುಕನ ಅದೃಷ್ಟ?

ಇನ್ನು ವರ್ತೂರು ಪ್ರಕಾಶನ ಅದೃಷ್ಟ ರಾತ್ರೋರಾತ್ರಿ ಖುಲಾಯಿಸಿದೆಯಾದರೂ ಆತನ ಪರಿಸ್ಥಿತಿ ಕೂಡ ರೇಣುಕನಿಗಿಂತ ಭಿನ್ನವೇನಲ್ಲ. ಒಂದು ಮೂಲದ ಪ್ರಕಾರ ಗಣಿ ರೆಡ್ಡಿಯಿಂದ 50 ಕೋಟಿ ಕಿತ್ತೇ ಪ್ರಕಾಶ ಕುಮಾರಸ್ವಾಮಿಗೆ ಕೈಕೊಟ್ಟಿದ್ದಾನೆ. ಇದೇ ವರ್ತೂರು ಅಕ್ಟೋಬರ್ 6 ರ ಬೆಳಗ್ಗೆ ಕುಮಾರಸ್ವಾಮಿ ಜೊತೆ ರಾಜಭವನದಲ್ಲಿ ನಿಂತು ಇವತ್ತಿಗೆ ಯಡಿಯೂರಪ್ಪನ ದುರಾಡಳಿತ ಅಂತ್ಯವಾಯಿತು ಎಂದು ಟಿವಿ ವರದಿಗಾರರ ಮುಂದೆ ಡೈಲಾಗ್ ಹೊಡೆದಿದ್ದ. ಕುಮಾರಣ್ಣನೇ ನಮಗೆಲ್ಲ ಲೀಡರು ಎಂದು ರೈಲು ಬಿಟ್ಟಿದ್ದ.



ಯಾವತ್ತು ಪಕ್ಷೇತರರ ಪರ ತೀರ್ಪು ಬರಲಿಲ್ಲವೋ ಪ್ರಕಾಶನ ಕುಮಾರಸ್ವಾಮಿ ನಿಷ್ಠೆ ಹಳಸಿ ಗಣಿರೆಡ್ಡಿಗಳ ಗುಲಾಮನಾಗಿದ್ದ. 50 ಕೋಟಿಯ ಜೊತೆ ಕ್ಯಾಬಿನೆಟ್ ಮಂತ್ರಿಗಿರಿಯೂ ಬೇಕಂತೆ. ಯಡ್ಡಿ ಸಂಪುಟದಲ್ಲಿ ಕುರುಬರಿಗೆ ಸ್ಥಾನ ಸಿಗಲೆಂದು ಪ್ರಕಾಶ್ ಈ ನಿರ್ಧಾರಕ್ಕೆ ಬಂದನಂತೆ-

ಅಷ್ಟಕ್ಕೂ ವರ್ತೂರು ಪ್ರಕಾಶ ಯಾರು, ಏನು, ಎತ್ತ ಎಂಬ ಬಗ್ಗೆ ಯಾರಿಗೂ ಅನುಮಾನಗಳಿಲ್ಲ. ಕಳೆದ ಚುನಾವಣೆಯಲ್ಲಿ ಕೋಲಾರದಿಂದ ಪಕ್ಷೇತರನಾಗಿ ಗೆದ್ದವನು ವರ್ತೂರು. ತಾನು ಸಿದ್ಧರಾಮಯ್ಯನವರ ನಂಬಿಕಸ್ಥ ಬಂಟ ಎಂದೇ ಪೋಜು ಕೊಡಲಾರಂಭಿಸಿದ್ದ. ಮಿಕ್ಕೆಲ್ಲಾ ಪಕ್ಷೇತರರಿಗೆ ಮಂತ್ರಿಗಿರಿ ಕೊಟ್ಟರೂ ಪ್ರಕಾಶನ ವಿಷಯದಲ್ಲಿ ಹುಷಾರಾದ ಯಡ್ಡಿ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಎಂಬ ಬೇಕಾಬಿಟ್ಟಿ ಬೋರ್ಡೊಂದನ್ನು ಪ್ರಕಾಶನ ತಲೆಗೆ ಕಟ್ಟಿ ಕೈತೊಳೆದುಕೊಂಡರು.

ಇಷ್ಟಾಗ್ಯೂ ಬಿಜೆಪಿಗಾಗಲಿ, ಮುಖ್ಯಮಂತ್ರಿಗಾಗಲಿ ನಿಷ್ಠೆಯನ್ನೇ ತೋರದೆ ತನಗೆ ಮಂತ್ರಿಗಿರಿ ಕೊಡಲಿಲ್ಲ ಎಂದು ಯಡ್ಡಿಯನ್ನೇ ಬೈದಾಡಿಕೊಂಡು ಓಡಾಡಿದ. ಯಡ್ಡಿ ತಾನೇ ಏನು ಮಾಡಿಯಾರು? ಕೊಟ್ಟ ಮಂಡಳಿ ಕಿತ್ತುಕೊಂಡು ಗೆಟ್‌ಔಟ್ ಎಂದರು. ಮತ್ತೆ ಸಿದ್ದು ಬೆನ್ನಿಗೆ ಬಿದ್ದ ವರ್ತೂರು ಯಡ್ಡಿ ಸರ್ಕಾರ ಬೀಳಿಸ್ತೀನಿ ಸಿದ್ದೂನ ಮುಖ್ಯಮಂತ್ರಿ ಮಾಡ್ತೀನಿ ಎಂದ. ಆದರೆ ಉಪಚುನಾವಣೆ ಹೊತ್ತಿಗೆ ಸಿದ್ದು ವಿರುದ್ಧವೇ ತಿರುಗಿಬಿದ್ದು ಕುಮಾರಸ್ವಾಮಿಗೆ ಭೋಪರಾಕ್ ಕೂಗುತ್ತಿದ್ದ.

ಕಡೂರು ಉಪಚುನಾವಣೆಯಲ್ಲಿ ಸಿದ್ದು ವಿರುದ್ಧವೇ ಕಿಡಿಕಾರಿ ಜೆಡಿಎಸ್‌ನ ದತ್ತರ ಪರ ಪ್ರಚಾರಕ್ಕಿಳಿದಿದ್ದ ನಂಬಿದ ಕುಮಾರಸ್ವಾಮಿ ಜೊತೆ ಹಾಕಿಕೊಂಡರು. ಯಡ್ಡಿ ಸರ್ಕಾರದ ವಿರುದ್ಧದ ಕಾರ್ಯಾಚರಣೆಗೆ ಈತನನ್ನೇ ಜೊತೆ ಹಾಕಿಕೊಂಡು ಓಡಾಡಿದರು. ಈಗ ಕುಮಾರಣ್ಣನಿಗೇ ಕೈಕೊಟ್ಟು ಗಣಿ ರೆಡ್ಡಿಗಳ ಪಕ್ಕ ಕೂತು ವರ್ತೂರು ಯಡ್ಡಿ ಭಜನೆ ಮಾಡುತ್ತಿದ್ದಾನೆ. ತಮಾಷೆಯೆಂದರೆ ತಾನು ಎಮ್ಮೆಲ್ಲೇ ಆಗುವುದಕ್ಕೂ ಮುನ್ನ ಇದೇ ಕುಮಾರಸ್ವಾಮಿ ಮತ್ತು ರೇವಣ್ಣ ಸೇರಿಕೊಂಡು ಜೆಸಿಬಿ ನಾರಾಯಣ ಎಂಬ ಹಂತಕನಿಗೆ ಸುಪಾರಿ ಕೊಟ್ಟು ತನ್ನನ್ನು ಕೊಲ್ಲಿಸಲಿದ್ದಾರೆ ಎಂದು ಪೊಲೀಸರಿಗೆ ದೂರು ಕೊಟ್ಟಿದ್ದ!

ಸದ್ಯ ಯಡ್ಡಿ ಸರ್ಕಾರಕ್ಕೆ ಗಣಿ ರೆಡ್ಡಿಗಳ ಜೊತೆ ಕೈಜೋಡಿಸಿದ್ದಾನಾದರೂ ಅದ್ಯಾವ ಗಳಿಗೆಯಲ್ಲಿ ಉಲ್ಟಾ ಹೊಡೆಯುತ್ತಾನೆಂಬುದು ಆತನಿಗೇ ಗೊತ್ತಿಲ್ಲ. ಮುಂದೊಮ್ಮೆ ಮಂತ್ರಿ ಮಾಡಲಿಲ್ಲ ಎಂದೋ, ಕೇಳಿದ್ದು ಕೊಡಲಿಲ್ಲ ಎಂದೋ ಮತ್ತೆ ತಿರುಗಿಬಿದ್ದರೆ ಏನೂ ಅಚ್ಚರಿಯಿಲ್ಲ. ರೇಣುಕನ ಖಾತೆ ಕಿತ್ತು ಪ್ರಕಾಶನಿಗೆ ಕೊಡುತ್ತಾರೋ ಅಥವಾ ಇಬ್ಬರನ್ನೂ ಅಕ್ಕಪಕ್ಕದ ಛೇಂಬರಿನಲ್ಲೇ ಇಟ್ಟು ಬಿಜೆಪಿ ಮಟ್ಟಿಗೆ ಅಸ್ಪೃಶ್ಯರನ್ನಾಗಿಸುತ್ತಾರೋ ಗೊತ್ತಿಲ್ಲ.

ಬಿಜೆಪಿಯೇ ಆಗಲಿ, ಕಾಂಗ್ರೆಸ್ಸೇ ಇರಲಿ ಅಥವಾ ಜೆಡಿಎಸ್ ಆಗಲಿ ಸದ್ಯದ ಮಟ್ಟಿಗೆ ಬೇರೆ ಯಾರನ್ನೇ ನಂಬಿದರೂ ಇವರಿಬ್ಬರನ್ನು ಮಾತ್ರ ನಂಬುವ ಸ್ಥಿತಿಯಲ್ಲಿಲ್ಲ. ಒಬ್ಬ ಮೆಂಟಲ್ ಪ್ರಕಾಶ ಮತ್ತೊಬ್ಬ ಹಲಾಲು ಟೋಪಿ ರೇಣುಕ ಎಂಬ ಈ ಕಿಲಾಡಿ ಜೋಡಿಯನ್ನು ನಂಬಿದ ಯಾರಿಗೂ ಉಳಿಗಾಲವಿಲ್ಲ.

• ರಾ.ಸೋ.

...ಹೊಸ ಚುನಾವಣೆಯತ್ತಲೂ ಯಡ್ಡಿ ಯೋಚನೆ!

...ಜೆಪಿಯ ಇನ್ನರ್ ಸರ್ಕಲ್‌ನಲ್ಲಿ ಕೇಳಿಬರುತ್ತಿರುವ ...ಮಾತೆಂದರೆ ಈಗ 2ನೇ ವಿಶ್ವಾಸಮತ ಯಾಚಿಸಿ ...ಡಲೇ ಇಡೀ ಅಸೆಂಬ್ಲಿಯನ್ನೇ ವಿಸರ್ಜಿಸಿ ಮತ್ತೆ ...ಚುನಾವಣೆಗೆ ಹೋಗುವುದು!

...ವಿಶ್ವಾಸ ಮತದ ಆಟ ವಿಶ್ವಾಸವಿರದವರ ಕಾಟ, ...ಗಳು ಬಡಿಯುತ್ತಿರುವ ಗೂಟ ಇವೆಲ್ಲದರಿಂದ ...ಪಾರಿ ಪಾರಾಗಿ ಸ್ಪಷ್ಟ ಬಹುಮತ ಪಡೆದೇ ಮತ್ತೆ ...ಕ್ಕೆ ಬರಬಹುದಲ್ಲವೇ ಎಂದು ಸ್ವತಃ ಯಡ್ಡಿ ...ಸುತ್ತಿದ್ದಾರೆ. ಈ ತಕ್ಷಣಕ್ಕೆ ವಿಶ್ವಾಸಮತ ಪಡೆದರೂ ... ಹಾರಿಸಲಬಲ್ಲ ತೂಗುಗತ್ತಿಯಾಗಿ ಭಿನ್ನಮತೀಯರ ..., ಬರುತ್ತಲೇ ಇರುತ್ತದೆಂಬುದು ಯಡ್ಡಿಗೆ ಚೆನ್ನಾಗಿ ...ಗಿಬಿಟ್ಟದೆ. ಒಂದು ಕಡೆ ರೆಡ್ಡಿಗಳ ಹಂಗು ಹಾಗೂ ...ಮತ್ತೊಂದೆಡೆ ಭಿನ್ನಮತೀಯರ ಕಿರುಕುಳ, ...ಂದೆಡೆ ಪಕ್ಷದೊಳಗೆಯೇ ಅನಂತಕುಮಾರ್ ...ನ ಅಸಹಕಾರಗಳೆಲ್ಲಾ ಯಡ್ಡಿಯನ್ನು ಸುಸ್ತು ...ತ್ತಿದೆ. ಇವೆಲ್ಲ ತಲೆನೋವುಗಳೆಲ್ಲಾ ಒಮ್ಮೆಗೆ ...ಕೆಂದರೆ ಯಡ್ಡಿ ಯಾನೆ ಬಿಜೆಪಿಗೆ ಸ್ಪಷ್ಟ ಬಹುಮತ ...ಮರು ಚುನಾವಣೆ ನಡೆದರೆ ಮಾತ್ರ ಅದು ...ಯಡ್ಡಿಗಿರುವ ಯೋಚನೆ ಏನೆಂದರೆ 2ನೇ ಬಾರಿ ...ತ ಸಾಬೀತು ಮಾಡಿದ ನಂತರವೂ ಸರ್ಕಾರ ...ಗೆ ತಾನೇ ಮುಂದಾಗಿ ಶಿಫಾರಸ್ಸು ಮಾಡಿಬಿಟ್ಟರೆ ...ಪಥಿ ತನ್ನ ಪರವಾಗಿಯೇ ಇರುತ್ತದೆ ಎಂಬುದು. ...ಈಗ ಎಷ್ಟು ದುಡ್ಡು ಕದ್ದು ಗಂಟುಕಟ್ಟಿದ್ದಾರೆಂದರೆ ...ಅಸೆಂಬ್ಲಿ ಎಲೆಕ್ಷನ್ ನಡೆಯುವುದಾದರೆ ರೆಡ್ಡಿಗಳು ...ಡದಿದ್ದರೂ ನಾನೇ ನಿಭಾಯಿಸಬಲ್ಲೆ ಎನ್ನುವ ...ರೆ. ಯಡ್ಡಿಯ ಹತ್ತಿರವಿರುವ ಬಿಜೆಪಿ ಶಾಸಕರೇ ...ಹೇಳುವ ಪ್ರಕಾರ 10 ಸಾವಿರ ಕೋಟಿ ರೂ.ತನಕ ...ಯಡ್ಡಿ ಹತ್ತಿರ ಇದೆಯಂತೆ!

...ಸಿಂದಾಗಿ ರೆಡ್ಡಿಗಳ ಮುಲಾಜಿಗೆ ಪೂರ್ತಿ ...ತಿಲ್ಲ ಎಂಬುದು ಯಡ್ಡಿಯ ಲೆಕ್ಕಾಚಾರ. ರಾಜ್ಯ ...ರುವ ಸದ್ಯದ ಪರಿಸ್ಥಿತಿಯಲ್ಲಿ ಯಡ್ಡಿ ಬಿಟ್ಟರೆ ...ಮುಕರಾಗಬಲ್ಲವರೂ ಬೇರೆ ಯಾರೂ ಕಾಣುತ್ತಿಲ್ಲ. ...ವರೆ ಈಗ ರಾಜ್ಯಾದ್ಯಂತ ಲಿಂಗಾಯತ ಮತಗಳ ... ಗಟ್ಟಿಯಾಗಿದೆ. ಲಿಂಗಾಯತರಿಗೂ ಯಡ್ಡಿ ... ಇನ್ನೊಬ್ಬ ನಾಯಕ ದಳ ಅಥವಾ ಕಾಂಗ್ರೆಸ್‌ನಲ್ಲಿ ಕಾಣುತ್ತಿಲ್ಲ. ಬಿಜೆಪಿಯೊಳಗೆ ಜಗದೀಶ್ ಶೆಟ್ಟರ್‌ಗೆ ಸದ್ಯಕ್ಕೆ ಯಡ್ಡಿಯನ್ನು ಓವರ್‌ಟೇಕ್ ಮಾಡುವ ಸಾಮರ್ಥ್ಯವಿಲ್ಲ. ಇನ್ನು ಅನಂತ್‌ಕುಮಾರ್ ಬೆಂಗಳೂರಿನ ಬ್ರಾಹ್ಮಣರಿಗಷ್ಟೇ ಲೀಡರ್. ಅಶೋಕ್ ಪಾರ್ಟಿ ಲೀಡರ್ ಆಗುವುದಿರಲಿ ಒಕ್ಕಲಿಗ ಸಮುದಾಯದ ನಾಯಕ ಅನ್ನಿಸಿಕೊಳ್ಳಲು ಇದುವರೆಗೆ ಸಾಧ್ಯವಾಗಿಲ್ಲ. ರಾಜ್ಯ ಒಕ್ಕಲಿಗರಿಗೆ ಈಗ ಕುಮಾರಸ್ವಾಮಿಯೇ ಲೀಡರ್. ಇನ್ನು ಈಶ್ವರಪ್ಪನಿಗೆ ದೇಹ ತೂಕವಿದೆಯೇ ಹೊರತು ರಾಜ್ಯನಾಯಕ ಎನಿಸಿಕೊಳ್ಳುವಷ್ಟು ವ್ಯಕ್ತಿತ್ವದ ವಜನ್ ಇಲ್ಲ. ಕನಿಷ್ಠ ಕುರುಬ ಸಮುದಾಯದವರೂ ಈಶ್ವರಪ್ಪನನ್ನು ತಮ್ಮ ನಾಯಕನೆಂದು ಈಗಲೂ ಪರಿಗಣಿಸಿಲ್ಲ.

ಹೀಗೆ ಬಿಜೆಪಿಯೊಳಗೂ ಯಡ್ಡಿಗೆ ಸಮಬಲ ಪ್ರತಿಸ್ಪರ್ಧಿಗಳಿಲ್ಲ. ಹೊರಗಡೆ ಕಾಂಗ್ರೆ-ದಳದವರ ಮಧ್ಯೆ ಚುನಾವಣಾ ಹೊಂದಾಣಿಕೆ ಯಾವ ಸಂಭವ ಕಾಣುತ್ತಿಲ್ಲ. ಇದೆಲ್ಲ ಯೋಚಿಸಿಯೇ ಯಡ್ಡಿ ಇಡೀ ವಿಧಾನಸಭೆಯನ್ನೇ ವಿಸರ್ಜಿಸಿ ಹೊಸ ಮತದಾನಕ್ಕೆ ಹೋಗುವಂತೆ ಹೇಳುತ್ತಿರಬಹುದು.

ಈಗಿನ ಪರಿಸ್ಥಿತಿಯಲ್ಲಿ ಯಡ್ಡಿಗೆ ಇನ್ನೂ ಹಲವು ಕಷ್ಟಗಳಿವೆ. ಒಂದು ವೇಳೆ ಹೈಕೋರ್ಟ್ ನಾಳೆ ಬಿಜೆಪಿ ಅತೃಪ್ತರ ಅಥವಾ ಪಕ್ಷೇತರರ ಪರ ತೀರ್ಪು ನೀಡಿಬಿಟ್ಟರೆ ಅದೂ ಕೂಡಾ ಯಡ್ಡಿ ಸರ್ಕಾರಕ್ಕೆ ಆಪತ್ತೇ. ಹಾಗೊಂದು ವೇಳೆ ಪಕ್ಷೇತರರಿಂದ ಬಚಾಯಿಸಿಕೊಂಡರೂ ಸಹ ಬಿಜೆಪಿ ಭಿನ್ನರು ಅನರ್ಹಗೊಂಡ ಕ್ಷೇತ್ರಗಳಲ್ಲಿ ಮರು ಚುನಾವಣೆ ನಡೆಸಬೇಕಾಗುತ್ತದೆ. ಅಲ್ಲೂ ಸಹ ಗೆಲ್ಲುವುದು ಬಿಜೆಪಿಗೆ ಬಹಳ ಮುಖ್ಯವಾಗುತ್ತದೆ.

ಅದೊಂದು ರೀತಿ ಬಿಜೆಪಿ ಹಾಗೂ ವಿರೋಧಿಗಳ ನಡುವಿನ ಮಾಡು ಇಲ್ಲವೇ ಮಡಿ ರೀತಿಯ ಕದನ ಕಣವಾಗಿಬಿಡುತ್ತದೆ. ಬಿಜೆಪಿ ಅಲ್ಲೆಲ್ಲಾ ಗೆದ್ದರೆ ಸರಿ ಇಲ್ಲದಿದ್ದರೆ ಆಗಲೂ ಸರ್ಕಾರ ಬಿದ್ದುಹೋಗುವ ಸಂಭವ ಬಂದೇ ಬರುತ್ತದೆ.

ಇವೆಲ್ಲಾ ಲೆಕ್ಕಾಚಾರಗಳನ್ನು ಯೋಚಿಸಿ ಅಳೆದು ತೂಗಿ ಕೊನೆಗೆ ಯಡ್ಡಿ ಮಹಾಶಯರು ಇಡೀ ಅಸೆಂಬ್ಲಿಯನ್ನೇ ವಿಸರ್ಜಿಸಿ ಬಿಡುವ ಒಂದು ಯೋಚನೆ ಮಾಡಿಟ್ಟು ಕೊಂಡಿದ್ದಾರೆ.

ಮುಂದಿನ ಒಂದು ವಾರದಲ್ಲಿ ಸ್ಥಿತಿಗತಿ ಬಿಜೆಪಿಗೆ ವಿರುದ್ಧವಾಗುವುದಾದರೆ ಬರುವ ಜನವರಿ-ಫೆಬ್ರವರಿ ವೇಳೆಗೆ ಅಸೆಂಬ್ಲಿ ಎಲೆಕ್ಷನ್ ಗ್ಯಾರಂಟಿ. •

ಕಾಂಗ್ರೆಸ್ ನಿರ್ಧಾರಗಳ ಹಿಂದಿನ ಚಿದಂಬರಂ ರಹಸ್ಯ!

ಯಡ್ಡಿ 2ನೇ ಬಾರಿ ವಿಶ್ವಾಸಮತ ಕೋರುವಂತೆ ರಾಜ್ಯಪಾಲ ಭಾರದ್ವಾಜ್ ಸೂಚನೆ ನೀಡಿದ್ದರ ಹಿಂದೆ ಕಾಂಗ್ರೆಸ್ ಹೈಕಮಾಂಡ್‌ನ ಅನೇಕ ಲೆಕ್ಕಾಚಾರಗಳು ಕೆಲಸ ಮಾಡಿರುವುದು ಸ್ಪಷ್ಟವಾಗಿದೆ.

ರಾಷ್ಟ್ರಪತಿ ಆಡಳಿತ ಹೇರುವಂತೆ ಭಾರದ್ವಾಜ್ ಶಿಫಾರಸ್ಸು ಮಾಡಿದ ನಂತರ ದೆಹಲಿಯಲ್ಲಿ ಎರಡು ರೀತಿಯ ಸಭೆಗಳಾಗಬೇಕಿತ್ತು.

ಒಂದು ಕೇಂದ್ರ ಸಚಿವ ಸಂಪುಟದ ರಾಜಕೀಯ ವ್ಯವಹಾರಗಳ ಸಮಿತಿಯದ್ದು. ಇದು ಆಡಳಿತಕ್ಕೆ ಸಂಬಂಧಿಸಿದ್ದ ಸಭೆ. ಕೇಂದ್ರದಲ್ಲಿ ಯಾವುದೇ ಪಕ್ಷದ ಸರಕಾರವಿರಲಿ ಒಂದು ರಾಜ್ಯ ಸರ್ಕಾರವನ್ನು ವಜಾಗೊಳಿಸಿ ರಾಷ್ಟ್ರಪತಿ ಆಡಳಿತ ಹೇರುವ ಬಗ್ಗೆ ಸಂವಿಧಾನದ ನೀತಿಯ ಹಿನ್ನೆಲೆಯಲ್ಲಿ ನಡೆಯುವ ಸಭೆ ಅದು.



ಆದರೆ ಆ ಸಭೆ ಅಧಿಕೃತವಾಗಿ ನಡೆಯಲೇ ಇಲ್ಲ.

ಮತ್ತೊಂದು ಕಾಂಗ್ರೆಸ್ ಹೈಕಮಾಂಡ್‌ನ ಸಭೆ. ಇದು ನಡೆದದ್ದು ಹೌದು...

ಸೋನಿಯಾ ಗಾಂಧಿ, ಎ.ಕೆ.ಆಂಟನಿ, ವೀರಪ್ಪ ಮೊಯ್ಲಿ ಹಾಗೂ ಪಿ.ಚಿದಂಬರಂ ಮುಂತಾದವರು ಪಾಲ್ಗೊಂಡಿದ್ದ ಈ ಸಭೆಯು ಕರ್ನಾಟಕದ ಆಗುಹೋಗುಗಳ ಬಗ್ಗೆ ವಿವರವಾಗೇ ಚರ್ಚಿಸಿತ್ತು. ಸೋನಿಯಾ ಹಾಗೂ ರಾಹುಲ್ ಗಾಂಧಿ ಪಕ್ಷದ ನಾಯಕರಾದ ನಂತರ ಈ ಕಾಂಗ್ರೆಸ್ ಮೊದಲಿನಂತಿಲ್ಲ. ಇಂದಿರಾ ಗಾಂಧಿಯ ಕಾಲದಲ್ಲಿ ರಾಜ್ಯಸರ್ಕಾರಗಳನ್ನು ಬೇಕಾಬಿಟ್ಟಿ ಕಿತ್ತೆಸೆಯುತ್ತಿತ್ತು ಕಾಂಗ್ರೆಸ್ ಹೈಕಮಾಂಡ್. ಆದರೆ ಈಗ ಸ್ವತಃ ಕಾಂಗ್ರೆಸ್ಸೂ ಬದಲಾಗಿದೆ. ಜೊತೆಗೆ ಆರ್ಟಿಕಲ್ 356 ಬಳಸುವ ಬಗ್ಗೆ ಸುಪ್ರೀಂ ಕೋರ್ಟ್ ಕೂಡಾ ಸ್ಪಷ್ಟ ನೀತಿ ನಿಯಮಾವಳಿಗಳನ್ನು ಹೇಳಿಬಿಟ್ಟಿದೆ. ಸೋನಿಯಾ, ಮೊಯ್ಲಿ ಮುಂತಾದವರಿಗೆ 'ರಾಷ್ಟ್ರಪತಿ ಆಡಳಿತ ಹೇರಿಕೆಯೆಂಬುದು ಮುಂದೆ ಬಿಜೆಪಿ ಪರವಾಗಿ ಜನರ ಸಿಂಪಥಿ ತರುವ ಹಾಗಾಗಬಾರದೆಂಬ ನಿಲುವಿತ್ತು. ಜೊತೆಗೆ ಯುಪಿಎ ಮೈತ್ರಿ ಸರ್ಕಾರದ ಪಾಲುದಾರರಾಗಿರುವ ಡಿಎಂಕೆ ಮುಂತಾದ ಪ್ರಾದೇಶಿಕ ಪಕ್ಷಗಳಿಗೆ ಆರ್ಟಿಕಲ್ 356 ಬಗ್ಗೆ ಮೊದಲಿನಿಂದಲೂ ಸಹಮತವಿಲ್ಲದ್ದು ಇನ್ನೊಂದು ಸಮಸ್ಯೆಯಾಗಿತ್ತು. ಇಷ್ಟಲ್ಲದೆ ರಾಜ್ಯ ಸರ್ಕಾರವನ್ನು ವಜಾ ಮಾಡಿದ ಕ್ರಮಕ್ಕೆ ಅನುಮೋದನೆ ಪಡೆಯಲು ರಾಜ್ಯಸಭೆಯಲ್ಲಿ ಕಾಂಗ್ರೆಸ್‌ಗೆ ಅಷ್ಟು ಸಂಖ್ಯಾಬಲವೂ ಇರಲಿಲ್ಲ.

ಇವೆಲ್ಲಾ ಸೇರಿ ಎರಡನೇ ಬಾರಿ ವಿಶ್ವಾಸಮತ ಯಾಚನೆಯ ಪರಿಹಾರದತ್ತ ದೂಡಿದವು. ಇದೆಲ್ಲಕ್ಕಿಂತಾ ಮಿಗಿಲಾದ ಇನ್ನೊಂದು ವಿದ್ಯಮಾನವೂ ಅಲ್ಲಿ ನಡೆಯಿತು.

ಅದಕ್ಕೆ ಕಾರಣ ಪಿ.ಚಿದಂಬರಂ. ಯಡ್ಡಿ ಸರ್ಕಾರಕ್ಕೆ 2ನೇ ಜೀವದಾನ ನೀಡುವ ತೀರ್ಮಾನವನ್ನು ಒತ್ತಾಯಿಸಿದ್ದೇ ಈ ಚಿದಂಬರಂ. ಅದು ಯಾಕೆಂದರೆ ಈ ಚಿದಂಬರಂ ಪತ್ನಿ ನಳಿನಿ ಗಣಿ ಕಳ್ಳರಾದ ರೆಡ್ಡಿಗಳ ಪರವಾಗಿ ಸುಪ್ರೀಂಕೋರ್ಟ್‌ನಲ್ಲಿ ಕೇಸ್ ನಡೆಸುತ್ತಿದ್ದಾರೆ. ಹಾಗಾಗಿ ಚಿದಂಬರಂಗೂ ರೆಡ್ಡಿ ಗ್ಯಾಂಗ್‌ಗೂ ಸಂಬಂಧ ಚೆನ್ನಾಗಿಯೇ ಇದೆ. ರೆಡ್ಡಿ ಗ್ಯಾಂಗ್ ಈ ಲಿಂಕ್ ಬಳಸಿ ಚಿದಂಬರಂ ಮೂಲಕ ಕಾಂಗ್ರೆಸ್ ಹೈಕಮಾಂಡ್ ಮೇಲೆ ಪ್ರಭಾವ ಬೀರಿರುವ ಸಾಧ್ಯತೆಯನ್ನು ತಳ್ಳಿಹಾಕಲಾಗದು.

ಒಟ್ಟಿನಲ್ಲಿ ಇವೆಲ್ಲಾ ಅಂಶಗಳೂ ಸೇರಿ ಯಡ್ಡಿಗೆ ಕೊಂಚ ಜೀವದಾನ ಸಿಕ್ಕಿತು. ಅದೇ ವೇಳೆಯಲ್ಲಿ ರಾಜ್ಯಪಾಲ ಭಾರದ್ವಾಜ್ ಮರ್ಯಾದೆಯೂ ಹೋಗುವಂತೆ ಆಯಿತು.

ಆದರೆ ಹೈಕಮಾಂಡ್‌ನ ಈ ತೀರ್ಮಾನ ರಾಜ್ಯ ಕಾಂಗ್ರೆಸ್ ಶಾಸಕರನ್ನೇ ರೊಚ್ಚಿಗೆಬ್ಬಿಸಿಬಿಟ್ಟಿದೆ. ಅವರೆಲ್ಲಾ ಸಾಮೂಹಿಕ ರಾಜೀನಾಮೆ ಕೊಡುವ ಮಾತಾಡುವ ಹಂತಕ್ಕೂ ತಳ್ಳಿದೆ. •

ಕೋಲಾರ ಪೊಲೀಸ್ ಕಾಯುವವರೇ ಮೇಯಲು ಹೊಂಟರು!






ಇದು ಕೋಲಾರ ನಗರದ ದುರಾದೃಷ್ಟ.

ಯಾಕೆಂದರೆ, ಇಲ್ಲಿ ಕಾಯಬೇಕಾದ ಪೊಲೀಸು ಮಂದಿಯೇ ಮೇಯುವ ಪೈಪೋಟಿಗೆ ಬಿದ್ದಿದ್ದಾರೆ. ಪೊಲೀಸರೇ ಕಳ್ಳರಾಗುವುದು, ದಂಧೆ-ದಗಲ್ಬಾಜಿಗಳ ಸೂತ್ರಧಾರರಾಗುವುದು ಮುಂತಾದ ಹೇಯ ಪರಂಪರೆಯೊಂದು ಕೋಲಾರ ಖಾಕಿ ಜಗತ್ತಿನ ಬೆನ್ನಿಗಿದೆ. ಕೆಲವೇ ಕೆಲವರನ್ನು ಹೊರತುಪಡಿಸಿದರೆ ಮತ್ತೆಲ್ಲ ಪೊಲೀಸರೂ ಖಾಕಿಗೆ ಗಲೀಜು ಮೆತ್ತಿಕೊಂಡವರೆ. ಇಂಥ ಪರಂಪರೆ ಮತ್ತೊಮ್ಮೆ ಜಾಹೀರಾಗಿದೆ; ಪಿಎಸ್ಸೈ ಸೇರಿದಂತೆ ಮೂವರು ಪೊಲೀಸರು ಉದ್ಯಮಿಯನ್ನು ಬೆದರಿಸಿ ಹಣ ಹೊಡೆದುಕೊಂಡು ಪರಾರಿಯಾಗುವ ಮೂಲಕ!

ಕೋಲಾರ ಟೌನ್ ಪೊಲೀಸ್ ಠಾಣೆಯ ಪಿಎಸ್ಸೈ ಎಸ್.ವೈ. ಮೋಹನ್‌ಕುಮಾರ್, ಪೇದೆಗಳಾದ ಸುಧಾಕರ್, ರಾಘವೇಂದ್ರ ಈ ಪ್ರಕರಣದ ಪ್ರಮುಖ ಆರೋಪಿಗಳು. ವಂಚನೆಗೊಳಗಾದಾತ ಬೆಂಗಳೂರಿನ ಉದ್ಯಮಿ ಹಾಲಸ್ವಾಮಿ.

ಹಾಲಸ್ವಾಮಿ ಜಮೀನು ಖರೀದಿಯೊಂದರ ಸಂಬಂಧ ಐವತ್ತೂ ಚಿಲ್ಲರೆ ಲಕ್ಷವಿದ್ದ ಸೂಟ್‌ಕೇಸ್‌ನೊಂದಿಗೆ ಕೋಲಾರದ ಪ್ರವಾಸಿ ಮಂದಿರದಲ್ಲಿ ಉಳಿದುಕೊಂಡಿದ್ದರು. ಈ ವಿಚಾರ ತಿಳಿದದ್ದೇ ಕಳ್ಳ ಪೊಲೀಸರು ಅಲರ್ಟ್ ಆಗಿದ್ದಾರೆ. ತಕ್ಷಣ ಸುಲಿಗೆಯ ಸ್ಕೆಚ್ಚಿನೊಂದಿಗೆ ಅಖಾಡಕ್ಕಿಳಿದ ಪಿಎಸ್ಸೈ ಮೋಹನ್ ಕುಮಾರ್ ಇಬ್ಬರು ಪೇದೆಗಳೊಂದಿಗೆ ಮಫ್ತಿಯಲ್ಲಿ ದಾಂಗುಡಿಯಿಟ್ಟಿದ್ದಾನೆ. ನಂತರ ಈ ವಂಚಕ ಪೊಲೀಸರು ರೈಸ್‌ಪುಲ್ಲಿಂಗ್ ಹಗರಣದ ಆರೋಪ ಹೊರಿಸಿ, ಹಣ ವಸೂಲಿಪಡಿಸಿಕೊಳ್ಳುವುದಾಗಿ ಧಮಕಿ ಹಾಕಿದ್ದಾರೆ.



ಹಾಲಸ್ವಾಮಿ ಇದಕ್ಕೆ ಸೊಪ್ಪು ಹಾಕದಿದ್ದಾಗ ಈ ಕಳ್ಳ ಪೊಲೀಸರು 75 ಸಾವಿರ ಕೊಟ್ಟರೆ ಕೇಸು ದಾಖಲಾಗದಂತೆ ನೋಡಿಕೊಳ್ಳುವುದಾಗಿ ಡಿಮ್ಯಾಂಡನ್ನೂ ಇಟ್ಟರು. ಇವರು ವಂಚಕ ಪೊಲೀಸರೆಂದು ಗೊತ್ತಾಗುತ್ತಲೇ ಹಾಲಸ್ವಾಮಿ ರೆಬೆಲ್ ಆದದ್ದೇ ಮೋಹನ್ ತಕ್ಷಣ ಡಬ್ಬಿಯೊಂದನ್ನು ಕೆಳಗಿಟ್ಟು ಕೆಲ ದಿನಗಳಿಂದ ಅವ್ಯಾಹತವಾಗಿ ನಡೆಯುತ್ತಿರುವ ಹಣ ದ್ವಿಗುಣಗೊಳಿಸುವ ದಂಧೆಯ ವಂಚಕರು ನೀವು ಅಂತ ಬಡಬಡಿಸಿದ. ಕಡೆಯದಾಗಿ ಹಾಲಸ್ವಾಮಿಯಿಂದ ಐವತ್ಮೂರು ಲಕ್ಷವನ್ನು ಬಲವಂತದಿಂದ ಕಿತ್ತುಕೊಂಡು ಪರಾರಿಯಾದ!

ಆಯ್ತು ಅಲ್ಲಿ ಹಾಲಸ್ವಾಮಿಯ ಕಡೆಯಿಂದ ಅಂತಹುದೊಂದು ದಂಧೆ ನಡೆದಿದ್ದರೆ, ವಶಪಡಿಸಿಕೊಂಡ ಹಣವನ್ನು ಠಾಣೆಗೊಪ್ಪಿಸಿ ಎಫ್ಐಆರ್ ದಾಖಲಾಗಬೇಕಿತ್ತಲ್ಲಾ? ಆದರೆ ಪಿಎಸ್ಸೈ ಮೋಹನ್ ಆ ಹಣವನ್ನು ಪೇದೆಗಳೊಂದಿಗೆ ಹಂಚಿಕೊಳ್ಳುವ ಮಸಲತ್ತು ನಡೆಸಿದ. ವ್ಯವಹಾರಕ್ಕೊಂದು ತಂದ ಲಕ್ಷಾಂತರ ರೂ. ಕಳೆದುಕೊಂಡ ಹಾಲ ಸ್ವಾಮಿ ವಂಚಕ ಪೊಲೀಸರ ವಿರುದ್ಧ ಅದಾ ಗಲೇ ಕಾನೂನು ಸಮರ ಶುರುವಿಟ್ಟಿದ್ದರು.



ಪುಟ್ಟಸ್ವಾಮಿ

ಹಾಲಸ್ವಾಮಿ ಪೊಲೀಸರ ವಿರುದ್ಧದ ದೂರು ಹೊತ್ತು ಎಸ್ಪೈ ಭಗವಾನ್ ದಾಸ್‌ರ ಬಳಿಹೋದರು. ನಂತರ ಒಂದಷ್ಟು ಕಾದದ್ದೂ ಆಯಿತು. ಆದರೆ ಯಾವ ಪ್ರಯೋಜನವೂ ಆಗಲಿಲ್ಲ. ಅದಾದ ಬಳಿಕ ದೂರು ಎಸ್ಪಿ ತ್ಯಾಗರಾಜನ್‌ರ ಬಳಿ ಹೋಗಿದೆ. ಕಾಲುನೋವಿನ ನೆಪ ಮುಂದಿಟ್ಟ ಆತನೂ ಸರಿಯಾದ ಕ್ರಮ ಕೈಗೊಳ್ಳಲಿಲ್ಲ.

ಇಷ್ಟರಲ್ಲಾಗಲೇ ನಾಲ್ಕೈದು ದಿನ ಕಳೆದುಹೋಗಿತ್ತು, ಇನ್ನೇನು ಅಖಂಡ ಐವತ್ಮೂರು ಲಕ್ಷ ಪಿಎಸ್ಸೈ ಮೋಹನ್ ಮತ್ತವನ ವಂಚಕ ಪಡೆಯ ಪಾಲಾಗೇ ಹೋಯ್ತು ಎಂಬಷ್ಟರಲ್ಲಿ ಈ ಬಗೆಗಿನ ದೂರು ಐಜಿಪಿ ಕಮಲ್ ಪಂತ್ ಕೈ ಸೇರಿತು. ಈ ಬಗ್ಗೆ ತಕ್ಷಣ ತನಿಖೆ ನಡೆಸಿದಾಗ ಖುದ್ದು ಪೊಲೀಸರೇ ವಂಚಕರೆಂಬ ವಿಚಾರ ಸ್ಪಷ್ಟವಾಗಿದೆ. ಪ್ರಕರಣ ಸಿಓಡಿ ತನಿಖೆಗೂ ಒಪ್ಪಿಸಲ್ಪಟ್ಟಿದೆ. ಜೊತೆಗೆ ವಿಚಾರಣೆ ಮುಗಿಯುವವರೆಗೂ ವಂಚಕ ಪಿಎಸ್ಸೈ ಮೋಹನ್ ಕುಮಾರ್, ಪೇದೆಗಳಾದ ಸುಧಾಕರ್, ರಾಘವೇಂದ್ರನನ್ನು ಅಮಾನತಿನಲ್ಲಿಡುವಂತೆ ಆದೇಶವೂ ಹೊರಬಿದ್ದಿದೆ.

ಈ ವಿಚಾರ ತಿಳಿಯುತ್ತಲೇ ಶಾಶ್ವತವಾಗಿ ಕಂಬಿ ಎಣಿಸಬೇಕಾಗುತ್ತದೆಂದರಿತ ವಂಚಕರು ಪೇರಿ ಕಿತ್ತಿದ್ದಾರೆ! ಗಮನೀಯ ಅಂಶವೆಂದರೆ, ಡಿವೈಎಸ್‌ಪಿ ಛಲವಾದಿ ಎಂಬಾತನಿಗೆ ಈ ವಂಚನೆಯ ಅರಿವು ಮೊದಲಿಂದಲೂ ಇತ್ತು, ಬಹುಶಃ ಪ್ರಸಾದ ತಿಂದ ಪರಿಣಾಮವೆಂಬಂತೆ ಆತ ಗುಟ್ಟು ಬಿಟ್ಟುಕೊಡಲಿಲ್ಲ. ಅದೇ ಈಗ ಅಪರಾಧವಾಗಿ ಪ್ರಕರಣ ಛಲವಾದಿಗೂ ಉರುಳಾಗಿದೆ.

ನಾಗರಿಕ ಸಮಾಜವೇ ತಲೆತಗ್ಗಿಸುವಂಥ, ಪೊಲೀಸ್ ಇಲಾಖೆಯ ಮಾನವನ್ನು ನಡುಬೀದಿಯಲ್ಲಿ ಬಿಕರಿಗಿಡುವಂಥ ಇಂಥಾ ಘಟನೆಗಳು ಕೋಲಾರ ನಗರವಾಸಿಗಳಿಗೆ ತೀರಾ ಮಾಮೂಲು. ಯಾವುದಾದರೂ ದಂಧೆಯಲ್ಲಿ ಯಾರಾದರೂ ಸಿಕ್ಕಿಬಿದ್ದರು ಅಂತೊಂದು ಸುದ್ದಿ ಬಂದರೆ ಇಲ್ಲಿನ ಜನ 'ಸಿಕ್ಕಿ ಬಿದ್ದದ್ದು ಕಳ್ಳರಾ, ಪೊಲೀಸರಾ' ಎಂಬಂಥ ಕನ್‌ಫ್ಯೂಸಿಗೊಳಗಾಗುವಂತಾಗಿದೆ!

ಯಾಕೆಂದರೆ, ಕೋಲಾರ ನಗರ ಠಾಣೆಯ ಕೆಲ ಪೊಲೀಸರು ಅಡಿಗಡಿಗೆ ಇಂಥ ಭಾನಗಡಿಗಳಲ್ಲಿ ತಗುಲಿಕೊಳ್ಳುತ್ತಲೇ ಇರುತ್ತಾರೆ. 2007 ರಲ್ಲಿ ಇಪ್ಪತ್ತೊಂಭತ್ತು ಜನರನ್ನು ಕೊಲೆಗೈದಿದ್ದ ಸೀರಿಯಲ್ ಕಿಲ್ಲರ್ ಶ್ಯಾಮ್ ತಪ್ಪಿಸಿಕೊಂಡು ಹೋದ ಸಂದರ್ಭದಲ್ಲಿ ಕೋಲಾರ ಪೊಲೀಸ್ ಇಲಾಖೆ ಬೆತ್ತಲಾಗಿತ್ತು. ಶ್ಯಾಮ್‌ನನ್ನು ಪರಪ್ಪನ ಅಗ್ರಹಾರದಿಂದ ಕೋಲಾರ ಸಬ್‌ಜೈಲಿಗೆ ಕರೆದುಕೊಂಡು ಹೋಗುತ್ತಿದ್ದ ವೇಳೆ ಆತ ಚಿಕ್ಕತಿರುಪತಿ ಬಳಿ ತಪ್ಪಿಸಿಕೊಂಡಿದ್ದ. ಈ ಪ್ರಕರಣವನ್ನು ಸಹ ಕಮಲ್ ಪಂತ್‌ರೇ ಕೈಗೆತ್ತಿಕೊಂಡು ತನಿಖೆ ನಡೆಸಿದಾಗ ಕೆಲ ಪೊಲೀಸರೇ ಕಳ್ಳರ ಸ್ಥಾನದಲ್ಲಿ ನಿಂತಿದ್ದರು. ಕೋಲಾರದ ಮೂವರು ಪೊಲೀಸರು ಸ್ವತಃ ಶ್ಯಾಮ್‌ಗೆ ಮೊಬೈಲ್ ನೀಡಿ, ಸ್ನೇಹಿತರೊಂದಿಗೆ ಮಾತನಾಡಲು ಅವಕಾಶ ಕಲ್ಪಿಸಿ ಪರಾರಿಯಾಗಲು ಸಹಕರಿಸಿದ್ದರಲ್ಲದೇ, ಒಂದಷ್ಟು ಹಣಕ್ಕೂ ಡಿಮ್ಯಾಂಡ್ ಇಟ್ಟಿದ್ದರು. ಈ ವಿಚಾರವನ್ನು ಕೆಲ ದಿನಗಳ ಬಳಿಕ ಹೊಸಕೋಟೆ ಬಳಿ ಸೆರೆಸಿಕ್ಕ ಶ್ಯಾಮ್ ಒಪ್ಪಿಕೊಂಡಿದ್ದ.

ನಂತರ 2009ರಲ್ಲಿ ಟೌನ್ ಠಾಣೆಯ ಎಸ್ಪಿ ಕೆ.ಪಿ. ಪುಟ್ಟಸ್ವಾಮಿಯೆಂಬಾತ ಲಂಚ ಪ್ರಕರಣವೊಂದರಲ್ಲಿ ಲೋಕಾಯುಕ್ತರಿಗೆ ತಗುಲಿಕೊಂಡ. ಈ ಆಸಾಮಿ ತನ್ನದೇ ಠಾಣೆಯ ಕಾನ್ಸ್‌ಟೇಬಲ್‌ನಿಂದಲೇ ಹಣ ಎತ್ತುವ ತಯಾರಿ ನಡೆಸಿದ್ದ! ಕಾನ್ಸ್‌ಟೇಬಲ್ ಪ್ರಕಾಶ್ ವಿಆರ್‌ಎಸ್ ಕೊಡುವಂತೆ ಮನವಿ ಮಾಡಿಕೊಂಡರೆ, ದುಷ್ಟ ಪುಟ್ಟಸ್ವಾಮಿ 25 ಸಾವಿರಕ್ಕೆ ಡಿಮ್ಯಾಂಡ್ ಇಟ್ಟಿದ್ದ. ದಿನಗಳೆಂದಂತೆ ಆ ಮೊತ್ತವನ್ನು ರೈಸ್ ಮಾಡುತ್ತಾ ಸಾಗಿ ಕೊನೆಗೊಂದುದಿನ ವಿನಾಃಕಾರಣ ಪಾಪದ ಪೇದೆಯನ್ನು ಡಿಸ್‌ಮಿಸ್ ಮಾಡಿ ದರ್ಪ ತೋರಿದ್ದ. ನಂತರ 10 ಸಾವಿರ ಕೊಟ್ಟರೆ ಮತ್ತೆ ಸೇರಿಸಿಕೊಳ್ಳುವುದಾಗಿಯೂ ಹೇಳಿದ್ದ. ಈ ಕುರಿತಾಗಿ ಪೇದೆ ದೂರು ನೀಡಿ ಪುಟ್ಟಸ್ವಾಮಿ ರೆಡ್‌ಹ್ಯಾಂಡಾಗಿ ಲೋಕಾಯುಕ್ತರಿಗೆ ತಗುಲಿಕೊಂಡಿದ್ದ.

ಇನ್ನು 2009 ರಲ್ಲಿ ಕೋಲಾರ ಠಾಣಾ ವ್ಯಾಪ್ತಿಯಲ್ಲೇ ಇನ್ನೊಂದು ಭಾನಗಡಿ ನಡೆಯಿತು. ಅದು ಕೋಲಾರ ನಗರ ಠಾಣೆಯ ಮೇಲಧಿಕಾರಿಗಳು ಮಾತ್ರವಲ್ಲದೆ, ನೌಕರರೂ ಸಹ ಎತ್ತುವಳಿ ರೋಗಕ್ಕೆ ತುತ್ತಾಗಿದ್ದಾರೆಂಬುದನ್ನು ಜಾಹೀರಾಗಿಸಿತು. ನಡೆದದ್ದೇನೆಂದರೆ, ಇಲ್ಲಿ ಕಾನ್ಸ್‌ಟೇಬಲ್ ಆಗಿದ್ದ ಚಿಕ್ಕರೆಡ್ಡಪ್ಪ ಕೆಪಿಎಸ್‌ಸಿ ಎಕ್ಸಾಮ್ ಬರೆದು ಪಾಸಾಗಿ ಲೆಕ್ಚರ್ ನೌಕರಿ ಹಿಡಿದಿದ್ದ. ಇದಕ್ಕಾಗಿ ಆತನಿಗೆ ಕಾನೂನು ಸಮ್ಮತ ರಿಲೀವ್ ಆದೇಶ ಬೇಕಾಗಿತ್ತಷ್ಟೇ. ಇದಕ್ಕಾಗಿಯೇ ಇಲ್ಲಿನ ಎರಡನೇ ದರ್ಜೆ ಗುಮಾಸ್ತ ನಾಗರಾಜ್ 4 ಸಾವಿರಕ್ಕೆ ಬೇಡಿಕೆಯಿಟ್ಟಿದ್ದ. ಅದರಿಂದಾಗಿಯೇ ಲೋಕಾಯುಕ್ತರಿಗೆ ಸಿಕ್ಕಿಬಿದ್ದ.

ಕೋಲಾರ ನಗರ ಠಾಣೆಯ ಇಂಥ ಅಸಹ್ಯ ಪರಂಪರೆಯನ್ನು ಇದೀಗ ಪಿಎಸ್ಸೈ ಮೋಹನ್ ಹಾಗೂ ಆತನ ಸಹೋದ್ಯೋಗಿಗಳು ಮುಂದುವರೆಸಿದ್ದಾರೆ. ಈ ವಂಚಕರಿಗೀಗ ಕಂಬಿ ಎಣಿಸುವುದು ಕಾಯಂ ಎಂಬ ದಿಗಿಲು ಹತ್ತಿದಂತಿದೆ. ಆ ಹಿನ್ನೆಲೆಯಲ್ಲಿ ಯಾವ ಉದ್ಯಮಿಯಿಂದ 53 ಲಕ್ಷ ಕಿತ್ತಿದ್ದರೋ ಅವನದೇ ಕಾಲಿಗೆ ಬಿದ್ದು ಪಾರಾಗುವ ದೈನೇಸಿ ಸ್ಥಿತಿಗಿಳಿದಿದ್ದಾರೆ. ಈ ಲಫಂಗರು ಇದೀಗಲೇ ಕದ್ದ ಹಣದಲ್ಲಿ ಒಂದಷ್ಟು ತಿಂದು ಮಿಕ್ಕಿದ್ದನ್ನು ಉದ್ಯಮಿಗೆ ತಲುಪಿಸಿರುವ ಬಗ್ಗೆಯೂ ಗುಲ್ಲೆದ್ದಿದೆ.

ಇಂಥ ನೂರಾರು ಪ್ರಕರಣಗಳು ಕೋಲಾರ ನಗರ ಠಾಣೆ ವ್ಯಾಪ್ತಿಯಲ್ಲಿ ದಿನನಿತ್ಯ ನಡೆಯುತ್ತಿವೆ. ಈ ಉದ್ಯಮಿ ಆಯನೂರು ಮಂಜುನಾಥ್‌ರ ಆಪ್ತ ವಲಯದವನಾಗಿರುವುದರಿಂದ ಪ್ರಕರಣ ಇಂಥ ತಿರುವು ಪಡೆದುಕೊಂಡಿದೆ ಯಷ್ಟೇ.

ಇಂಥಾ ಕಳ್ಳ ಪೊಲೀಸರಿಗೆ ಕಡಿವಾಣ ಹಾಕದಿದ್ದರೆ ಜನರೇ ಪೊಲೀಸರನ್ನು ಅಟ್ಟಾಡಿಸುವ ಕಾಲ ದೂರ ಉಳಿದಿಲ್ಲ. ●

ಹೆದ್ದಾರಿ ದರೋಡೆ ನಿತ್ಯ ದಂಧೆ!

ಕೋಲಾರ ಸುತ್ತಮುತ್ತಲ ಹೆದ್ದಾರಿಗಳಲ್ಲಿ ಮರಳು ಲಾರಿ, ಸರಕು ಸಾಗಣೆ ವಾಹನಗಳನ್ನು ತಡೆಗಟ್ಟಿ ಲೂಟಿ ಹೊಡೆಯುವ ದಂಧೆಯೂ ನಿತ್ಯ ನಡೆಯುತ್ತಿದೆ. ಹಾಗೆಂದಾಕ್ಷಣ ಯಾವುದೋ ದರೋಡೆಕೋರರ ತಂಡ ಅಖಾಡಕ್ಕಿಳಿದಿದೆ ಅಂದುಕೊಂಡರದು ತಪ್ಪು ತಿಳಿವಳಿಕೆ. ಯಾಕೆಂದರೆ ದರೋಡೆ ಮಾಡುತ್ತಿರುವವರು ಖುದ್ದು ಪೊಲೀಸರೆ!

ಕೆಲ ಪೊಲೀಸರಿಗಿದು ರೆಗ್ಯುಲರ್ ಡ್ಯೂಟಿ. ಏನೋ ಮಹಾ ತಪಾಸಣೆ ನಡೆಸುವವರಂತೆ ತೋರಿಸಿಕೊಳ್ಳುವ ಈ ಖಾಕಿಗಳು ಸ್ಪಾಟಲ್ಲೇ ಡೀಲು ಕುದುರಿಸುತ್ತಾರೆ. ಮರಳು ಲಾರಿ ಹಾಗೂ ಸರಕು ಸಾಗಣೆ ವಾಹನಗಳನ್ನು ತಡೆದು ನಿಲ್ಲಿಸಿ ಕಿರಿಕ್ಕು ಆರಂಭಿಸಿ ಮನಸಾರೆ ಹಣ ಕೀಳಲಾಗುತ್ತಿದೆ. ಈ ದಂಧೆಯೊಂದರಿಂದಲೇ ದಿನನಿತ್ಯ ಕನಿಷ್ಠವೆಂದರೂ ಹತ್ತು ಸಾವಿರದಷ್ಟು ಸಂಪಾದನೆ ಮಾಡುತ್ತಾರೆ!

ಇದು ಬಹು ಹಿಂದಿನಿಂದ ನಡೆದುಕೊಂಡು ಬಂದಿರುವ, ಇಂದಿಗೂ ನಡೆಯುತ್ತಿರುವ ಪ್ರಮುಖ ದಂಧೆ. ಭ್ರಷ್ಟರನ್ನು ಒಂದು ಕಡೆಯಿಂದ ಬಗ್ಗು ಬಡಿಯುತ್ತಿರುವ ಡಿಐಜಿ ಪಂತ್ ಅವರು ಈ ಬಗ್ಗೆಯೂ ಗಮನ ಹರಿಸಿದರೆ ಒಳಿತು.

ಕೈಕೊಟ್ಟ ಹೈಕಮಾಂಡ್ ಮತ್ತು ಮಣ್ಣುಪಾಲಾದ ಸಿದ್ದು ಕನಸು

▶▶ 10

ಮತ್ತು ಹರಿಪ್ರಸಾದ್ ಮತ್ತೊಂದೆಡೆ ಸಿದ್ದು ವಿರುದ್ಧ ... ಮಸೆಯುತ್ತಿದ್ದ ಖರ್ಗೆ, ಧರ್ಮಸಿಂಗ್, ಮೊಯ್ಲಿ ಮು... ಮುನಿಯಪ್ಪ ಇತ್ಯಾದಿಗಳೆಲ್ಲ ಪ್ರಧಾನಿ ಮನಮೋಹನ್ ಸಿಂ... ಕಿವಿಕಚ್ಚಿದ ಫಲವಾಗೇ ಚಿದಂಬರಂ ತಮ್ಮ ನಿರ್ಧಾ... ಬದಲಿಸಿದ್ದಾರೆ. ಯಡ್ಡಿಗೆ ಮತ್ತೊಂದು ಅವಕಾಶ ಕಲ್ಪಿಸುವ... ರಾಜ್ಯಪಾಲರ ಮನವೊಲಿಸಿದ್ದಾರೆ! ಈ ರೀತಿ ಕೃಷ್ಣ ಖರ್ಗೆ... ಮೊಯ್ಲಿ, ಧರ್ಮಸಿಂಗ್ ಥರದ ವಿವಿಧ ಹಿತಾಸ... ಹೈಕಮಾಂಡ್ ನಾಯಕರನ್ನು ಕೋ-ಆರ್ಡಿನೇಟ್ ಮಾಡು... ಮೂಲಕ ಬಿ.ಕೆ. ಹರಿಪ್ರಸಾದ್ ತಮಗೆ ದೇವೇಗೌಡ... ಮಾಡಿದ್ದ ಅನ್ಯಾಯಕ್ಕೆ ಪ್ರತೀಕಾರ ಸಾಧಿಸಿಕೊಂಡಿದ್ದಾರೆ.

ಈ ಎಲ್ಲಾ ಲೆಕ್ಕಾಚಾರಗಳ ಹೊರತಾಗ್ಯೂ ಅತೃಪ್ತ... ದಂಗೆಗೂ ಮುನ್ನ ರಾಜ್ಯ ರಾಜಕಾರಣದಲ್ಲಿ ಸದ್ದಿಲ್ಲದ... ಕೆಲ ಬೆಳವಣಿಗೆಗಳಾಗಿದ್ದವು. ಕುಮಾರಸ್ವಾಮಿ ಸಿದ್ಧರಾಮಯ್ಯ... ನವರ ಮನೆಗೇ ಹೋಗಿ ಅದೆಂಥದೋ ಕಾರ್ಯತಂತ್ರವನ್ನು... ರೂಪಿಸಿ ಬಂದಿದ್ದರು. ಇದಕ್ಕೂ ಮುನ್ನ ದೇವೇಗೌಡ... ಖುದ್ದಾಗಿ ಕಾಂಗ್ರೆಸ್ ಕೇಂದ್ರ ನಾಯಕ ಅಹ್ಮದ್ ಪಟೇಲ್... ಜೊತೆ ಕೂನು ಸುದೀರ್ಘ ಮಾತುಕತೆಯೊಂದನ್ನು... ಮುಗಿಸಿದ್ದರು. ಇದಾದ ಮೇಲೆ ಮಗ ಕುಮಾರಸ್ವಾಮಿ... ಕೂಡ ಅಹ್ಮದ್ ಪಟೇಲ್‌ರನ್ನು ಕಂಡು ಕಾರ್ಯಾಚರ... ಯನ್ನು ಆಖೈರುಗೊಳಿಸಿದ್ದರು.

ಆ ಪ್ರಕಾರ ಯಡ್ಡಿ ಸರ್ಕಾರವನ್ನು ಬೀಳಿಸು... ದೇಸಿದ್ದರೂ ಅದು ಅಪ್ಪ ಮಕ್ಕಳ ಕೆಲಸ ಮಾತ್ರ. ... ನಿಟ್ಟಿನಲ್ಲಿ ಕಾಂಗ್ರೆಸ್‌ನಿಂದ ಯಾವುದೇ ನೆರವನ್ನು ಮ...



ಮಕ್ಕಳು ನಿರೀಕ್ಷಿಸುವಂತಿಲ್ಲ, ಹಾಗೊಮ್ಮೆ ಕಾಂಗ್ರೆಸ್ ನೆರ... ಬೇಕಿದ್ದರೆ ಅದು ಸರ್ಕಾರ ಬಿದ್ದ ನಂತರ ಮಾತ್ರ. ಅದ... ಪರ್ಯಾಯ ಸರ್ಕಾರದ ರಚನೆಗಷ್ಟೇ ಸೀಮಿತ. ವಿನಾಕಾರ... ರಾಷ್ಟ್ರಪತಿ ಆಳ್ವಿಕೆ ಹೇರಿ ರಾಷ್ಟ್ರವ್ಯಾಪಿ ವಿರೋಧಾಭಾ... ವೊಂದಕ್ಕೆ ಕಾಂಗ್ರೆಸ್ ತಲೆ ಕೊಡಲಾಗದು ಎಂದೇ ಅಹ್ಮ... ಪಟೇಲ್ ಅಪ್ಪ ಮಕ್ಕಳಿಗೆ ತಾಕೀತು ಮಾಡಿದ್ದರು.

ಅದನ್ನು ನಂಬಿಕೊಂಡೇ ಕುಮಾರಸ್ವಾಮಿ ಬಿಜೆ... ಹುತ್ತಕ್ಕೆ ಕೈಯಿಟ್ಟಿದ್ದರು. ಶುರುವಿನಲ್ಲಿ 18 ಮ... ಅತೃಪ್ತರಿಂದ ರಾಜ್ಯಪಾಲರಿಗೆ ಮನವಿ ಕೊಡುವ ಬದ... ಅದೇ ಮನವಿಯನ್ನು ಸ್ಪೀಕರ್‌ಗೆ ಕೊಟ್ಟಿದ್ದರೆ ಕತೆಯೆ... ಬೇರೆಯದಾಗುತ್ತಿತ್ತು. ದುಡುಕಿ ರಾಜ್ಯಪಾಲರಿ... ಕೊಟ್ಟುಬಿಟ್ಟರು. ಅದೇ ಮನವಿಯನ್ನು ಇಟ್ಟುಕೊಂಡ... ಸ್ಪೀಕರ್ ಮೂಲಕ ಬಿಜೆಪಿ ಆಟಕ್ಕಿಳಿಯಿತು. ವಿಪ... ಉಲ್ಲಂಘನೆಗೂ ಮೊದಲೇ ಶಾಸಕರನ್ನು ಅನರ್ಹಗೊಳಿಸಿ... ಜೊತೆಗೆ ಬಲಾಬಲದ ಮೇಲೆ ವಿಶ್ವಾಸಮತ ಕೋರುವ... ರಾಜ್ಯಪಾಲರು ನೀಡಿದ ಆದೇಶಕ್ಕೆ ಸ್ಪೀಕರ್ ಬೋಪ... ಣ್ಣರೇ ಎನ್ನಲಿಲ್ಲ.

ಅಲ್ಲಿಗೆ ಕುಮಾರಸ್ವಾಮಿಯ ಲೆಕ್ಕಾಚಾರವೇ ತಲೆ... ಗಾಗಿತ್ತು, ಯಾವತ್ತು ರಾಜ್ಯಪಾಲರ ಆದೇಶಕ್ಕೆ ಸ್ಪೀಕ... ಬೆಲೆ ಕೊಡಲಿಲ್ಲವೋ, ಪಕ್ಷೇತರರನ್ನೂ ಹೊರಗಿ... 'ಗೋಲ್‌ಮಾಲ್' ಬಹುಮತ ಮಾಡಿ ಬಿಜೆ... ರಾಜ್ಯಪಾಲರನ್ನೇ ಬ್ಲ್ಯಾಕ್‌ಮೇಲ್‌ಗಿಳಿಯಿತೋ ಸಹಜವಾ... ಹೈಕಮಾಂಡ್ ತನ್ನ ಅಸ್ತ್ರ ಬಿಡಬೇಕಿತ್ತು. ರಾಷ್ಟ್ರಪತಿ ಆಳ್ವಿ... ಕೇಂದ್ರ ಎಷ್ಟೇ ಹಿಂಜರಿದರೂ ನ್ಯಾಯಾಂಗದ ಮೆ... ಮೊಯ್ಲಿಗೆ ಹಿಡಿತವಿತ್ತು. ಪಕ್ಷೇತರರ ವಜಾ ವಿರ... ಕಾನೂನಿನಲ್ಲೇ ಸಾಕಷ್ಟು ಅವಕಾಶವಿತ್ತು ಅಥವಾ ತೀರ್ಪ... ಬಂದ ನಂತರವಷ್ಟೇ ಬಹುಮತ ಸಾಬೀತುಪಡಿಸುವ... ರಾಜ್ಯಪಾಲರು ತಾಕೀತು ಮಾಡಬಹುದಿತ್ತು, ಹೈಕೋರ್ಟ... ಸದ್ಯಕ್ಕೆ ತೀರ್ಪು ಕೊಡಲಾರದು ಎಂದು ಗೊತ್ತಿ... ರಾಜ್ಯಪಾಲರು ಯಡ್ಡಿಗೆ ಎರಡನೇ ಅವಕಾಶ ಕೊಟ್ಟ...

ಅದು ಗೃಹ ಸಚಿವ ಚಿದಂಬರಂ ಮೂಲಕ ಮೊಂ... ಖರ್ಗೆ, ಕೃಷ್ಣ ಧರ್ಮಸಿಂಗ್ ಸೇರಿ ಹೇಳಿಸಿದ ನಿರ್ಧಾ... ವಾಗಿತ್ತೆ? ಕಾಲವಷ್ಟೇ ನಿರ್ಧರಿಸಬೇಕು. ಒಂದಂತೆ... ಸತ್ಯ-ಕಾಂಗ್ರೆಸ್‌ನ ಹೈಕಮಾಂಡ್ ಅಧಿಪತಿಗಳು ಏರಿಗೆಳೆ... ಲೋಕಲ್ ಸಿದ್ದು ನೇತೃತ್ವದ ಕಾಂಗ್ರೆಸ್ಸಿಗರು ನೀರಿಗೆಳೆಯು... ತ್ತಿದ್ದಾರೆ. ಪರಸ್ಪರ ಹೊಂದಾಣಿಕೆಯಿಲ್ಲ, ಒಬ್ಬರನ್ನು ಕಂ... ಮತ್ತೊಬ್ಬರಿಗಾಗುವುದಿಲ್ಲ, ಪರಿಸ್ಥಿತಿಯೇ ಹೀಗಿರುವಾ... ಕಾಂಗ್ರೆಸ್ಸಿಗೆ ಶತ್ರುಗಳಾದರೂ ಏಕೆ ಬೇಕು?

ನಂಬಿ ಕೆಟ್ಟಿದ್ದು ಮಾತ್ರ ಅಪ್ಪ ದೇಗೌ ಮತ್ತು ... ಕುಮಾರಸ್ವಾಮಿ. ಎಂಥಾ ವಿಪರ್ಯಾಸವಲ್ಲವೆ?

● ರಾ. ಸೋಮನಾ...

ಾಸನ: ಕರಸೇವಕ ಎಸ್‌ಐ ರಾಘವೇಂದ್ರ
ವಸೂಲೀಲಿ ಪಕ್ಕಾ ಸೆಕ್ಯುಲರ್!

ಾಸನ ನಗರ ಠಾಣೆಯ ಎಸ್ಸೈ ರಾಘವೇಂದ್ರನ
ನಡವಳಿಕೆಗಳು ಹದ್ದು ಮೀರಿವೆ. ಈತನ
ರಖಮುಗಳಿಗೆ ಸಿಕ್ಕು ಇಲ್ಲಿನ
ಸ್ಯವೂ ಉಸಿರುಗಟ್ಟಿದಂಥಾ ಸ್ಥಿತಿ ತಲುಪಿ
ಸಮುದಾಯ ದಿಕ್ಕೆಟ್ಟು ಕೂತಿದೆ.
ದರೀತ ಸಂಘ ಪರಿವಾರದ
ರಬೇಕೆಂದುಕೊಂಡರೆ ಅದೂ ಕೂಡಾ
ಯಾಕೆಂದರೆ, ರಾಘವೇಂದ್ರ ಸಂಘಸನ್ನಿ
ಹೌದು. ಆದರೆ ವಸೂಲಿ ವಿಚಾರಕ್ಕೆ ಬಂದರೆ
ಪಕ್ಕಾ ಸೆಕ್ಯುಲರ್. ಇದರಿಂದಾಗಿ ರಾಘವೇಂದ್ರ
ಸಾಕು ಭಜರಂಗಿಗಳೂ ಭುಸುಗುಡುತ್ತವೆ!

ದ ಏಪ್ರಿಲ್‌ನಲ್ಲಿ ಹಾಸನ ಕೋಮುಗಲಭೆಗೆ
ತ್ತಲ್ಲಾ? ಆ ಸಂದರ್ಭದಲ್ಲಿ ರಾಘವೇಂದ್ರ
ಕೊಂಡ ರೀತಿ ಇಂದಿಗೂ ಬೂದಿಮುಚ್ಚಿದ
ಥಾ ಪರಿಸ್ಥಿತಿ ಮುಂದುವರೆದಿರುವುದಕ್ಕೆ
ಒಂದಿಡೀ ಮುಸ್ಲಿಂ ಸಮುದಾಯ ಬಂಡೆದ್ದು
ಳಿಯುವುದಕ್ಕೆ ಕಾರಣವಾಗಿದೆ.

ಘವೇಂದ್ರನ ದೆಸೆಯಿಂದಲೇ ಆಗಸ್ಟ್
ಮತ್ತೊಂದು ರೌಂಡು ಕೋಮುದಳ್ಳುರಿ
ರಿತ್ತು. ಈ ಸಂದರ್ಭದಲ್ಲಿ ಆರೆಸ್ಸೆಸ್ ಮಂದಿ
ಯುವಕರು ತಮ್ಮ ಕಚೇರಿ ಮೇಲೆ ಕಲ್ಲು
ರು ಅಂತೆಲ್ಲ ಪ್ರತಿಭಟಿಸಿದ್ದರು. ಇದನ್ನೆ ಪ್ಲಸ್
ಟಾಗಿಸಿಕೊಂಡ ರಾಘವೇಂದ್ರ ಯಾರೋ
ಮಂದಿ ಕಿಡಿಗೇಡಿಗಳ ಕೃತ್ಯಕ್ಕೆ ಇಡೀ
ಸಮುದಾಯವೇ ಅಪರಾಧಿ ಸ್ಥಾನದಲ್ಲಿ
ಥಾ ಸ್ಥಿತಿ ನಿರ್ಮಿಸಿದ.

ದಾ ಕಿಡಿಗೇಡಿಗಳನ್ನು ಮಟ್ಟ
ಡುವಂತೆ ಪೋಸು ಕೊಡುತ್ತಾ ಅಖಾಡಕ್ಕಿಳಿದ
ಂದ್ರ ಅಪರಾತ್ರಿಯಲ್ಲಿ ಅಮಾಯಕರ ಮನೆಗೆ
ದಾಂಧಲೆಯೆಬ್ಬಿಸಿದ. ಘಟನೆಯೊಂದಿಗೆ
ಸಂಬಂಧವಿರದ ಅನೇಕರನ್ನು ಅರೆಸ್ಟ್ ಮಾಡಿದ. ಅಖಂಡ ಐವತ್ತು ಮಂದಿ ಮುಸ್ಲಿಮರು ಜೈಲು ಪಾಲಾದರು. ಇದರಲ್ಲಿ ಶಾಲಾ ಕಾಲೇಜುಗಳಿಗೆ ಹೋಗುವವರು, ಕೂಲಿನಾಲಿ ಮಾಡಿ ಹೊಟ್ಟೆ ಹೊರೆದುಕೊಳ್ಳುವವರೇ ಅಧಿಕ ಸಂಖ್ಯೆಯಲ್ಲಿದ್ದರು.

ದುರಂತವೆಂದರೆ, ಈ ರೀತಿ ಕಂಡವರನ್ನು ಸರಳ ಹಿಂದೆ ದಬ್ಬಿದ ರಾಘವೇಂದ್ರ ಠಾಣೆಯಲ್ಲಿ ಕೂತೇ ವಸೂಲಿ ವರಾತ ಶುರುವಿಟ್ಟುಕೊಂಡ. ಬಂಧಿತರನ್ನು ಬಿಡುಗಡೆಗೊಳಿಸುವುದರಿಂದ ಹಿಡಿದು ಬಂಧನದಿಂದ ತಪ್ಪಿಸಿಕೊಳ್ಳುವವರೆಗೆ ರೇಟು ಫಿಕ್ಸ್ ಮಾಡಿದ. ಹಣವಂತ ಮುಸ್ಲಿಂ ಮಂದಿ ತಂತಮ್ಮವರನ್ನು ಬಂಧಿಗಳಾಗದಂತೆ ನೋಡಿಕೊಂಡರೆ, ಬಡಬಗ್ಗರು ಕಂಗಾಲಾಗಿಹೋದರು. ಈ ಸ್ಥಿತಿ ಇಂದಿಗೂ ಮುಂದುವರೆದು ಮುಸ್ಲಿಮರ ಕಡೆಯಿಂದ ಪ್ರತಿಭಟನೆಗಳು ನಡೆಯುತ್ತಿವೆ.

ಇನ್ನು ಇನ್ನೊಂದು ಮಜಲಿನತ್ತ ಗಮನ ಹರಿಸಿದರೆ, ಮೂಲತಃ ಕರಸೇವಕ ಮನಸ್ಥಿತಿಯ ರಾಘವೇಂದ್ರನ ಎತ್ತುವಳಿಯ ಸೆಕ್ಯುಲರ್ ಅವತಾರವೊಂದು ಹೊರಬೀಳುತ್ತದೆ. ಯಾಕೆಂದರೆ ಈತ ಕಂಡಕಂಡ ಮುಸ್ಲಿಮರನ್ನು ಬಂಧಿಸಿದಂತೆಯೇ ನಲ್ವತ್ತು ಮಂದಿ ಹಿಂದೂಗಳನ್ನೂ ಒಳದಬ್ಬಿದ್ದ. ಇವರಿಗೂ ಮತ್ತದೇ ಹಣದ ಡಿಮ್ಯಾಂಡಿಟ್ಟಿದ್ದ. ಈ ವಿಚಾರ ಎರಡೂ ಕಡೆಯವರಿಂದಲೂ ಆಕ್ರೋಶದ ರೂಪದಲ್ಲಿ ಹೊರಬೀಳುತ್ತಿವೆ.

ಚಿಕ್ಕಪುಟ್ಟ ಭಿನ್ನಾಭಿಪ್ರಾಯಗಳೂ ಗಲಭೆಯ ರೂಪ ಪಡೆಯಬಲ್ಲ ಸನ್ನಿವೇಶದಲ್ಲಿ ಖಾಕಿ ಪಡೆ ಮೈಯೆಲ್ಲ ಕಣ್ಣಾಗಿರಬೇಕಾಗುತ್ತದೆ. ಆದರೆ ಖಾಕಿ ತೊಟ್ಟ ರಾಘವೇಂದ್ರ ಯಾವ ಕಡೆಯಿಂದ ಲಾಭ ಹುಟ್ಟುತ್ತದೆಂಬ ಲೆಕ್ಕಾಚಾರ ಹಾಕುವ ಜಾಯಮಾನದವನು. ಈತನ ಜಾತಕ ಜಾಲಾಡಿದರೆ ಪೂರ್ತಿಯಾಗಿ ಹಣಬಾಕತನ, ಅಂದಾದುಂದಿಗಳೇ ಎದುರುಗೊಳ್ಳುತ್ತವೆ.

ಮೂಡಿಗೆರೆ, ಹಾಸನದ ಬಡಾವಣೆ ಠಾಣೆಗಳಲ್ಲಿ ಎಸ್ಸೈಯಾಗಿ ಅಡ್ಡಾಡಿಕೊಂಡು ಬಂದ ರಾಘವೇಂದ್ರ ನಗರ ಠಾಣೆಗೆ ವಕ್ಕರಿಸಿಕೊಂಡಿದ್ದು ಈಗ್ಗೆ ಎರಡು ವರ್ಷಗಳ ಹಿಂದೆ. ಯಾರೇ ಎಸ್ಪಿಯಾಗಿ ಬಂದರೂ ಅವರನ್ನು ಶರಂಪರ ಓಲೈಸಿಕೊಂಡು, ಮಸ್ಕಾ ಹೊಡೆದಿಟ್ಟುಕೊಳ್ಳುವುದು ರಾಘವೇಂದ್ರನ ಕಾರ್ಯವೈಖರಿ. ಮಾತೆತ್ತಿದರೆ ಸಾಕು ಸಿ.ಟಿ. ರವಿ ತನ್ನ ನೆಂಟ ಅನ್ನುತ್ತಾನೆ. ಆರೆಸ್ಸೆಸ್ ಲಿಂಕಿದೆ ಅಂತಲೂ ಅನ್ನುತ್ತಾನೆ. ತೀರಾ ಕುತ್ತಿಗೆಗೆ ಬಂದರೆ ರೇವಣ್ಣನನ್ನು ಓಲೈಸಲೂ ಹಿಂದೇಟು ಹಾಕಲಾರ. ಇದರರ್ಥ ಈತ ಯಾವ ಸಿದ್ಧಾಂತಕ್ಕಾಗಲಿ, ವ್ಯಕ್ತಿಗಾಗಲಿ ಪೂರ್ಣಾವಧಿ ನಿಷ್ಠನಲ್ಲ. ಯಾವುದರಿಂದ, ಯಾರಿಂದ ಲಾಭವಾಗುತ್ತದೋ ಅದಕ್ಕಷ್ಟೆ ನಿಷ್ಠ. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ ದುಡ್ಡಿನೊಂದಿಗಷ್ಟೇ ಈತನ ಖಾಯಂ ನೆಂಟಸ್ಥನ!

ಇದೆಲ್ಲದರಿಂದಾಗಿ ಹಾಸನದಾದ್ಯಂತ ರಾಘವೇಂದ್ರನ ಸುತ್ತ ಗುಮಾನಿಗಳು ಹರಿದಾಡಹತ್ತಿವೆ. ಪಟ್ಟಣದಲ್ಲಿ ಮಟ್ಕಾ, ಅಂದರ್‌ಬಾಹರ್‌ನಂಥ ದಂಧೆಗಳು ಎಗ್ಗಿಲ್ಲದೆ ನಡೆಯುತ್ತಿವೆ. ಸರಗಳ್ಳತನವಂತೂ ಮಾಮೂಲಾಗಿ ಬಿಟ್ಟಿದೆ. ಈ ಸರಗಳ್ಳತನದ ಹಿಂದೆ ರಾಘವೇಂದ್ರನ ಕೈವಾಡವಿದೆ ಅಂತೊಂದು ಗುಮಾನಿಯೂ ದಟ್ಟವಾಗಿದೆ. ಯಾಕೆಂದರೆ ಕೆಲ ತಿಂಗಳ ಹಿಂದೆ ಹೋಟೆಲ್ ಅಪೂರ್ವದಲ್ಲಿ ಐದು ಮಂದಿ ಸರಗಳ್ಳರು ಸಿಕ್ಕಿಬಿದ್ದಿದ್ದರು. ಈ ಕಾರ್ಯಾಚರಣೆ ನಡೆಸಿದ್ದು ಸಿಐಡಿ ಇನ್ಸ್‌ಪೆಕ್ಟರ್ ಜಗದೀಶ್. ಈ ಬಗ್ಗೆ ವಿಚಾರಣೆ ನಡೆಸಿದಾಗ ಈ ಹೋಟೆಲ್‌ಗೆ ಪೊಲೀಸರು ಬಂದುಹೋಗುತ್ತಿದ್ದ ವಿಚಾರ ಬೆಳಕಿಗೆ ಬಂದಿತ್ತು. ಇದಾಗುತ್ತಲೇ ಪವಾಡಸದೃಶವಾಗಿ ಈ ಬಗೆಗಿನ ತನಿಖೆಯ ಜವಾಬ್ದಾರಿ ರಾಘವೇಂದ್ರನಿಗೆ ರವಾನೆಯಾಗಿತ್ತು. ಇದು ಗುಮಾನಿಗಳಿಗೆ ಮತ್ತಷ್ಟು ಬಲ ತಂದಿದ್ದು ಸುಳ್ಳಲ್ಲ.



ಇಂಥಾ ಹತ್ತು ಹಲವು ಅಂದಾದುಂದಿಗಳಲ್ಲೇ ಕಾಲ ತಳ್ಳುತ್ತಿರುವ ರಾಘವೇಂದ್ರ ಪೊಲೀಸ್ ಇಲಾಖೆಗೇ ಕಪ್ಪುಚುಕ್ಕೆಯಾಗಿದ್ದಾನೆ. ಇಂಥವನನ್ನು ಇದೇ ರೀತಿ ಕೊಬ್ಬಲು ಬಿಟ್ಟರೆ ಯಾವ ಜನರೂ ನೆಮ್ಮದಿಯಾಗಿರಲು ಸಾಧ್ಯವಿಲ್ಲ. ರಾಘವೇಂದ್ರನ ಪಾಪಗಳು ಇಡೀ ಇಲಾಖೆಗೇ ಕೆಟ್ಟ ಹೆಸರು ತರುವ ಮುನ್ನ ಸಂಬಂಧಿಸಿದವರು ಎಚ್ಚೆತ್ತುಕೊಳ್ಳಬೇಕಿದೆ. ■

ಗುಲ್ಬರ್ಗಾ: ಸರ್ಕಾರಕ್ಕೆ ವಿಶ್ವಾಸಮತ
ನಿರಾಶ್ರಿತರಿಗೆ ವಿಶ್ವಾಸದ್ರೋಹ




ೇಚಾರ ಹೇಳುವವರ ಮನೆಯಲ್ಲಿ ಆರು ಮಂದಿ
ುರು ಎಂಬ ಗಾದೆ ಮಾತಿಗೆ ತಕ್ಕಂತೆ ಬಿಜೆಪಿ
ತತ್ವ - ಸಿದ್ಧಾಂತಗಳ ಒಡಲೊಳಗೆ ಎಂತೆಂಥ
ಗಳು, ಮುಂಗುಸಿಗಳು, ಹಾವುಗಳು, ಬಾವುಲಿಗಳು
ಎಂಬುದು ದಿನಗಳೆದಂತೆಲ್ಲ ಜನಸಾಮಾನ್ಯನಿಗೂ
ಟ್ಟಾಗುತ್ತಿದೆ.

ಳೆದ ವರ್ಷ ಉತ್ತರ ಕರ್ನಾಟಕದಲ್ಲಿ ಸುರಿದ
ಕಾರ ಮಳೆಯಿಂದಾಗಿ ಸಾಮಾನ್ಯರ ಬದುಕು
ಮ ಮೂರಾಬಟ್ಟೆಯಾಗಿತ್ತು. ವಾಸಕ್ಕೆ ಮನೆಯಿಲ್ಲದೆ
ಶ್ರಿತರಾಗಿದ್ದರು. ದನಕರುಗಳು, ಕುರಿಗಳು
ಪಾಲಾಗಿ ಹರಿದುಹೋದವು. ಒಟ್ಟಿನಲ್ಲಿ
ಂಬುದು ಬಯಲಿನ ಗಾಳಿಗೆ ಇಟ್ಟ ದೀಪದಂತೆ
ಯ್ದಾಲೆ ಆಡುತ್ತಿತ್ತು. ಜನಸಾಮಾನ್ಯರು ಬದುಕಿಗಾಗಿ
ಪಡುತ್ತ ಜೀವ ಕೈಯ್ಯಲ್ಲಿಟ್ಟುಕೊಂಡು ದಿನ
ುತ್ತಿದ್ದರೆ, ಅತ್ತ ಯಡ್ಡಿಯ ಸರಕಾರ ಯಾವುದೇ
ಇಲ್ಲದೆ ರೆಸಾರ್ಟ್ ರಾಜಕಾರಣ ನಡೆಸಿತ್ತು. ಬೆಕ್ಕಿಗೆ
ಟವಾದರೆ ಇಲಿಗೆ ಪ್ರಾಣಸಂಕಟ ಎಂಬ ಪರಿಸ್ಥಿತಿ
ಾರಿತ್ತು.

ಾಧ್ಯಮ ಶೂರರಾದ ಚೆಡ್ಡಿಗಳು ಒಬ್ಬರಿಗಿಂತ
ಬ್ಬರು ಮಿಗಿಲೆಂಬಂತೆ ಉತ್ತರ ಕರ್ನಾಟಕದ ಜನಗಳ
ಗೆ ಸ್ಪಂದಿಸುವಂತೆ ನಟಿಸುವ ಹೇಳಿಕೆಗಳನ್ನು
ಬಿಟ್ಟರು. ಬಡವರ ಬದುಕಿಗೆ ಭಾಗ್ಯನಿಧಿಯೆ
ಕು ಎನ್ನುವಂತೆ ಬಾಯಲ್ಲಿ ನೀರೂರಿಸಿದರು.
ಸು ಜನ ನಿರಾಶ್ರಿತರಿಗೆ ಮನೆಯನ್ನು ತಮ್ಮ
ಸರಕಾರ ಕೂಡಲೆ ಕಟ್ಟಿಸುತ್ತೇವೆ ಎಂದೆಲ್ಲ ಹೇಳಿ ಅಡಿಗಲ್ಲುಗಳನ್ನು ಹಾಕಿಬಿಟ್ಟರು. ಮುಖ್ಯಮಂತ್ರಿಗಿಂತಲೂ ಒಂದು ಹೆಜ್ಜೆ ಮುಂದೆ ನಿಂತ ಕರುಣಾಕರರೆಡ್ಡಿ ಹಾಗೂ ಬಳ್ಳಾರಿಯ ರೆಡ್ಡಿ ಸಹೋದರರಂತೂ ಆಸರೆ ಮನೆಗಳನ್ನು ಸರಕಾರ ಕಟ್ಟಿಸಲಿ ಬಿಡಲಿ ತಮ್ಮ ಸ್ವಶಕ್ತಿಯಿಂದ ಅವನ್ನು ಕಟ್ಟಿಸಿಕೊಡುತ್ತೇವೆ ಎಂಬ ಪೋಜು ನೀಡಿದರು.

ಆದರೆ ಮಾತಿನ ಶೂರರಾದ ಈ ಚೆಡ್ಡಿ ಚತುರರು ವರ್ಷವೊಪ್ಪತ್ತು ಕಳೆದರೂ ಉತ್ತರ ಕರ್ನಾಟಕದ ಜನತೆಗೆ ಆಸರೆ ಮನೆಗಳನ್ನು ನೀಡುವುದಿರಲಿ, ಅವರ ಮುರಿದು ಮೂರಾಬಟ್ಟೆಯಾದ ಬದುಕಿಗೂ ಕನಿಷ್ಠ ಆಸರೆ ಆಗಲಿಲ್ಲ, ನೆರೆ ಸಂತ್ರಸ್ತರ ಜೊತೆಗೆ ರಾತ್ರೋರಾತ್ರಿ ಉಂಡು ಎದ್ದು ಹೋದ ಮುಖ್ಯಮಂತ್ರಿ ಆ ನಂತರ ಇತ್ತ ತಲೆಹಾಕಿಯೂ ಹಾಕಿಲ್ಲ.



ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ಬಂಡೋಳಿ - ಹೈದೊಡ್ಡಿ ಗ್ರಾಮ ಕೃಷ್ಣೆಯ ದಡದಲ್ಲಿರುವ ಊರು. ಬಸವಸಾಗರದಿಂದ ನೀರು ನದಿಗೆ ಹರಿಯ ಬಿಟ್ಟಾಗ ಈ ಗ್ರಾಮಗಳು ನೀರಿನಿಂದ ಆವೃತವಾಗುತ್ತವೆ. ಯಾವಾಗ ಬೇಕಾದರೂ ನೀರು ಇವರ ಗುಡಿಸಲುಗಳನ್ನು ಪ್ರವೇಶಿಸಿ ನಿದ್ರೆಯೊಳಗಿರುವಾಗಲೆ ಅವರನ್ನು ಹೊತ್ತೊಯ್ಯಬಹುದು. ಮಳೆಗಾಲ ಬಂತೆಂದರೆ ದಿನ ನಿತ್ಯವೂ ಆತಂಕದಿಂದಲೆ ಇವರೆಲ್ಲ ಮಲಗಿ ಏಳಬೇಕಾದ ದುಸ್ಥಿತಿ ಇಂದಿಗೂ ಇದೆ. ಕಳೆದ ವರ್ಷದ ನೆರೆಯಿಂದ ಉಂಟಾದ ಆತಂಕ, ತಲ್ಲಣಗಳು ಇವರ ಮುಖದ ಮೇಲೆ ಇನ್ನೂ ಹಾಗೆಯೆ ಉಳಿದಿವೆ. ಆದರೆ ಸರಕಾರ ಮಾತ್ರ ಎಂದಿನಂತೆ ತನ್ನ ರಾಕ್ಷಸಿತನ ಪ್ರದರ್ಶಿಸುತ್ತ ಮೆಲ್ಲಗೆ ಹೆಜ್ಜೆ ಇಡುತ್ತಿದೆ.

ಸರಕಾರದ ಈ ಮೆಲ್ಲಗಿನ ಹೆಜ್ಜೆಗಳಾದರೂ ದೃಢವಾಗಿದ್ದರೆ ಎಲ್ಲರೂ ಸಮಾಧಾನ ಪಡಬಹುದಾಗಿತ್ತು. ತಿಂಥಣಿಗೆ ಸಮೀಪವಾಗಿರುವ ಕೃಷ್ಣೆಯ ದಡದಲ್ಲಿರುವ ಬಂಡೋಳಿ ಗ್ರಾಮದ ಜನರ ಸ್ಥಳಾಂತರಕ್ಕೆ 14 ಎಕರೆ ಭೂಮಿಯನ್ನು ಸರಕಾರ ಖರೀದಿಸಿದೆ. ಆದರೆ ಅಲ್ಲಿ ನಿರ್ಮಿತವಾಗುತ್ತಿರುವ ಮನೆಗಳು ತೀರಾ ಕಳಪೆ ಸಾಮಗ್ರಿಗಳಿಂದ ಕೂಡಿದ್ದಾಗಿದೆ. ಸರಿಯಾಗಿ ಕ್ಯೂರಿಂಗ್ ಮಾಡದ, ಒಡೆದ ಹಾಲೋ ಬ್ಲಾಕ್‌ಗಳನ್ನು ಇಲ್ಲಿ ಉಪಯೋಗಿಸಲಾಗುತ್ತದೆ. ಸರಿಯಾದ ಪ್ರಮಾಣದಲ್ಲಿ ಸಿಮೆಂಟ್ ಹಾಕದೆ ಇರುವುದು ಹಾಗೂ ಬೇಸಮೆಂಟ್ ಮೇಲೆ 10 ಎಂ.ಎಂ. ರಾಡ್‌ಗಳನ್ನು ಬಳಸದೆ, 8 ಎಂ.ಎಂ. ರಾಡ್‌ಗಳನ್ನು ಬಳಸುತ್ತ ಕಂಟ್ರಾಕ್ಟರುಗಳು ಕಮಾಯಿ ಶುರುಹಚ್ಚಿಕೊಂಡಿದ್ದಾರೆ.

ಮೊದಲೆ ಹೇಳಿಕೇಳಿ ಈ ನೆಲ ಸವಳು ಭೂಮಿಯಾದ್ದರಿಂದ ಸರಿಯಾಗಿ ಬುನಾದಿ ಹಾಕದೆ ಮನೆಗಳನ್ನು ನಿರ್ಮಿಸ ಹೋದರೆ ಅವೆಲ್ಲ ನಿರಾಶ್ರಿತರ ಸಮಾಧಿಯಾಗುವ ಲಕ್ಷಣಗಳೆ ಗೋಚರಿಸುತ್ತಿವೆ. ಆದ್ದರಿಂದ ಇನ್ನಾದರೂ ರಾಜಕಾರಣಿಗಳು ಎಚ್ಚೆತ್ತು ಬಡವರ ಬದುಕಿಗೆ ಆಸರೆ ಆಗದೆ ಹೋದರೆ ನಿರಾಶ್ರಿತರ ಸಮಾಧಿಯ ಮೇಲೆ ತಮ್ಮ ಸೌಧಗಳನ್ನು ಕಟ್ಟಿಕೊಂಡಂತಾಗುತ್ತದೆ. ಆದರೆ ಆ ದರ್ದು ನಮ್ಮ ಇಂದಿನ ಯಡ್ಡಿ ಸರಕಾರಕ್ಕೆ ಇದೆಯೆ ಎಂಬುದು ಪತ್ರಿಕೆಯ ಪ್ರಶ್ನೆಯಾಗಿದೆ.

• ವಿಶ್ವಾರಾಧ್ಯ ಸತ್ಯಂಪೇಟೆ

ವಾರದ ಚಿತ್ರ

ಫಿಟ್ಟಿಂಗ್ ರಿಪ್ಲೈ!




ತಡವಾಗಿ ಹೊರಬಿದ್ದ ಮೃತ್ಯು ಪತ್ರ

ಕಲ್ಲಯ್ಯಜ್ಜನೇ ಪುಟ್ಟರಾಜರ ಉತ್ತರಾಧಿಕಾರಿ! ಸೋಗಲಾಡಿಗಳಿಗೆ ಮೂಗುದಾರ!




ಕೋಟ್ಯಾಂತರ ರೂಪಾಯಿ ಮಠಕ್ಕೆ ಆಸ್ತಿಗಾಗಿ ಕನಸು ಕಾಣುತ್ತಿದ್ದ ಶಿವಯೋಗಿ ಮಂದಿರದ ಅಧ್ಯಕ್ಷ ಸಂಗನಬಸವ ಸ್ವಾಮಿ ಮತ್ತು ಹುಬ್ಬಳ್ಳಿ ಮೂರುಸಾವಿರಮಠದ ಗುರುಸಿದ್ಧ ಸ್ವಾಮಿಗೆ ಸ್ವಪ್ನ ಭಂಗವಾಗಿದೆ. ಗದುಗಿನ ವೀರೇಶ್ವರ ಪುಣ್ಯಾಶ್ರಮದ ಉತ್ತರಾಧಿಕಾರಿ ಕಿತ್ತಾಟದಲ್ಲಿ ರಾಜಕೀಯ ರಗಳೆ ಎಬ್ಬಿಸಿದ್ದ ಈ ಇಬ್ಬರು ಸ್ವಾಮಿಗಳು ಈಗ ತಲೆ ಸವರಿಕೊಳ್ಳುತ್ತಿದ್ದಾರೆ. ಏಕೆಂದರೆ ಪಂಡಿತ ಪುಟ್ಟರಾಜ ಗವಾಯಿಗಳ ಮೃತ್ಯು ಪತ್ರ ತಡವಾಗಿ ಪುಣ್ಯಾಶ್ರಮದ ಅಂಗಳಕ್ಕೆ ಬಂದು ನಿಂತಿದೆ. ಪುಟ್ಟರಾಜರ ಆಶಯದಂತೆ ಅವರ ಶಿಷ್ಯ ಕಲ್ಲಯ್ಯಜ್ಜನೇ ಉತ್ತರಾಧಿಕಾರಿಯಾಗಬೇಕು ಹಾಗೂ ಆಶ್ರಮದ ಸಂಪೂರ್ಣ ಆಸ್ತಿಯನ್ನು ಅವರ ಹೆಸರಿಗೆ ಮಾಡಬೇಕು ಎಂಬ ಅಂಶ ಈಗ ಹೊರಬಿದ್ದಿದ್ದು ಅಲ್ಲಿಯ ವಿದ್ಯಾರ್ಥಿಗಳಿಗೆ ಸಿಹಿಯೂಟ ಹಾಕಿದಂತಾಗಿದೆ. ಆಸ್ತಿ ಲೂಟಿಗಾಗಿ ನಿಂತಿದ್ದವರ ಲಂಗಟ ಸಡಿಲಾಗಿದೆ.

ಆಶ್ರಮದ ಆಶಾಕಿರಣವಾಗಿದ್ದ ಪುಟ್ಟರಾಜ ಗವಾಯಿಗಳು ಲಿಂಗೈಕ್ಯರಾದ ಬಳಿಕ ಅವರ ಸ್ಥಾನಕ್ಕೆ ಯಾರನ್ನು ನೇಮಿಸಬೇಕು ಎಂಬುದು ಬಹು ದೊಡ್ಡ ಗೊಂದಲವನ್ನು ಹುಟ್ಟು ಹಾಕಿತು. ಮಠದಲ್ಲಿ ಚಿತ್ರವಿಚಿತ್ರ ನಾಟಕಗಳು ಖಾತೆ ತೆರೆದಿದ್ದವು. ಪುಟ್ಟರಾಜರು ಇರುವತನಕ ಇಲ್ಲದಿದ್ದ ರಗಳೆ ರಂಪಾಟಗಳು ಮಠದ ಅಂಗಳಕ್ಕೆ ಕಾಲಿಟ್ಟವು. ಉತ್ತರಾಧಿಕಾರಿ ಪೋಸ್ಟಿಗಾಗಿ ರಾಜಕಾರಣಿಗಳು, ಹಿರಿಯರೆನಿಸಿಕೊಂಡಿದ್ದ ದುರುಳರು ಮಸಲತ್ತು ಶುರು ಮಾಡಿದರು. ಒಂದು ಕಡೆ ಹುಬ್ಬಳ್ಳಿ ಮೂರುಸಾವಿರ ಮಠದ ಚೆಡ್ಡಿ ಸ್ವಾಮಿ ಗುರುಸಿದ್ಧ ರಾಜಯೋಗೇಂದ್ರ, ಮತ್ತೊಂದು ಕಡೆ ಶಿವಯೋಗ ಮಂದಿರದ ಸಂಗನಬಸವ ಸ್ವಾಮಿ ಮಠ ಹೊಕ್ಕು ತಮ್ಮ ಅಧಿಪತ್ಯ ಸ್ಥಾಪಿಸಲು ಹೊಂಚು ಹಾಕಿದರೆ, ಮಗದೊಂದೆಡೆ ಜಿಲ್ಲಾ ಉಸ್ತುವಾರಿ ಮಂತ್ರಿ ಶ್ರೀರಾಮುಲು ತನ್ನ ಕೇಸರಿ ಪಿಂಡಗಳನ್ನು ಮಠದಲ್ಲಿ ಸ್ಥಾಪಿಸಲು ಹವಣಿಸುತ್ತಿದ್ದ. ಅದಕ್ಕೆಲ್ಲ ಈಗ ಬ್ರೇಕ್ ಬಿದ್ದಿದೆ. ಸಾಯುವ ಮುನ್ನ 20 ಮಾರ್ಚ 2010 ರಂದು ಪುಟ್ಟರಾಜ ಗವಾಯಿಗಳು ಈ ಪೀಡೆಗಳ ಕಾಟ ತಪ್ಪಿಸಲೆಂದೇ ಮೃತ್ಯು ಪತ್ರ ಬರೆದು ಕಣ್ಣು ಮುಚ್ಚಿದ್ದಾರೆ.



ಅಸಲಿಗೆ ಪುಟ್ಟರಾಜರು ಬದುಕಿದ್ದಾಗಲೇ ಕಲ್ಲಯ್ಯಜ್ಜನವರೇ ಅವರ ಉತ್ತರಾಧಿಕಾರಿ ಎಂದು ಎಲ್ಲರಿಗೂ ಗೊತ್ತಿತ್ತು. ಪುಟ್ಟರಾಜರು ಅನಾರೋಗ್ಯ ಪೀಡಿತರಾಗಿದ್ದಾಗ ಕಲ್ಲಯ್ಯಜ್ಜನವರೇ ಪುಟ್ಟರಾಜರ ಪರವಾಗಿ ಸಭೆ ಸಮಾರಂಭಗಳಲ್ಲಿ ಭಾಗಿಯಾಗುತ್ತಿದ್ದರು. ಅಷ್ಟೇ ಅಲ್ಲ, ಅಂಧ ವಿದ್ಯಾರ್ಥಿಗಳ ಶಿಕ್ಷಣ, ಊಟೋಪಚಾರ ಸೇರಿದಂತೆ ಪುಟ್ಟರಾಜರ ಎಲ್ಲ ಕೆಲಸಗಳನ್ನು ಇವರೇ ನಿಭಾಯಿಸುತ್ತಿದ್ದರು. ಹೀಗಾಗಿ ಉತ್ತರಾಧಿಕಾರಿ ಇವರೇ ಎಂಬುದು ಸಹಜವಾಗಿಯೇ ಬಿಂಬಿತವಾಗಿತ್ತು, ಆದರೆ ಅದು ಅಧಿಕೃತವಾಗಿ ಹೊರಬಿದ್ದಿದ್ದು ಮೃತ್ಯು ಪತ್ರ ಸಿಕ್ಕಾಗಲಷ್ಟೇ.



ಗವಾಯಿಗಳ ಮೃತ್ಯು ಪತ್ರ

ಮೃತ್ಯು ಪತ್ರದಲ್ಲೇನಿದೆ?

ಆರಂಭದಲ್ಲಿ ತಾವು ಮಾಡಿದ ಕೆಲಸಗಳನ್ನು ವಿವರಿಸಿರುವ ಪುಟ್ಟರಾಜರು, ನಂತರ ಕಲ್ಲಯ್ಯಜ್ಜರಿಗೆ ಆಶ್ರಮದ ಉತ್ತರಾಧಿಕಾರವನ್ನು ನೀಡುವ ಕುರಿತು ಬರೆದಿದ್ದಾರೆ. ಹಾಗೆಯೇ ಅದೇ ಪತ್ರದಲ್ಲಿ ಕಲ್ಲಯ್ಯಜ್ಜರನ್ನು ಉದ್ದೇಶಿಸಿ,

"ನಿಮ್ಮ ಅಧೀನದಲ್ಲಿ ವೀರೇಶ್ವರ ಪುಣ್ಯಾಶ್ರಮ ಸರ್ವಾಂಗೀಣ ಅಭಿವೃದ್ಧಿ ಹೊಂದುತ್ತದೆ ಎಂಬ ವಿಶ್ವಾಸವಿದೆ. ನಮ್ಮ ಮರಣದ ನಂತರ ಈ ಆಶ್ರಮಕ್ಕೆ ನೀವೇ ಪೀಠಾಧಿಪತಿಗಳಾಗಬೇಕು ಹಾಗೂ ಪಂಡಿತ ಪಂಚಾಕ್ಷರಿ ಗವಾಯಿಗಳವರ ಮತ್ತು ನಮ್ಮ ಗದ್ದುಗೆಯ ವಾರಸುದಾರರಾಗಬೇಕು. ಡಾ|| ಪುಟ್ಟರಾಜ ಕವಿ ಗವಾಯಿಗಳವರ ಅಂಧರ ಶಿಕ್ಷಣ ಸಮಿತಿಯ ಆಜೀವ ಅಧ್ಯಕ್ಷರಾಗಬೇಕು. ಎಲ್ಲ ಚರ ಹಾಗೂ ಸ್ಥಿರ ಆಸ್ತಿಗಳಿಗೆ ಮಾಲೀಕರಾಗಬೇಕು ಎಂಬುದು ನಮ್ಮ ಇಚ್ಛೆ" ಎಂದು ಹೇಳಿದ್ದಾರೆ.

ಅಲ್ಲದೆ ಈಗಿನ ಆಡಳಿತ ಅಧಿಕಾರಿ ಬಸವರಾಜ ಹಿಡ್ಕಿಮಠರು ಶಕ್ತಿ ಇರುವವರೆಗೆ ವೀರೇಶ್ವರ ಪುಣ್ಯಾಶ್ರಮದ ವ್ಯವಸ್ಥಾಪಕ ಹಾಗೂ ಶಿಕ್ಷಣ ಸಂಸ್ಥೆಗಳ ಸಹಕಾರ್ಯದರ್ಶಿಯಾಗಿ ಮುಂದುವರೆಯಬೇಕು, ಜೊತೆಗೆ ಇವರ ಸಂಬಂಧಿಕರನ್ನು ಆಶ್ರಮದ ಹಾಗೂ ಶಿಕ್ಷಣ ಸಮಿತಿಯ ಯಾವುದೇ ಹುದ್ದೆಗಳಿಗೆ ನೇಮಿಸಿಕೊಳ್ಳಬಾರದು ಎಂಬ ಮಹತ್ವದ ಅಂಶವೊಂದನ್ನೂ ಮೃತ್ಯು ಪತ್ರದಲ್ಲಿ ಸ್ಪಷ್ಟವಾಗಿ ನ್ಯಾಯವಾದಿ ಎಂ.ಆರ್. ಹಿರೇಮಠ ಎಂಬುವವರಿಂದ ಬರೆಯಿಸಿ ಜೊತೆಗೆ ಸಾಕ್ಷಿದಾರರ ಸಮಕ್ಷಮದಲ್ಲಿ ಪುಟ್ಟರಾಜರು ತಮ್ಮ ಎಡಗೈ ಹೆಬ್ಬೆಟ್ಟಿನ ಗುರುತು ಹಾಕಿದ್ದಾರೆ.



ಮೃತ್ಯು ಪತ್ರದ ಎಲ್ಲ ಅಂಶಗಳನ್ನು ಗಮನಿಸಿದರೆ ಕಲ್ಲಯ್ಯಜ್ಜನವರನ್ನೇ ಉತ್ತರಾಧಿಕಾರಿಯಾಗಿ ಹಾಗು ಆಸ್ತಿಗೆ ಹಕ್ಕುದಾರರನ್ನಾಗಿ ನೇಮಿಸಬೇಕೆನ್ನುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಆದರೂ ಈ ಕುರಿತಂತೆ ಅಕ್ಟೋಬರ್ 20 ರಂದು ಕರೆಯಲಾಗಿರುವ ಸಭೆಯಲ್ಲಿ ಅದ್ಯಾವ ನಿರ್ಣಯ ಹೊರಬೀಳುತ್ತೊ ಎಂಬುದು ಪುಟ್ಟರಾಜರ ಆತ್ಮಕ್ಕೂ ಗೊತ್ತಿಲ್ಲವೇನೋ? ಒಟ್ಟಿನಲ್ಲಿ ಸರ್ವ ಧರ್ಮದ ಸಾಮರಸ್ಯದ ಸಾಕಾರಮೂರ್ತಿಯಾಗಿದ್ದ ಪುಟ್ಟರಾಜ ಗವಾಯಿಗಳು ತೀರಿದ ಬಳಿಕ ಮಠದಲ್ಲಿ ಅವರ ಉತ್ತರಾಧಿಕಾರಿಯ ಕುರಿತಾಗಿ ಕೀಳುಮಟ್ಟದ ಚೌಕಾಶಿ ರಾಜಕಾರಣ ಗರಿಗೆದರಿದ್ದು ದೊಡ್ಡ ದುರಂತವೇ ಸರಿ. ಶಿವಯೋಗ ಮಂದಿರದ ಪುರೋಹಿತ ಲಿಂಗವಂತರ ದಂಡು ಮಠದಂಗಳ ಆಕ್ರಮಿಸುವ ಮುನ್ನ ಮೃತ್ಯು ಪತ್ರದ ಮೂಲಕ ಪುಟ್ಟರಾಜರು ಮಠವನ್ನು ಪಾರು ಮಾಡಿದ್ದಾರೆ ಅನ್ನಬಹುದು ಅಷ್ಟೆ.

ಆದರೂ, 20 ರಂದು ನಡೆಯುವ ಸಭೆಯಲ್ಲಿ ಇನ್ನಾವ ರಾಜಕಾರಣ, ತಂತ್ರಗಳು ಹುಟ್ಟಿಕೊಳ್ಳುತ್ತವೋ? ಹಾಗಾಗದಂತೆ ಮಾಡುವುದು ಜಾತ್ಯತೀತರ ಕೆಲಸವಾಗಬೇಕು. ಗವಾಯಿಗಳ ಆಶ್ರಮ ಎಂದಿಗೂ ಜಾತ್ಯತೀತ ಪರಂಪರೆಯನ್ನು ಎತ್ತಿ ಹಿಡಿಯಬೇಕು.

• ಹುರುಳಿಕುಪ್ಪಿ ವಿನಯ
vinaylankesh@gmail.com



ವರ್ತೂರಿನ ಟಗರು ಒಳ್ಳೆ ಬೆಲೆಗೆ ಬಿಕರಿ ಆಯ್ತಂತಲ್ಲಾ!

ತನ್ನ ಕಡೇಗಾಲ ಸಮೀಪಿಸಿತೆಂದು ಖಚಿತವಾಗಿ ತಿಳಿದುಕೊಂಡಿದ್ದ ಯಡೂರಪ್ಪ ಹತ್ತು ವರ್ಷದಿಂದ ಹಳೇ ತಕರಾರಿನ ಸಲುವಾಗಿ ಮುಲುಕಿ ಬಿದ್ದಿದ್ದ ಫೈಲುಗಳನ್ನೆಲ್ಲ ತರಿಸಿಕೊಂಡು ಹಗಲುರಾತ್ರಿ ಸಹಿ ಜಡಿದರಂತಲ್ಲ, ಇದನ್ನು ಕಿವಿಯಾರೆ ಕೇಳಿದ ಪೇಜಾವರ ಎಂಬ ತರಡಿಲ್ಲದ ನರಿ, ತನ್ನ ಕೃಷ್ಣ ದೇವಸ್ಥಾನದ ತಕರಾರಿನ ಫೈಲನ್ನೂ ಕಳಿಸಿ ಮಠಕ್ಕೆ ಬರೆಸಿಕೊಂಡು "ಇನ್ನು ಸರ್ಕಾರಕ್ಕೂ ನನಗೂ ಸಂಬಂಧವಿಲ್ಲ, ಇನ್ನು ನನ್ನ ಹೋರಾಟವೇನಿದ್ದರೂ ಅಯೋಧ್ಯೆಗೆ ಮೀಸಲು" ಎಂದು ಬಿಟ್ಟರಂತಲ್ಲಾ, ಆಗ ಬಟ್ಟಕೂಳಿನ ಮಠದ ಭಕ್ತನೊಬ್ಬ "ಸ್ವಾಮಿ, ಮಾದಿಗರ ಕೇರಿಯ ಪ್ರೋಗ್ರಾಂ ಏನಾಯಿತು?" ಎಂದು ಕೇಳಲಾಗಿ "ಮಾದಿಗರು ಮತಾಂತರವಾಗದೇ ಮಾದಿಗರಾಗಿಯೇ ಇರುವಂತೆ ದೀಕ್ಷೆ ಕೊಟ್ಟಿದ್ದೇನೆ. ಆದ್ದರಿಂದ ಅವರಲ್ಲೇ ಇರುತ್ತಾರೆ. ನಾವಿಲ್ಲೇ ಇರಬಹುದು" ಎಂದು ಜನಿವಾರವನ್ನೇ ಬೆಲ್ಟಿನಂತೆ ಬಳಸಿ ಬೆನ್ನು ತುರಿಸಿಕೊಂಡರಂತಲ್ಲಾ, ಥೂತ್ತೇರಿ!

* * * * * * * *

ಎಡೂರಪ್ಪ ಬಹುಮತ ಕಳೆದುಕೊಂಡಿದ್ದಾರೆ ಎಂಬ ಸುದ್ದಿ ಬಂದಕೂಡಲೇ ಸುವರ್ಣ ಚಾನೆಲ್‌ನ ಮಿಷ್ಕರ್ ಗರಗಸನ ಮುಖ ಮುದಿ ಹೋತನ ಮುಖದಂತಾಗಿ ಹೋಯ್ತಂತಲ್ಲಾ, ಈ ಸಮಯದಲ್ಲಿ ತಮ್ಮ ಬಂಧು ಬಾಂಧವರು ನಡೆಸುತ್ತಿದ್ದ ಸರ್ಕಾರದ ಋಣ ಹೇಗೆ ತೀರಿಸಲಿ ಎಂದು ಯೋಚಿಸಿದ ಗರಗಸ ತಾನು ಕುಳಿತ ಜಾಗಕ್ಕೆ ಕಿತ್ತು ಹೋದ ರಾಜಕಾರಣಿಗಳನ್ನು ಕರೆಸಿಕೊಂಡು, ರೇಣುಕಾಚಾರಿಯಿಂದ ಹಿಡಿದು ರಾಜ್ಯಪಾಲರವರೆಗೂ ತನಗಾಗದವರನ್ನೆಲ್ಲ ಹೀಯಾಳಿಸಲು ಹೆಣಗಿದನಂತಲ್ಲಾ, ಆಗ ಹಠಾತ್ತನೆ ರೇಣುಕಾಚಾರಿ. ಕರ್ಣನ ರಥದಿಂದ ಇಳಿದ ಶಲ್ಯನಂತೆ ಬಂಡಾಯ ಶಾಸಕರ ಗಾಡಿಯಿಂದ ಇಳಿದದ್ದೂ ಅಲ್ಲದೇ, ಸರಿಯಾಗಿ ಗೂಸಾತಿಂದು ಎಡಿಯೂರಪ್ಪನ ಪಾದ ಹುಡುಕಿಕೊಂಡು ಬರುವಾಗ ಸದರಿ ಗರಗಸನಿಗೆ ಶಾನೆ ಕನಿಕರವಾಯ್ತಂತಲ್ಲಾ. ಅದಕ್ಕಿಂತಲೂ ವರ್ತೂರು ಕಡೆಯ ಕೊಂಬಿನ ಟಗರೊಂದು ದೇವೇಗೌಡರ ಕುರಿಕೊಟ್ಟಿಗೆಯಿಂದ ನುಗ್ಗಿ ಬಂದು ಜನಾರ್ದನ ರೆಡ್ಡಿಯ ದೊಡ್ಡಿ ಸೇರಿಕೊಂಡಿದ್ದು ಗರಗಸನ ಸಮೇತ ಆತನ ಪರಿವಾರಕ್ಕೆ ಸಂತಸ ತಂದಿತೆಂಬುದು ಮುಖ ನೋಡಿದರೇ ಗೊತ್ತಾಗುತ್ತಿತ್ತಲ್ಲಾ, ಥೂತ್ತೇರಿ!!

* * * * * * * *

ಸದರಿ ವರ್ತೂರಿನ ಟಗರಿಗೆ ಸಿಕ್ಕಸಿಕ್ಕಲ್ಲಿ ಗುದ್ದಿ ತಲೆಯೇ ಕೆಟ್ಟುಹೋಗಿದೆ ಎಂಬುದು ಕ್ಷೇತ್ರದ ಜನರಿಗೆ ಕ್ರಮೇಣ ಅರಿವಾಗಿ ಅವರೂ ಕೈಬಿಟ್ಟರಂತಲ್ಲಾ, ಆರಂಭದಲ್ಲಿ ಗತಿಗೆಟ್ಟ ಸರ್ಕಾರವನ್ನು ಗಟ್ಟಿಮಾಡಲು ಆಧಾರಸ್ತಂಭವಾಗಿದ್ದ ವರ್ತೂರನನ್ನು ಸೂಕ್ಷ್ಮವಾಗಿ ಗಮನಿಸಿದ ಚೆಡ್ಡಿಗಳು "ಈ ವರ್ತೂರಿನ ಕೊಂಬು ಭಜರಂಗದ ಮುಂಚೂಣಿಯಲ್ಲಿರಲು ಯೋಗ್ಯವೇ ಹೊರತು ಈ ಸರ್ಕಾರದ ಒಳಚರಂಡಿ ಕ್ಲೀನ್ ಮಾಡುವ ಯಾವ ಯೋಗ್ಯತೆಯೂ ಇಲ್ಲ" ಎಂದು ದೂರಿತ್ತರಂತಲ್ಲಾ, ಈ ದೂರಿಗೆ ಅಂದಿನ ಅಧ್ಯಕ್ಷರಾಗಿದ್ದ ಸದಾನಂದ "ನಮ್ಮ ಪರಿಸ್ಥಿತಿ ಬಹಳ ಸೂಕ್ಷ್ಮವಾಗಿರುವುದರಿಂದ ವರ್ತೂರಿನಂತವರನ್ನ ಸಹಿಸಿಕೊಳ್ಳಲೇಬೇಕು" ಎಂದು ಬಿಟ್ಟರಂತಲ್ಲಾ, ಕೂಡಲೇ ಸಿಟ್ಟಾದ ವರ್ತೂರು ಬಾಯಿಗೆ ಬಂದ ಸಂಸ್ಕೃತ ಪದವನ್ನೆಲ್ಲಾ ಉಪಯೋಗಿಸಿ ಅಲ್ಲಿಂದ ಓಡಿ ದೇವೇಗೌಡರ ಕೊಟ್ಟಿಗೆಗೆ ಬಂದು ಸೇರಿದನಂತಲ್ಲಾ. ಗೌಡರು ಹಿಂಡಿ, ಹುರುಳಿ ಕೊಟ್ಟು ತಲೆಸವರಿ ಕಡೂರಿಗೆ ತಂದು ಸಿದ್ದರಾಮಯ್ಯನನ್ನ ಗುದ್ದಲು ಹೇಳಿದರಂತಲ್ಲಾ. ಅಷ್ಟು ಹೇಳಿದ ಕೂಡಲೇ ಸಿದ್ದರಾಮಯ್ಯನನ್ನು ಹಿಗ್ಗಾಮುಗ್ಗಾ ಗುದ್ದಿ ಗೌಡರ ಮೆಚ್ಚುಗೆ ಗಳಿಸಿ, ಭವಿಷ್ಯದಲ್ಲೊಂದು ಪ್ರಬಲ ಅಸ್ತ್ರವಾಗಿ ಬೆಳೆಯುತ್ತಿರುವಾಗಲೇ ರೆಡ್ಡಿ ಬಂದು ವರ್ತೂರಿನ ಟಗರನ್ನು ಕಟುಕನಂತೆ ಕೇಳಿದಷ್ಟು ಬೆಲೆಗೆ ಕೊಂಡು ಹಿಡಿದುಕೊಂಡು ಹೋದನಂತಲ್ಲಾ, ಥೂತ್ತೇರಿ!!

* * * * * * * *


ಹಿಂದೊಮ್ಮೆ ಐವತ್ತು ಶಾಸಕರನ್ನು ಕರೆದುಕೊಂಡು ಹೋಗಿ, ಆಂಧ್ರದ ರೆಸಾರ್ಟಿನಲ್ಲಿ ಇಳಿಸಿಕೊಂಡು, ಎಡೂರಪ್ಪನ ಬಾಲ ಮುರಿದು, ಕೆಚ್ಚಲಿಗೆ ಕೈಹಾಕಿ, ಬೇಕಾದಷ್ಟು ಹಿಂಡಿಕೊಂಡು ಸಂತೃಪ್ತನಾದ ರೆಡ್ಡಿ ಈಗ ಎಡೂರಪ್ಪ ಕಷ್ಟದಲ್ಲಿರುವಾಗ ಕೇವಲ ಒಬ್ಬನನ್ನು ಮಾತ್ರ ಖರೀದಿಸಿ ತಂದಿರುವುದು ಬಿಜೆಪಿ ಹೈದರಿಗೆ ಶಾನೆ ಬೇಜಾರು ತಂದಿತಂತಲ್ಲಾ, "ಈ ಎಡೂರಪ್ಪನನ್ನ ಅಲ್ಪ ಬಹುಮತದ ತುದಿಗಾಲ ಮೇಲೆ ನಿಲ್ಲಿಸಲೆಂದೇ ರೆಡ್ಡಿ ಈ ತರಹ ಮಾಡಿದ್ದಾನೆ. ಆತನ ಬಳಿಯಿರುವ ಹಣದ ಕಣಜ ನೋಡಿದರೆ, ಕನಿಷ್ಠ ಹತ್ತು ಜನರನ್ನಾದರೂ ಕೊಳ್ಳಬಹುದಿತ್ತು" ಎಂದು ಮಾತಾಡಿಕೊಂಡರಂತಲ್ಲಾ, ಇದನ್ನ ಕೇಳಿಸಿಕೊಂಡ ರೆಡ್ಡಿ "ವರ್ತೂರು ಕೇಳಿದಷ್ಟು ಹಣ ಕೊಟ್ಟು ಖರೀದಿ ಮಾಡುವುದರಲ್ಲೇ ನನ್ನ ಹಣ ಮುಗಿದುಹೋಯ್ತು, ಮೊದಲೇ ಆಗಿದ್ದರೆ ಈ ದುಡ್ಡಿಗೆ ಮೂರು ಜನ ಸಿಗುತ್ತಿದ್ದರು" ಎಂದನಂತಲ್ಲಾ, ಥೂತ್ತೇರಿ!!

* * * * * * * *

ಯಡ್ಡಿ ಸರ್ಕಾರವನ್ನು ಕೆಡಹುವ ತರಾತುರಿಗೆ ಕಾಂಗ್ರೆಸ್ಸಿಗರು ಸ್ಪಂದಿಸಿದ್ದನ್ನು ನೋಡಿದ ಕೇಂದ್ರದ ಕಾಂಗ್ರೆಗಳು ದಂಗುಬಡಿದು ಹೋದವಂತಲ್ಲಾ, ಯಡ್ಡಿ ಸರ್ಕಾರ ಬಿದ್ದರೆ, ಸಿದ್ದು ಸರ್ಕಾರ ರಚನೆಯಾಗಬೇಕು. ಅದು ಅಷ್ಟು ಸುಲಭವಲ್ಲ, ಪದ್ಮನಾಭನಗರದ ದೃತರಾಷ್ಟ್ರರು ಕನಿಷ್ಠ ಐದು ಸುತ್ತಿನ ಮಾತುಕತೆ ನಡೆಸುತ್ತಾರೆ. ಅದರ ಮೊದಲ ಭಾಗವೆಂದರೆ ಬುದ್ಧಿಮಾಂದ್ಯನಂತೆ ಕಾಣುವ ರೇವಣ್ಣ ಉಪಮುಖ್ಯಮಂತ್ರಿ. ಎರಡನೇ ಸುತ್ತಿನ ಮಾತುಕತೆಗೆ ಲೋಕೋಪಯೋಗಿ ಮತ್ತು ಇಂಧನ ಖಾತೆ ಬೇಡಿಕೆ. ಮೂರನೇ ಸುತ್ತಿಗೆ ಗೃಹಖಾತೆ ತಮ್ಮವರಿಗೆ ಆಗಬೇಕು. ನಾಲ್ಕನೇ ಸುತ್ತಿಗೆ ಕಾಮನ್ ಮಿನಿಮಮ್ ಪ್ರೋಗ್ರಾಂನ ಪಟ್ಟಿ. ಅದರಲ್ಲಿ ಖೇಣಿಯನ್ನು ನೈಸ್ ರಸ್ತೆಗೆ ಹಾಕಿ ಉಜ್ಜಬೇಕು; ಅಕ್ರಮಗಣಿಗಾರಿಕೆ ದಂಧೆಯ ತನಿಖೆಗೆ ಸಿಬಿಐ ಕೋರಬೇಕು. ಐದನೇ ಸುತ್ತು ಹಾಗೇ ಪೆಂಡಿಂಗ್ ಇದ್ದು ಮತ್ತು ಬೇಕಾದುದನ್ನ ಕೇಳಿ ಅನುಕೂಲವಾಗಬೇಕು. ಹೀಗೆ ಗೌಡರು ಮುಂದಾಡಬಹುದಾದ ನಾಟಕವನ್ನು ನೆನೆಸಿಕೊಂಡ ಕೇಂದ್ರದ ಕಾಂಗ್ರೆಗಳು ತೆಪ್ಪಗಾದವಂತಲ್ಲಾ, ಥೂತ್ತೇರಿ!!

* * * * * * * *

ಇದೆಲ್ಲದಕ್ಕಿಂತ ಮುಖ್ಯವಾಗಿ ಸಿದ್ದರಾಮಯ್ಯನೇ ಮುಖ್ಯಮಂತ್ರಿಯಾಗಲು ಜನಾದೇಶವಿಲ್ಲ, ಜನಾದೇಶವಿಲ್ಲದಾಗ ಯಾರಾದರೂ ಮುಖ್ಯಮಂತ್ರಿಗಳಾಗಬಹುದು ಎಂದು ದೇಶಪಾಂಡೆ, ಮುನಿಯಪ್ಪ ಮೊಯ್ಲಿ ಕಡೆಯವರು ಹೊಸರಾಗ ಆಡತೊಡಗಿದರಂತಲ್ಲಾ, ಅದಕ್ಕಿಂತಲೂ ಮುಖ್ಯವಾಗಿ ಚೆಡ್ಡಿಗಳ ಸರ್ಕಾರ ತಂದು ಮಡಗಿದವರು ಅಪ್ಪಮಕ್ಕಳು. ಈಗ ಅವರೇ ಅದನ್ನು ಕೆಡವಿ ಬಿಸಾಡಿದ ಮೇಲೆ ಸರ್ಕಾರದ ಮೇಲಿನ ಹಕ್ಕು ಅವರದಾಗುತ್ತದೆ. ಆಗ ಕಾಂಗ್ರೆಸ್ಸಿಗರು ಮತ್ತೆ ಕರೆಯದೇ ಬಂದ ನೆಂಟರಂತಾಗುತ್ತಾರೆ. ಇದೆಲ್ಲಕ್ಕಿಂತ ಮುಖ್ಯವಾಗಿ ಕುಮಾರಸ್ವಾಮಿ ಕರೆತಂದಿರುವುದು ಅತೃಪ್ತರ ಪೈಕಿ ಸುಮಾರು ಜನ ಕಿವಿ ಕಿತ್ತ ಮೂಗು ಹರುಕರು. ಸಂಪಂಗಿಯಂತೂ ಬಹಿರಂಗವಾಗಿಯೇ ಬಾಯಿತೆರೆದು ಲೋಕಾಯುಕ್ತರಿಂದ ಬಾಯಿಮೇಲೆ ಬರೆಹಾಕಿಸಿಕೊಂಡವನು. ಇಂತವರನ್ನೆಲ್ಲಾ ಸೇರಿಸಿಕೊಂಡು ಸರ್ಕಾರ ರಚಿಸಿ ಸೈ ಎನ್ನಿಸಿಕೊಳ್ಳಲು ಸಾಧ್ಯವಿಲ್ಲ, ಇಷ್ಟೋ ಅಷ್ಟೊ ಇನ್ನೂ ಮರ್ಯಾದೆ ಇಟ್ಟುಕೊಂಡ ಸಿದ್ದರಾಮಯ್ಯ ಜೂನಿಯರ್ ಎಡೂರಪ್ಪನಂತಾಗಬೇಕಾಗುತ್ತದಂತಲ್ಲಾ, ಥೂತ್ತೇರಿ!



ಮಂಡ್ಯ: ರೌಡಿಗಳ ಜೈಲು ಸ್ಕೆಚ್‌ಗಳಿಗೆ ಆಪರೇಷನ್?

ಜೈಲೇ ರೌಡಿ ಲೋಕದ ಹೆಡ್‌ಕ್ವಾರ್ಟರ್ಸ್ ಆಗುತ್ತಿದೆ ಎಂಬುದು ಸ್ಪಷ್ಟವಾಗಿದೆ. ಈ ಹಿನ್ನೆಲೆಯಲ್ಲಿ ಮಂಡ್ಯ ಪೊಲೀಸರು, ಹೆಡ್‌ಕ್ವಾರ್ಟರ್ಸ್‌ನ ಮೂವರು ಬಾಸ್‌ಗಳ ಕಾಲಾಳುಗಳಾಗಿ ಫೀಲ್ಡಿನಲ್ಲಿರುವ ಹುಡುಗರ ಹಿಂದೆ ಬಿದ್ದಿದ್ದಾರೆ. ಅದರ ಫಲವಾಗಿಯೇ ಈಗ 10 ಜನರನ್ನು ಬಂಧಿಸಲಾಗಿದೆ. ಸ್ವತಃ ಐಜಿಪಿ ಎ.ಎಸ್.ಎನ್.ಮೂರ್ತಿಯವರೇ ಬಂದು ಪತ್ರಿಕಾಗೋಷ್ಠಿಯನ್ನು ನಡೆಸಿ, ಇವರ ಬಂಧನವನ್ನು ಘೋಷಿಸಿದರು. ಅದೇ ರೀತಿ ಪ್ರಗತಿಪರ ಚಳವಳಿಯಲ್ಲಿ, ಬಡವರ ಹಕ್ಕಿನ ಹೋರಾಟದಲ್ಲಿ ಭಾಗವಹಿಸಿದವರನ್ನೂ ರೌಡಿ ಪಟ್ಟಿಗೆ ಸೇರಿಸಿರುವ 'ಖ್ಯಾತಿ'ಯಿರುವ ಮಂಡ್ಯ ಪೊಲೀಸರು ಅಂತಹ ತಪ್ಪುಗಳು ಮತ್ತೆ ಪುನರಾವರ್ತನೆಯಾಗದಂತೆ ನೋಡಿಕೊಳ್ಳಬೇಕಿದೆ.

ಮಂಡ್ಯದ ಭೂಗತಲೋಕದಲ್ಲಿ ಎಷ್ಟು ತಲೆಗಳು ...ದರೂ ಭೂಗತ ಚಟುವಟಿಕೆಗಳು ಮಾತ್ರ ...ಾಗಿಲ್ಲ. ಕೊನೆಯಾಗುವ ಲಕ್ಷಣಗಳೂ ಕಾಣಿಸುತ್ತಿಲ್ಲ. ...ರುವ ನಟೋರಿಯಸ್ ರೌಡಿಗಳಲ್ಲಿ ಬಹುಪಾಲು ...ನ್ನ ಜೈಲುಪಾಲು ಮಾಡಿದ್ದೇವೆಂದು ಪೊಲೀಸರು ...ಳ್ಳಲು ಆಸ್ಪದವಿಲ್ಲದಂತೆ ಜೈಲು ...ೇ ಸ್ಕೆಚ್‌ಗಳು ತಯಾರಾಗಿ ಪರಸ್ಪರ ...ವಿ ರೌಡಿ ಗುಂಪುಗಳು ನೆಲಕ್ಕುರುಳು...ದಂತೂ ಸತ್ಯ. ಜೊತೆಗೇ ಜೈಲಿನಲ್ಲಿ ರೌಡಿಗಳ ರೋಲ್‌ಕಾಲ್ ಕಮಾಯಿ ...ಲಿತಿಲ್ಲ. ಇದು ಮಂಡ್ಯದ ಪೊಲೀಸ ...ಅಮಾಯಕರಿಗೂ ತಲೆನೋವಾಗಿತ್ತು. ...ಂತಹ ಜೈಲು ಸ್ಕೆಚ್‌ಗಳಿಗೆ ಬ್ರೇಕ್ ...ಂತಹ ಆಪರೇಷನ್ ಶುರುವಾಗಿದೆ!



ಜಡೇಜಾ ರವಿ

ರೌಡಿಗಳ ಸಂತೆ

...ದ್ದಹಳ್ಳಿಯಂತಿರುವ ಮಂಡ್ಯದ ...ಲೋಕ ಎರಡು ದಶಕಗಳ ಕರಾಳ ...ಸವನ್ನು ಹೊಂದಿದೆ. ಬೆಂಗಳೂರಿ...ವ್ಯಾಪ್ತಿ ಇಲ್ಲದಿದ್ದರೂ, ದಿನಕಳೆದಂತೆ ...ುತ್ತಲೇ ಇದೆ ಮತ್ತು ಪ್ರತೀ ...ಯೂ ಹೊಸಹೊಸ ಮುಖಗಳೇ ...ತ್ತಿವೆ. ಹಾಗೆಯೇ ಹಳೆಯ ರೌಡಿಗಳ ಉರುಳುತ್ತಲೇ ಇವೆ.


ಚೇರನಹಳ್ಳಿ

...ಪ್ರ, ಅಣ್ಣಯ್ಯ, ಎಸ್.ಕೆ.ರಾಮಣ್ಣ, ...ಹಳ್ಳಿ ಶಂಕ್ರ, ಶಿವರಾಮ, ಜಡೇಜಾ ...ಧಿಯಾಗಿ ಹಳೆಯ ಪಾತಕಿಗಳ ...ಗಳೇ ಮಂಡ್ಯದ ಭೂಗತ ಚಟು...ವನ್ನು ಎಗ್ಗಿಲ್ಲದೆ ಮುನ್ನಡೆಸುತ್ತಿರು... ಆದರೆ ಜಡೇಜಾ ರವಿ ತನ್ನ ...ಲೋಕದ ಗೆಳೆಯನಾಗಿದ್ದ ಚೇರ್ನಳ್ಳಿ ...ನ್ನ ಮುಗಿಸಿದ ಮೇಲೆ ಜಡೇಜಾನ ... ವಿಪರೀತವಾಗಿತ್ತು. ಜಡೇಜಾ ...ಲ್ಲಿದ್ದುಕೊಂಡೇ ಚೇರ್ನಳ್ಳಿ ಶಂಕ್ರನ ...ದರ ಶಿವರಾಮನನ್ನು ದತ್ತನಂತಹ ... ಮೂಲಕ ಮುಗಿಸಿದ ಮೇಲೆ ...ದ್ದೇ ಹವಾ ಶುರುವಾಯಿತು.


ನಾಗಣ್ಣ

...ಯ ಹೊಸ ಪೀಳಿಗೆಗೆ ಆಕರ್ಷಣೆ ... ಕಂಡಿತು ಮತ್ತು ಸಿನಿಮಾಗಳಲ್ಲಿ ...ತ್ತಿದ್ದ ತಲೆಕಡಿಯುವ ಆಟಗಳು ...ಲ್ಲೇ ನಡೆಯುತ್ತಿದ್ದರಿಂದ ಇದು ...ಯುವಕರಿಗೆ ಆಕರ್ಷಣೆಯಾಗಿ ...ಟ್ರೆಂಡ್‌ನಂತೆಯೇ ಶುರುವಾಯಿತು. ... ಪೊಲೀಸರು ಸಹ ರೌಡಿಗಳ ...ದಂತೆ ಕೆಲಸ ಮಾಡಿದ್ದರಿಂದಲೂ ...ಳಿಗೆ ಅಡೆತಡೆಗಳು ಇಲ್ಲವಾದವು. ... ಸ್ವತಃ ಪೊಲೀಸ್ ಅಧಿಕಾರಿಗಳೇ ...ಕ್ಕುತ್ತಾರೆ. ಆದರೆ ಪ್ರತೀ ಏರಿಯಾ ...ಅಲ್ಲದೆ, ಹಳ್ಳಿಗಳಿಂದಲೂ ಹುಡು...ಲ್ಡಿಗೆ ಬರತೊಡಗಿದ್ದಾರೆ. ಇಂತಹ ...ರ್ಷಣೆಯಿಂದಲೇ ಪಾತಕಿ ಚೇತನ್ ...ನ್ನ ಎತ್ತುವಳಿ ಮಾಡಲುಹೋಗಿ ...ುಗಳು ಬಂಧನಕ್ಕೊಳಗಾಗಿದ್ದಾರೆ. ...ರ ರೌಡಿ ಲೀಸ್ಟ್‌ನಲ್ಲಿ ಫೋಟೋ ...ಂಡು ಜೈಲು ಸೇರಿದ್ದಾರೆ.



...ಟ್ರೆಂಡ್ ಏನು? ಇದನ್ನು ಮೂಲ ...ಕಿತ್ತು ಹಾಕುವುದು ಹೇಗೆ ಎಂಬುದರ ... ಪೊಲೀಸರೂ ಇನ್ನೂ ಆಳಕ್ಕೆ ... ಹೊರತು, ರೌಡಿಗಳ ಸಂತೆಯಲ್ಲಿ ...ಗರಬರಾಜು ಮುಂದುವರೆಯುತ್ತಲೇ


ಮಹೇಶ್

ಜೈಲು ಸ್ಕೆಚ್‌ಗಳು

...ಲು ವ್ಯವಸ್ಥೆಯ ಒಳಗೇ ಇರುವ ಸಮಸ್ಯೆಗಳಿಂದ ...ಲೆಂಬವು ರೌಡಿಗಳಿಗೆ ಅತ್ತೆಮನೆಗಳಂತಾಗಿವೆ. ಹಣ ...ಜೈಲುಗಳಲ್ಲಿ ಏನು ಬೇಕಾದರೂ ಸಿಗುವಂತಾಗಿರು...ವ ಈ ಪಾತಕಿಗಳ ಪಾಲಿಗೆ ಪರಮಾಪ್ತವಾಗಿದೆ.

ಜೈಲರ್‌ಗಳು ಕಡುಭ್ರಷ್ಟರಾಗಿರುವುದು ಹೊಸ ವಿಚಾರವೇನಲ್ಲ. ಇದರಿಂದಾಗಿ ಹಣ ಕೊಟ್ಟರೆ ಮೊಬೈಲುಗಳು, ಗಾಂಜಾ, ಡ್ರಗ್ಸ್‌ಗಳು ಸೇರಿದಂತೆ ಬೇಕಾದ್ದನ್ನು ಜೈಲು ಅಧಿಕಾರಿಗಳೇ ಪಾರ್ಸಲ್ ತಂದುಕೊಡುವಷ್ಟರಮಟ್ಟಿಗೆ ಕೆಟ್ಟು ಕೆರ ಹಿಡಿದಿದ್ದಾರೆ. ಪಾತಕಿಗಳಿಗೆ ಜೈಲುಗಳೇ ಸೇಫ್ ಅಂತೆ! ಯಾಕೆಂದರೆ ತಮ್ಮ ವೈರಿಗಳಿಂದ ಪ್ರಾಣ ಉಳಿಸಿಕೊಳ್ಳಬಹುದು ಮತ್ತು ತಾವು ಜೈಲಿನಲ್ಲಿದ್ದುಕೊಂಡು ತಮ್ಮ ವಿರೋಧಿಗಳನ್ನು ಮುಗಿಸಲೂಬಹುದು.

ಜೈಲಿನಿಂದಲೇ ಜಡೇಜಾ ಪ್ಲಾನ್ ಮಾಡಿ ಶಿವರಾಮ ಮತ್ತು ಗೋಪಾಲಪುರ ಕಿಟ್ಟಿಯನ್ನು ಮುಗಿಸಿದ. ಅದೇ ಕಾರಣವಾಗಿ ನಂತರ ಜಡೇಜಾನೂ ಅಶೋಕ ಪೈ ಮತ್ತು ಚೇರ್ನಳ್ಳಿ ಬಾಮೈದ ಚೇತನರಿಂದ ಹತನಾದ. ಇದರಿಂದಾಗಿ ಜೈಲು ಸೇರಿದ ಪೈ ಮತ್ತು ಚೇತನ್ ಸಹ ಅದೇ ಪರಂಪರೆಯನ್ನು ಮುಂದುವರೆಸುತ್ತಿದ್ದಾರೆ. ಜೈಲಿನಲ್ಲಿದ್ದುಕೊಂಡೇ ಪೈನ ಮಾಜಿ ಗುರು, ಹಾಲಿ ಪರಮವೈರಿ ರಂಗಸ್ವಾಮಿಯನ್ನು ಮುಗಿಸಲು ತೀರ್ಮಾನಿಸಿದರು. 2004ರ ಚುನಾವಣೆಯ ಸಂದರ್ಭದಲ್ಲಿ ಮೇಲುಕೋಟೆ ಬಿಎಸ್ಪಿ ಎಮ್ಮೆಲ್ಲೆ ಅಭ್ಯರ್ಥಿ ರಂಗಸ್ವಾಮಿಯನ್ನು ಮುಗಿಸಲು ಕಳುಹಿಸಿದ ಹುಡುಗರು ಮಿಸ್ ಆಗಿ ಆತನ ಮಗ ಜಿ.ಪಂ. ಸದಸ್ಯ ಮಹೇಶ್‌ನನ್ನು ಮುಗಿಸಿದರು. ಚೇತನ್ ಗುಲ್ಬರ್ಗ ಜೈಲಲ್ಲಿದ್ದುಕೊಂಡು ತನ್ನ ಮಾವ ಶಂಕ್ರನನ್ನು ಮುಗಿಸಲು ಜಡೇಜಾ ರವಿಗೆ ಸಾತ್ ನೀಡಿದ ಮಾಜಿ ನಗರಸಭಾ ಸದಸ್ಯ ಮಹದೇವಾ ಅಲಿಯಾಸ್ ಕಿಟ್ಟಿ ಎಂಬ ಮಾಜಿ ಕೌನ್ಸಿಲರ್‌ನನ್ನು ತೀರಿಸಿದ. ಇದು ಇಲ್ಲಿಗೂ ಕೊನೆಯಾಗಲಿಲ್ಲ.

ಜಡೇಜಾ ಹತ್ಯೆಗೆ ಪ್ರತೀಕಾರವಾಗಿ ಸಾರಾಯಿ ನಾಗೇಂದ್ರನನ್ನು ಮುಗಿಸಿ ಜೈಲು ಸೇರಿರುವ ಜಡೇಜಾ ಬಾಮೈದ ಡೇಂಜರ್ ಶಿವು ರಾಮನಗರ ಜೈಲಿನಲ್ಲಿದ್ದುಕೊಂಡೇ ಸಾಕ್ಷಿ ವಿದ್ಯಾನಾಗೇಂದ್ರರನ್ನು ಬೆದರಿಸಲು ನಾಗೇಂದ್ರನ ತಮ್ಮ, ಬಿಜೆಪಿಯ ಮುಖಂಡ ಹೆಚ್.ಪಿ. ಮಹೇಶ್‌ನನ್ನು ಮುಗಿಸುವ ಪ್ಲಾನ್ ರೂಪಿಸಿದ. ಇದೇ ಡೇಂಜರ್ ಶಿವಾ ಜೈಲಿನಲ್ಲಿದ್ದುಕೊಂಡು ಜಡೇಜಾನನ್ನು ಮುಗಿಸಿದ ಕೇಸ್‌ನಲ್ಲಿರುವ ಬಯ್ಯಸ್ವಾಮಿಯನ್ನು ಸಾಯಿಸಲು ಹೋಗಿ, ಅಮಾಯಕ ಲ್ಯಾಬ್ ಟೆಕ್ನೀಷಿಯನ್ನನನ್ನು ಕೊಂದ.

ಎತ್ತುವಳಿಗಿಳಿದು ಸಿಕ್ಕಿ ಹಾಕಿಕೊಂಡರು

ಮೇಲಿನ ಎಲ್ಲಾ ಕಥೆಯು ಮಂಡ್ಯದ ರೌಡಿಲೋಕದ ದ್ವೇಷ, ಜಿದ್ದಿಗಷ್ಟೇ ಸಂಬಂಧಪಟ್ಟಿದ್ದರೆ, ಇತ್ತೀಚಿನ ಕಥೆ ಹಣ ವಸೂಲಿಯದ್ದು. ಪೈ ತನ್ನದೇ ಕಲ್ಲಹಳ್ಳಿ ಸ್ವಾಮಿ ಮತ್ತು ಇನ್ನಿತರಿರುವ ಸಣ್ಣ ಟೀಂನಿಂದ ರೋಲ್‌ಕಾಲ್ ನಡೆಸಿದ್ದಾನೆ. ಶಿವು ಪರವಾಗಿ ಜಡೇಜಾನ ಹಳೇ ಲೆಫ್ಟಿನೆಂಟ್ ಬಂಗಾರಪ್ಪನ ತಂಡವೇ ಎತ್ತುವಳಿಗೆ ನಿಂತಿದೆ. ಆದರೆ ಇವರೆಲ್ಲರಿಗಿಂತ ಹೆಚ್ಚಿನ ಹಾವಳಿ ಚೇತನನ ಟೀಮಿನದ್ದು, ಮಹೇಶನೆಂಬ ಆವನ ಸಂಬಂಧಿಯ ನೇತೃತ್ವದ ಟೀಂ ಎಲ್ಲೆಂದರಲ್ಲಿ ದುಡ್ಡಿಗಾಗಿ ಪೀಡಿಸುತ್ತಿದೆ. ಐದು ಸಾವಿರದಿಂದ ಶುರು ಮಾಡಿ ಅಮಾಯಕರನ್ನೂ ಬಿಡದೆ ದುಡ್ಡು ಎತ್ತುತ್ತಿದ್ದಾರೆ. ಲಾಡ್ಜ್‌ಗಳು, ವೈಟ್ ಪೆಟ್ರೋಲ್ ದಂಧೆ ಮಾಡುತ್ತಿರುವವರು, ಗಾಂಜಾ ಮಾರುವವರು, ಮಾರ್ವಾಡಿ ಅಡ್ಡೆಗಳು ಇವರ ಹಣದ ಮೂಲವಾಗಿದೆ. ಮಾಜಿ ನಗರಸಭಾಧ್ಯಕ್ಷೆ ನಾಗಮಣಿ ಗಂಡ ಇಡ್ಲಿ ರಾಜಣ್ಣ ಅಲಿಯಾಸ್ ಹಮಾಮ್ ರಾಜಣ್ಣನಿಂದ ಸಾಯುವ ಮುಂಚೆ 3 ಲಕ್ಷ ಕಿತ್ತಿದ್ದರು ಎಂಬ ವದಂತಿಯಿದೆ.

ಮೊನ್ನೆ ಅಭಿನವ ಭಾರತಿ ವಿದ್ಯಾಕೇಂದ್ರದ ಶಿಕ್ಷಕ ರಾಜೇಶ್ ಸೈಟು ಮಾರಿ ಹಲವು ಲಕ್ಷ ರೂ. ಇಟ್ಟುಕೊಂಡಿದ್ದಾನೆ ಎಂದು ಗೊತ್ತಾದಕೂಡಲೇ ಚೇತನನ ಟೀಂ ಅವರಿಗೆ ಫೋನ್ ಮಾಡಿ 3 ಲಕ್ಷ ತಮಗೆ ಮಡಗಬೇಕು ಎಂದಿದೆ. ರಾಜೇಶ್ ಹೆದರಿಕೊಳ್ಳದೇ ಪೊಲೀಸರಿಗೆ ತಿಳಿಸಿದ್ದಾರೆ. ಅದೇ ರೀತಿ 100 ಅಡಿ ರಸ್ತೆಯಲ್ಲಿನ ಪಟೇಲ್ ಬ್ಯಾಂಕರ್ಸ್‌ನ ಮಾಲೀಕ ಬಾಬುಲಾಲ್ ರಫೀಉಲ್ಲಾ ಮರ್ಡರ್ ಕೇಸಿನಲ್ಲಿರುವವರಿಗೆ ದುಡ್ಡು ಫೀಡ್ ಮಾಡುತ್ತಿದ್ದಾನೆ ಎಂಬ ಮಾಹಿತಿಯನ್ನಾಧರಿಸಿ, ಅವನ ಬಳಿಗೂ ಹೋಗಿದ್ದಾರೆ. ಚೇತನ್ ಮಾತಾಡ್ತಾನೆ ಎಂದು ಮೊಬೈಲ್‌ಅನ್ನು ಬಾಬುಲಾಲ್ ಕಿವಿಗಿಡಿದಿದ್ದಾರೆ. ಆದರೆ ದುಡ್ಡು ಕೊಡಲೊಪ್ಪದ ಬಾಬುಲಾಲ್‌ನ ಅಂಗಡಿ ಮೇಲೆ ನಂತರ ದಾಳಿ ಮಾಡಿ ಗಾಜು ಒಡೆದಿದ್ದಾರೆ. ಇದೂ ಸಹ ಕೇಸಾಗಿದೆ.


ಜಯಮಾರುತಿ


ಎಸ್ಪಿ ಕೌಶಲೇಂದ್ರ

ಇವೆಲ್ಲದರಿಂದ ಜೈಲೇ ರೌಡಿ ಲೋಕದ ಹೆಡ್‌ಕ್ವಾರ್ಟರ್ಸ್ ಆಗುತ್ತಿದೆ ಎಂಬುದು ಸ್ಪಷ್ಟವಾಗಿದೆ. ಈ ಹಿನ್ನೆಲೆಯಲ್ಲಿ ಮಂಡ್ಯ ಪೊಲೀಸರು, ಹೆಡ್‌ಕ್ವಾರ್ಟರ್ಸ್‌ನ ಮೂವರು ಬಾಸ್‌ಗಳ ಕಾಲಾಳುಗಳಾಗಿ ಫೀಲ್ಡಿನಲ್ಲಿರುವ ಹುಡುಗರ ಹಿಂದೆ ಬಿದ್ದಿದ್ದಾರೆ. ಆದರ ಫಲವಾಗಿಯೇ ಈಗ 10 ಜನರನ್ನು ಬಂಧಿಸಲಾಗಿದೆ. ಸ್ವತಃ ಐಜಿಪಿ ಎ.ಎಸ್.ಎನ್. ಮೂರ್ತಿಯವರೇ ಬಂದು ಪತ್ರಿಕಾಗೋಷ್ಠಿಯನ್ನು ನಡೆಸಿ, ಇವರ ಬಂಧನವನ್ನು ಘೋಷಿಸಿದರು. ಇದಲ್ಲದೇ 24 ಮಂದಿ ಸಮಾಜಘಾತುಕರ ಗಡೀಪಾರಿಗೆ ಶಿಫಾರಸ್ಸು ಮಾಡುತ್ತಿದ್ದೇವೆ ಎಂದೂ ಹೇಳಿದರು. ಬಂಧಿತರಾದ 10 ಜನರಲ್ಲಿ ಚೇತನನ ಅಕ್ಕನ ಮಗ ಸಬ್ಬನಹಳ್ಳಿ ಮಹೇಶನೂ ಇದ್ದಾನೆ. ಇವನು ಜಡೇಜಾ ರವಿ ಕೊಲೆ ಕೇಸಿನಲ್ಲೂ ಇದ್ದು ಜಾಮೀನಿನ ಮೇಲೆ ಬಿಡುಗಡೆಯಾಗಿ ಬಂದಿದ್ದಾನೆ.


ಎಎಸ್‌ಎನ್ ಮೂರ್ತಿ

ಬಂಧನ ಮತ್ತು ಗಡೀಪಾರಿನಿಂದ ನಿಂತೀತೇ ರೌಡಿಗಳ ಅಟ್ಟಹಾಸ

ಪೊಲೀಸರು ಕಾರ್ಯಪ್ರವೃತ್ತರಾಗಿ ಬಂಧನ ನಡೆಸಿರುವುದು ಒಳ್ಳೆಯ ಸಂಗತಿಯೇ ಆಗಿದೆ. ಗಡೀಪಾರನ್ನೂ ಮಾಡುತ್ತೇವೆಂದು ಹೇಳಿರುವುದು, ರೌಡಿಗಳು ಬೆದರಿಕೆ ಹಾಕಿದರೆ ತಿಳಿಸಿ ಕ್ರಮ ಕೈಗೊಳ್ಳುತ್ತೇವೆಂದು ಐಜಿ ಮತ್ತು ಎಸ್‌ಪಿಗಳ ಫೋನ್ ನಂಬರ್‌ಅನ್ನು ಬಹಿರಂಗವಾಗಿ ಪ್ರಕಟಿಸಿರುವುದು ಎಲ್ಲವೂ ಸರಿಯಾದ ಕ್ರಮಗಳೇ. ಆದರೆ ಇಷ್ಟರಿಂದ ರೌಡಿಗಳ ವ್ಯವಹಾರಕ್ಕೆ ಸಂಪೂರ್ಣ ಕಡಿವಾಣ ಹಾಕಲಾಗುತ್ತದೆಯೇ? ಮಂಡ್ಯದಲ್ಲಿ ಅಮಾಯಕರು ನೆಮ್ಮದಿಯಿಂದ ಇರಲು ಸಾಧ್ಯವಾಗುತ್ತದೆಯೇ ಎಂಬ ಪ್ರಶ್ನೆಯಂತೂ ಹಾಗೆಯೇ ಉಳಿಯುತ್ತದೆ. ಈ ಹಿಂದೆಯೂ ಒಮ್ಮೆ ಗಡೀಪಾರಿನಂತಹ ಕ್ರಮಗಳನ್ನು ಕೈಗೊಳ್ಳಲಾಗಿತ್ತು, ಆದರೆ ಅದು ಸಮಸ್ಯೆಯ ಮೂಲೋತ್ಪಾಟನೆ ಮಾಡಲು ಸಾಧ್ಯವಾಗಲಿಲ್ಲ. ಹಾಗೆ ನೋಡಿದರೆ ರೌಡಿ ಚಟುವಟಿಕೆಗಳಿಗೆ ಕೇವಲ ಪೊಲೀಸ್ ಇಲಾಖೆಯೊಂದೇ ಪರಿಹಾರ ಒದಗಿಸಲು ಸಾಧ್ಯವೂ ಇಲ್ಲ.

ಹಲವು ರೀತಿಯ ಕಳ್ಳದಂಧೆಗಳು, ರೌಡಿಗಳನ್ನು ಬೆಳೆಸುವ ಕಳ್ಳದಂಧೆಯ ಬಾಸ್‌ಗಳು, ರಾಜಕಾರಣಿಗಳು, ಉದ್ದಿಮೆದಾರರು, ರೌಡಿಗಳ ಜೊತೆ ಶಾಮೀಲಾಗುವ ಪೊಲೀಸರು, ನಿರುದ್ಯೋಗ, ಸಿನೆಮಾಗಳು ಹುಟ್ಟಿಸುತ್ತಿರುವ ಕ್ರೇಜ್, ರೌಡಿಸಂ ಅನ್ನು ವೈಭವೀಕರಿಸುವ ಪತ್ರಿಕೆಗಳು ಎಲ್ಲರ ಕೊಡುಗೆಯೂ ಇದಕ್ಕೆ ಇದೆ. ಮಂಡ್ಯದಂತಹ ಊರಿನಲ್ಲಿ ನಿರಂತರ ಬೆಳೆಯಂತೆ ವಿಸ್ತರಿಸಿಕೊಳ್ಳುತ್ತಿರುವ, ಹೊಸ ಹೊಸ ಎಳೆಯ ಹುಡುಗರು ಮತ್ತೆ ಮತ್ತೆ ಇದರ ಪಾಶಕ್ಕೆ ಸೇರ್ಪಡೆಯಾಗುತ್ತಿರುವ ಸಂದರ್ಭದಲ್ಲಿ ಇದರ ಬಗ್ಗೆ ಗಂಭೀರ ಚಿಂತನೆಯಂತೂ ನಡೆಯಬೇಕಿದೆ. ಸಮಾಜದ ವಿವಿಧ ಜನರನ್ನು ತೊಡಗಿಸಿ ಕಾರ್ಯಪ್ರವೃತ್ತರಾದರೆ ಕನಿಷ್ಠ ಪ್ರಮಾಣದಲ್ಲಿ ಈ ಪಿಡುಗನ್ನು ನಿಯಂತ್ರಿಸಲು ಸಾಧ್ಯವಾಗಬಹುದೇನೋ. ಇಲ್ಲವಾದರೆ ಮತ್ತೆ 'ಹೊಸ ಬೆಳೆ' ಬಂದೇ ಬರುತ್ತದೆ.

ಇದೇ ಸಂದರ್ಭದಲ್ಲಿ ಒಂದು ಎಚ್ಚರಿಕೆಯೂ ಅಗತ್ಯವಿದೆ. ರೌಡಿ ಕುಲಕ್ಕೆ ಬಂದು ಮುಗಿಬೀಳುವ ಹುಡುಗರ ಜೊತೆಗೆ, ಎಷ್ಟೇ ಸಣ್ಣ ಸಂಖ್ಯೆಯಲ್ಲಾದರೂ ಸರಿ, ಪೊಲೀಸರಿಂದ ಕೇವಲ ಅನುಮಾನದ ಕಾರಣಕ್ಕಾಗಿ ರೌಡಿ ಪಟ್ಟ ಕಟ್ಟಿಕೊಳ್ಳುವ ಹುಡುಗರೂ ಇದ್ದಾರೆ. ಇಂಥವರು ಒಂದೋ ಊರಿನಲ್ಲೇ ಇಲ್ಲದೇ ಕಣ್ಮರೆಯಾಗಬೇಕು ಇಲ್ಲವೇ ಅವರೂ ಅನಿವಾರ್ಯವಾಗಿ ರೌಡಿ ಫೀಲ್ಡಿಗಿಳಿಯಬೇಕು ಎಂಬಂತೆಯೂ ಆಗುವುದಿದೆ. ಸಣ್ಣ ಹೈಕಳಲ್ಲಿ ಯಾವನು ಮುಂದಕ್ಕೆ ಅಪಾಯಕಾರಿಯಾಗುತ್ತಾನೆ ಎಂಬುದನ್ನು ಪತ್ತೆ ಹಚ್ಚುವುದು ಕಷ್ಟವೆಂದಾದರೂ, ಈ ರೀತಿ ಅಮಾಯಕರು ತೊಂದರೆ ಅನುಭವಿಸದಂತೆ ಎಚ್ಚರ ವಹಿಸುವುದೂ ಪೊಲೀಸ್ ಇಲಾಖೆಯ ಕರ್ತವ್ಯ. ಅದೇ ರೀತಿ ಪ್ರಗತಿಪರ ಚಳವಳಿಯಲ್ಲಿ, ಬಡವರ ಹಕ್ಕಿನ ಹೋರಾಟದಲ್ಲಿ ಭಾಗವಹಿಸಿದವರನ್ನೂ ರೌಡಿ ಪಟ್ಟಿಗೆ ಸೇರಿಸಿರುವ 'ಖ್ಯಾತಿ'ಯಿರುವ ಮಂಡ್ಯ ಪೊಲೀಸರು ಅಂತಹ ತಪ್ಪುಗಳು ಮತ್ತೆ ಪುನರಾವರ್ತನೆಯಾಗದಂತೆ ನೋಡಿಕೊಳ್ಳಬೇಕಿದೆ.

ಸದ್ಯಕ್ಕೆ ಮಂಡ್ಯದಲ್ಲಿ ನೆಲೆಯೂರಿರುವ ಎಸ್‌ಪಿ ಕೌಶಲೇಂದ್ರ ಕುಮಾರ್, ಅಡಿಷನಲ್ ಎಸ್‌ಪಿ ರಾಜಣ್ಣ ಮತ್ತು ಸರ್ಕಲ್ ಇನ್ಸ್‌ಪೆಕ್ಟರ್ ಜಯಮಾರುತಿಯವರು ಸಾಕಷ್ಟು ಕಾಲದಿಂದ ಇಲ್ಲೇ ಇದ್ದು ಮಂಡ್ಯದ ಸಮಸ್ಯೆಗಳನ್ನು ಬಲ್ಲವರಾಗಿದ್ದಾರೆ. ಅನಗತ್ಯ ಅತಿರೇಕಗಳಿಲ್ಲದೆ ಈಗ ಶುರು ಮಾಡಿರುವ ಹೊಸ ಕ್ರಮಗಳಿಂದ ರೌಡಿಸಂನ ಮೂಲಗಳಿಗೆ ಕೈಹಾಕಿ ನೆಮ್ಮದಿ ತರುತ್ತಾರೆ ಎಂದು ಆಶಿಸೋಣ.

● ಲಕ್ಷ್ಮಣ್ ಚೇರನಹಳ್ಳಿ



ಆಯೋಜನೆಯಲ್ಲಿ ಮುಗ್ಗರಿಸಿದ ಕ್ರೀಡಾಕೂಟ





ಟಿ. ಅವಿನಾಶ್
avinash.tambarsi1@gmail.com

ಈ ಲೇಖನ ಅಚ್ಚಾಗುವ ಹೊತ್ತಿಗೆ ದೆಹಲಿಯ ಕಾಮನ್‌ವೆಲ್ತ್ ಕ್ರೀಡಾಕೂಟ ಅಂತೂ–ಇಂತೂ ತನ್ನ ಕೊನೆಯ ಹಂತವನ್ನು ತಲುಪಿರುತ್ತೆ. ಸಂತಸದ, ಹೆಮ್ಮೆಯ, ಭಾವ ತೀವ್ರತೆಯ ಪ್ರತೀಕವಾಗಬೇಕಾಗಿದ್ದ ಕ್ರೀಡಾಕೂಟವನ್ನು ಹೇಗೊ ಅಂತೂ ಇಂತೂ ಮಾಡಿ ಮುಗಿಸಿದೆವಲ್ಲ ಎಂಬ ಆಯಾಸದ ಭಾವನೆಯೇ ದೆಹಲಿಯ ಜನರನ್ನು ಕಾಡುತ್ತಿರುವಂತೆ ಭಾಸವಾಗುತ್ತಿದೆ- ಥೇಟ್ ಜುಗಾರಿ ಕ್ರಾಸ್‌ನಲ್ಲಿ ಬರುವ ಖುದ್ದೂಸನ ಘಾಟಿ ಎಕ್ಸ್‌ಪ್ರೆಸ್ ಬಸ್ಸು ಏರನ್ನು ಹತ್ತಲಾಗದಿದ್ದರೂ ಬುಸುಗುಡುತ್ತಾ ಹತ್ತಿ ನಿಟ್ಟುಸಿರು ಬಿಟ್ಟಂತೆ. ಆರಂಭ ಹಾಗೂ ಮುಕ್ತಾಯದ ಥಳುಕು-ಬಳುಕನ್ನು ಹೊರತುಪಡಿಸಿದರೆ ಕ್ರೀಡಾಕೂಟ ಆಯೋಜನೆಯು ವೈಫಲ್ಯದಿಂದ ತೀವ್ರ ಮುಜುಗರ ಅನುಭವಿಸಿತು.

ಒಟ್ಟಾರೆಯಾಗಿ ಹದಿನೈದು ದಿನಗಳ ಕಾಲಾವಧಿಯ ದೆಹಲಿ ಕ್ರೀಡಾಕೂಟವನ್ನು ಸಮಗ್ರವಾಗಿ, ಸಾಧ್ಯವಿದ್ದಷ್ಟೂ ಸಹಾನುಭೂತಿಯಿಂದ ಅವಲೋಕಿಸಿದರೂ ಸಾಲು-ಸಾಲು ವೈಫಲ್ಯಗಳು, ಬೇಜವಾಬ್ದಾರಿಯುತ ನಡವಳಿಕೆ, ಬ್ರಹ್ಮಾಂಡ ಭ್ರಷ್ಟಾಚಾರ, ಸಂಘಟನಾ ಕೌಶಲ್ಯದ ಅಸಮರ್ಥತೆ, ಕಳೆ ಕಳೆದುಕೊಂಡ ಸ್ಪರ್ಧೆಗಳು, ದೂರದರ್ಶನದ ನೇರ ಪ್ರಸಾರದ ಬೃಹತ್ ವೈಫಲ್ಯಗಳೇ ಪುನಃಪುನಃ ಕಣ್ಣಿಗೆ ರಾಚುತ್ತವೆ. 21ನೇ ಶತಮಾನ ಭಾರತದ ತಂತ್ರಜ್ಞಾನಕ್ಕೆ ಸೇರಿದ್ದು ಎಂದು ಕೂಗಿ ಕೂಗಿ ಹೇಳುತ್ತಿರುವಾಗಲೇ ಕ್ರೀಡಾಕೂಟದ ವೆಬ್‌ಸೈಟ್ ಸಂಪೂರ್ಣ ಕುಸಿದುಬಿದ್ದು ಹಾಸ್ಯಾಸ್ಪದವೆನ್ನಿಸಿದ್ದು ಶೋಚನೀಯವೆ. ಸಾರಿಗೆ ವ್ಯವಸ್ಥೆಯಿಂದ ಹಿಡಿದು ಟಿಕೆಟ್ ಮಾರಾಟದವರೆಗೆ ಎಲ್ಲವೂ ಗೊಂದಲದ ಗೂಡೆ. ಖ್ಯಾತ ಕಾದಂಬರಿಕಾರ ಇ.ಎಮ್.ಫಾಸ್ಟರ್‌ನ ಕಾದಂಬರಿಯ ಇಂಗ್ಲಿಷ್ ನಾಯಕಿಯೊಬ್ಬಳು Is India a muddle or a mystery? ಎಂದು ಪ್ರಶ್ನಿಸುತ್ತಾಳೆ. ಒಂದು ಶತಮಾನದ ಹಿಂದೆಯೇ ಆವಳಿಗೆ ದಕ್ಕಿದ್ದ ಗೊಂದಲಕಾರಿ ಅನುಭವವೇ ಈ ಕ್ರೀಡಾಕೂಟಕ್ಕೂ ವಿಸ್ತರಿಸಿದಂತೆ ಅನ್ನಿಸಿತು. ಇವೆಲ್ಲ ಪಶ್ಚಿಮದ ಪೂರ್ವಾಗ್ರಹಪೀಡಿತ ಮಾಧ್ಯಮಗಳ ಸೃಷ್ಟಿ ಎಂದು ಸುಲಭವಾಗಿ ತಳ್ಳಿಹಾಕುವಂತಿಲ್ಲ, ಮೊನ್ನೆ ತಾನೆ ಆಫ್ರಿಕಾ ಖಂಡ ವಿಶ್ವಕಪ್ ಫುಟ್‌ಬಾಲ್ ಪಂದ್ಯಾವಳಿಗಳನ್ನು ಸುಲಲಿತವಾಗಿ ಆಯೋಜಿಸಿದ್ದನ್ನು ಗಮನಿಸಿದರೆ ಭಾರತ ಆಯೋಜನೆಯ ವಿಭಾಗದಲ್ಲಿ ಎಡವಿದ್ದು ಸ್ಪಷ್ಟವಾಗಿತ್ತು.

ಈ ರೀತಿ ದೇಶದ ಮಾನವನ್ನು ಸುಸಂಬದ್ಧವಾಗಿ ಹರಾಜು ಹಾಕಿದ ಕೀರ್ತಿ ಸುರೇಶ್ ಕಲ್ಮಾಡಿ ಎಂಬ ಮಧ್ಯವರ್ತಿಯ ನೇತೃತ್ವದ ಸಂಘಟನಾ ಸಮಿತಿ ಎಂಬ ಜೋಕರ್‌ಗಳ ಸಮೂಹಕ್ಕೆ ಸೇರಬೇಕು. ಭಾರತದಂತಹ ಅಭಿವೃದ್ಧಿಶೀಲ ದೇಶ ತನ್ನ ಸಂಘಟನಾ ಚಾತುರ್ಯವನ್ನು, ಅಸ್ಮಿತೆಯನ್ನು ಹಾಗೂ ಪ್ರತಿಷ್ಠೆಯನ್ನು ಜಾಗತಿಕ ಮಟ್ಟದಲ್ಲಿ ತೋರಿಸುವುದಕ್ಕೆ ಸೂಕ್ತ ವೇದಿಕೆಯಾಗಬೇಕಾಗಿದ್ದ ಕೂಟ ಬೇಜವಾಬ್ದಾರಿ ನೌಕರಶಾಹಿ ಹಾಗೂ ಮೇಯುವ ಸಂಘಟಕರಿಂದಾಗಿ ವಿಫಲಗೊಂಡಿತು. ಪ್ರಾಯಶಃ ನಮ್ಮ ಪ್ರೀತಿಯ ಕ್ರೀಡಾಪಟುಗಳ ಸಾಧನೆಯನ್ನಷ್ಟೆ ನಾವು ನೆನಪಿಟ್ಟುಕೊಳ್ಳುವುದು ಒಳ್ಳೆಯದು. ಕ್ರೀಡಾ ಸಚಿವ ಗಿಲ್ ಹೇಳಿದಂತೆ ಸುರೇಶ್ ಕಲ್ಮಾಡಿಯನ್ನು ಕೂಟದ ನಂತರ ಬದಲಾಯಿಸುವುದು ಎಲ್ಲ ರೀತಿಯಿಂದಲೂ ಸೂಕ್ತ.

ಆರಂಭಕ್ಕೆ ಮೊದಲೇ ಕೂಟದ ಸಿದ್ಧತೆಯಲ್ಲಾದ ಭಾರಿ ಅವ್ಯವಹಾರ, ಬ್ರಹ್ಮಾಂಡ ಭ್ರಷ್ಟಾಚಾರಗಳು ಭಾರತದ ಹಸನ್ಮುಖೀ ಮುಖವಾಡವನ್ನು ಕಳಚಿ ಅಸಲಿ ಮುಖದ ಪರಿಚಯ ಮಾಡಿಕೊಟ್ಟಿತು. ಏಳು ವರ್ಷಗಳ ಕೆಳಗೆ ನ ಭೂತೋ ನ ಭವಿಷ್ಯತಿ ಎಂಬಂತೆ ಕೂಟವನ್ನು ಆಯೋಜಿಸುತ್ತೇವೆ ಎಂದು ಜಾಗತಿಕ ಸಮುದಾಯಕ್ಕೆ ವಾಗ್ದಾನ ಮಾಡಿದ್ದ ಭಾರತ ತೀರಾ ಇತ್ತೀಚಿನವರೆಗೂ ಸರಿಯಾದ ಸಿದ್ಧತೆಯನ್ನೇ ಮಾಡಿಕೊಂಡಿರಲಿಲ್ಲ. ಸಂಘಟನಾ ಸಮಿತಿಯವರಂತೂ ಕಮಿಷನ್ ತಿನ್ನುವ ಬ್ಲೂ ಪ್ರಿಂಟ್ ತಯಾರಿಸುವುದರಲ್ಲಿ ತಮ್ಮನ್ನು ತೀವ್ರವಾಗಿ ತೊಡಗಿಸಿಕೊಂಡಿದ್ದರು ಎನಿಸುತ್ತದೆ. ಹಾಗಿದ್ದರಿಂದಲೇ ಸಿದ್ಧತೆಯ ಎಲ್ಲ ಡೆಡ್‌ಲೈನ್‌ಗಳು ಒಂದಾದಮೇಲೊಂದರಂತೆ ಮುರಿದುಬಿದ್ದವು.

ಎಷ್ಟರಮಟ್ಟಿಗೆ ಎಂದರೆ ಐದೂವರೆ ಕೋಟಿ ನುಂಗಿ ಕರ್ಣಕಠೋರ ಟ್ಯೂನ್‌ಗಳನ್ನು ಸಂಯೋಜಿಸಿ ಕೊಟ್ಟ ಎ.ಆರ್. ರೆಹಮಾನರ ಆಶಯ ಗೀತೆಯೂ ಸಮಯಕ್ಕೆ ಸರಿಯಾಗಿ ಬಿಡುಗಡೆಯಾಗಿರಲಿಲ್ಲ, ವಿಶ್ವಕಪ್ ಫುಟ್ಬಾಲ್‌ನ ವಾಕಾವಾಕಾ ಗೀತೆಗೆ ಹೋಲಿಸಿದರೆ ರೆಹಮಾನರದ್ದು ತೀರಾ ಮೀಡಿಯೋಕರ್ ಗೀತೆಯೇ ಸರಿ. ಪತ್ರಕರ್ತರ ನಿಷ್ಠುರ ಪ್ರಶ್ನೆಗಳಿಗೆ ಉತ್ತರಿಸಲಾಗದೇ ತಡವರಿಸಿದ ಕಲ್ಮಾಡಿ ಒಮ್ಮೆಯಂತೂ ಲೇಡಿ ಡಯಾನ ಕೂಡಾ ಕ್ರೀಡಾಕೂಟದಲ್ಲಿ ಹಾಜರಿದ್ದಳು ಎಂದು ಹೇಳಿ ತನ್ನ ಅದ್ಭುತ ಜ್ಞಾನವನ್ನು ಪ್ರದರ್ಶಿಸಿದ!

ಈ ರೀತಿಯ ಆಯೋಜನೆಯ ಗೊಂದಲಗಳು ವಸಾಹತೋತ್ತರ ಸಮುದಾಯ-ರಾಷ್ಟ್ರಗಳಲ್ಲಿ ಸರ್ವೇಸಾಮಾನ್ಯ ಇಂತಹ ನೆಗೆಟಿವ್‌ಗಳನ್ನು ಉದ್ದೇಶಪೂರ್ವಕವಾಗಿ ಎತ್ತಿ ತೋರಿಸುತ್ತದೆ ಎಂದಿಟ್ಟುಕೊಂಡರೂ ಕೂಟದ ಮುಖ್ಯ ಭಾಗವಾದ ಆಟದ ಗುಣಮಟ್ಟ ಸ್ವಲ್ಪ ನಿರಾಶದಾಯಕವೇ ಆಗಿತ್ತು, ನಾನಾ ಕಾರಣಗಳಿಂದಾಗಿ ಕಾಮನ್‌ವೆಲ್ತ್ ದೇಶಗಳ ಉನ್ನತ ರ‍್ಯಾಂಕಿಂಗ್‌ನ ಅನೇಕ ಸ್ಟಾರ್ ಅಥ್ಲೀಟ್‌ಗಳು ಸ್ಪರ್ಧೆಯಲ್ಲಿ ಭಾಗವಹಿಸದಿರುವುದರಿಂದ ಬಹುತೇಕ ಸ್ಪರ್ಧೆಗಳು ತಮ್ಮ ಹೊಳಪನ್ನು ಕಳೆದುಕೊಂಡವು. ಅದರಲ್ಲೂ ಜಮೈಕಾದ ಕಣ್ಣು ಕೋರೈಸುವ ವೇಗಿಗಳಾದ ಉಸಾಯಿನ್ ಬೋಲ್ಟ್ ಹಾಗೂ ಅಸಾಫಾ ಪಾವೆಲ್ ದೆಹಲಿಗೆ ಬರದೇ ಹೋದದ್ದು ಕ್ರೀಡಾಪ್ರೇಮಿಗಳಿಗೆ ತೀವ್ರ ನಿರಾಶೆ ಉಂಟುಮಾಡಿತು. ಒಲಿಂಪಿಕ್ಸ್‌ನಲ್ಲಿ ಚಿನ್ನವನ್ನು ಕೊಳ್ಳೆ ಹೊಡೆವ ಜಮೈಕಾ ಎರಡನೇ ದರ್ಜೆಯ ಕ್ರೀಡಾಪಟುಗಳನ್ನು ದೆಹಲಿಗೆ ಕಳುಹಿಸಿದ್ದು ವಿಷಾದನೀಯ. ಇದರ ಜೊತೆಗೆ ನೇತ್ಯಾತ್ಮಕ ಮೀಡಿಯಾ ಪ್ರಚಾರದಿಂದ ಉಳಿದ ರ‍್ಯಾಂಕಿಂಗ್ ಕ್ರೀಡಾಪಟುಗಳು ಸ್ಪರ್ಧೆಯಿಂದ ಹಿಂದೆ ಸರಿದಿದ್ದರಿಂದ ಆಟದ ಗುಣಮಟ್ಟ ಪ್ರಪಾತಕ್ಕೆ ಕುಸಿಯಿತು. ಬಹುಶಃ ಉನ್ನತ ರ‍್ಯಾಂಕಿಂಗ್‌ನ ಕ್ರೀಡಾಪಟುಗಳ ಆದ್ಯತೆಗಳು ಕಾಮನ್‌ವೆಲ್ತ್ ಗೇಮ್‌ಗಳಲ್ಲ ಎಂಬುದೂ ಇದರಿಂದ ಸ್ಪಷ್ಟವಾಯಿತು. ಹೆಸರೇ ಹೇಳುವಂತೆ ಈ ಕಾಮನ್‌ವೆಲ್ತ್ ಕ್ರೀಡಾಕೂಟವೇ ಆದರ್ಶದ ಹೇಳಿಕೆಗಳನ್ನು ನೀಡುವ ಹಾಗೂ ರಾಷ್ಟ್ರಪ್ರೇಮವನ್ನು ಎತ್ತಿಹಿಡಿಯುವ ಒಂದು ಉದ್ದೇಶ ಹೊಂದಿದೆ ಎಂದು ಕಾಣುತ್ತದೆ.

ಇನ್ನು ನಮ್ಮ ದೇಶದ ಕ್ರೀಡಾಪಟುಗಳ ಒಟ್ಟು ಸಾಧನೆ ಮೆಚ್ಚುವಂತಹದ್ದೆ. ಬಹಳ ಕಾಲದ ನಂತರ ನಮ್ಮ ಸ್ಪರ್ಧಿಗಳ ಮುಖದಲ್ಲಿ ನಗು-ಮಂದಹಾಸ ಮಿಂಚುತಿತ್ತು. 32ಕ್ಕೂ ಅಧಿಕ ಚಿನ್ನದ ಪದಕಗಳನ್ನು ಕೊಳ್ಳೆ ಹೊಡೆದ ನಮ್ಮೆಲ್ಲಾ ಕ್ರೀಡಾಪಟುಗಳ ಸಾಧನೆ ಗಮನೀಯ ಹಾಗೂ ಅಭಿನಂ... ನೀಯ. ಕ್ರಿಕೆಟ್‌ನ್ನು ಹೊರತುಪಡಿಸಿ 'ಇತರೇ ಆಟಗಳ... ಎಂಬ ಅವಗಣನೆಗೆ ತುತ್ತಾದ ವಿಭಾಗಗಳಲ್ಲಿ ನಮ... ಆಟಗಾರರು ವ್ಯವಸ್ಥೆಯ ಭ್ರಷ್ಟತೆಯ ನಡುವೆಯೂ ತಮ... ವೈಯಕ್ತಿಕ ತುರ್ತಿನಲ್ಲಿ ಸಾಧನೆ ಮಾಡಿದ್ದು ಸಮಾಧಾನಕ... ಅಂಶ. ಅದರಲ್ಲೂ ಮಹಿಳಾ ಸ್ಪರ್ಧಿಗಳ ಸಾಧನೆ ಅಮೋಘ... ಸರಿ. ಇಷ್ಟೆಲ್ಲಾ ಪದಕಗಳನ್ನು ಒಲಿಂಪಿಕ್ಸ್ ಅಥವಾ ಬೇ... ಜಾಗತಿಕ ಕೂಟಗಳಲ್ಲಿ ಏಕೆ ಗೆಲ್ಲಲಾಗುವುದಿಲ್ಲ ಎಂ... ಪ್ರಶ್ನೆ ಸದ್ಯಕ್ಕಂತೂ ಅಪ್ರಸ್ತುತ. ಏಕೆಂದರೆ ನಮ್ಮ ಮಹೋನ್ನ... ಕ್ರೀಡಾಪಟುಗಳು- ಅಭಿನವ್ ಬಿಂದ್ರಾನಿಂದ ಹಿಡಿದು... ಸುಶೀಲ್ ಕುಮಾರ್‌ವರೆಗೆ -ಒಂದು ಸದೃಢ ಕ್ರೀಡ... ವ್ಯವಸ್ಥೆಯ ಕೂಸುಗಳಲ್ಲ, ಇವರೆಲ್ಲ ವ್ಯವಸ್ಥೆಯ ಹೊರತಾಗಿಯೆ... ಸಾಧನೆ ಮಾಡಿರುವುದರಿಂದ ಒಲಿಂಪಿಕ್ಸ್‌ನ ವೈಫಲ್ಯವನ್ನು... ವೈಯಕ್ತಿಕ ಮಟ್ಟದಲ್ಲಿ ನೋಡದೇ ಅದನ್ನೊಂದು ವಿಶಾ... ಹಂದರದಲ್ಲಿ ಪರೀಕ್ಷಿಸುವುದು ಅಗತ್ಯವಿದೆ.

ನಿರೀಕ್ಷೆಯಂತೆ ಸೈನಾ ನೆಹ್ವಾಲ್ ಅಮೋಘವಾಗಿ ಆ... ಪದಕ ಗೆದ್ದರೆ ಮೀಡಿಯಾಗಳ ಡಾರ್ಲಿಂಗ್ ಸಾನಿಯ... ಎರಡನೇ ಸ್ಥಾನಕ್ಕೆ ತೃಪ್ತಿ ಪಟ್ಟುಕೊಳ್ಳಬೇಕಾಯಿತು. ಸೀಮಿ... ಸ್ಪರ್ಧೆ ಇರುವ ಇದರಲ್ಲೇ ಸಾನಿಯಾಗೆ ವಿಜೃಂಭಿಸಲು... ಸಾಧ್ಯವಿಲ್ಲದಿದ್ದರೆ ಇನ್ನು ಅಂತರರಾಷ್ಟ್ರೀಯ ಟೂರ್ನಿಗಳ... ಇವಳಿಂದ ನಾವು ಹೆಚ್ಚಿನದೇನನ್ನು ನಿರೀಕ್ಷಿಸಬಹುದು... ಸಾಂಘಿಕ ಆಟಗಳಲ್ಲಿ ಭಾರತೀಯ ಹಾಕಿ ತಂ... ಅನಿರೀಕ್ಷಿತವಾಗಿ ಭರ್ಜರಿ ಸಾಧನೆ ಮಾಡಿತು. ಪಾಕಿಸ್ತಾ... ಹಾಗೂ ಇಂಗ್ಲೆಂಡ್ ತಂಡಗಳ ವಿರುದ್ಧ ರೋಚಕ ಆ... ಪ್ರದರ್ಶಿಸಿದ ಹಾಕಿ ಆಟಗಾರರು ಹಾಗೂ ವಿದೇಶಿ ಕೋಚ್... ಜೋಸ್ ಬ್ರಾಸಾ ಖಂಡಿತಕ್ಕೂ ಅಭಿನಂದನಾರ್ಹರು. ಹಾ... ಫೆಡರೇಶನ್‌ನ ಗಬ್ಬು ರಾಜಕೀಯದ ಮಧ್ಯವೂ ಇವರೆಲ್ಲರು... ಅತ್ಯುನ್ನತ ಕೌಶಲ್ಯ ತೋರಿದ್ದು ನಮ್ಮ ನಿರೀಕ್ಷೆಗಳನ್ನು ಹೆಚ್ಚಿಸಿತ್ತು... ಹಾಗೆಯೇ ಮಹಿಳಾ ರಿಲೇ ಆಟಗಾರ್ತಿಯರು ಚಿ... ಗೆದ್ದಿದ್ದು ಬಹುಕಾಲ ನೆನಪಿನಲ್ಲುಳಿಯುವ ಚಾರಿತ್ರಿಕ ಘಟ...

ಯಾವುದೇ ಕ್ರೀಡಾಕೂಟ ಬಹು ಜನರನ್ನು ಮು... ಬೇಕಾದರೆ ಟಿವಿ ನೇರ ಪ್ರಸಾರ ಪ್ರಮುಖ ಪಾತ್ರ ವಹಿಸುತ್ತ... ಈ ಕ್ರೀಡಾಕೂಟವನ್ನು 'ನೇರವಾಗಿ' ಪ್ರಸಾರ ಮಾಡಿ... ದೂರದರ್ಶನದ ಕ್ರೀಡಾವಾಹಿನಿ ವೀಕ್ಷಕರೆಲ್ಲರೂ ಸಾವಿರಾ... ಮೈಲುಗಳ ದೂರ ಓಡಿಹೋಗುವಂತೆ ಮಾಡಿತು. ಆ... ಊ... ಎಂದು ತಡವರಿಸುವ ಹಾಸ್ಯಾಸ್ಪದ ವಿವರಣೆಕಾರರ... ನೆಲಕಚ್ಚಿದ ತಾಂತ್ರಿಕತೆ, ಯಾವುದೇ ಯೋಜಿತ ಪೂ... ನಿಶ್ಚಯವಿಲ್ಲದ ಪಂದ್ಯಾವಳಿಗಳ ಪ್ರಸಾರ, ಒಂದು ಪಂ... ನಡೆಯುತ್ತಿರುವಂತೆಯೇ ಮತ್ತೊಂದಕ್ಕೆ ಹಾರು... ಉದ್ಧಟತನ-ಪ್ರಮಾದಗಳೇ ದೂರದರ್ಶನದ 'ನೇರ ಪ್ರಸಾರ... ಗಮನೀಯ ಅಂಶಗಳು!!

ಯಾವುದೇ ದರ್ಶನವಿಲ್ಲದ ದೂರದರ್ಶನದ ಅಧಿಕಾ... ಗಳು ಕ್ರೀಡಾಪ್ರೇಮಿಗಳನ್ನು ಕಸದಬುಟ್ಟಿಗೆ ಹಾಕಿ ಸಂತೋ... ಪಟ್ಟರು. ಈ ಅತ್ಯಾಧುನಿಕ ಯುಗದಲ್ಲೂ ಇಷ್ಟು ವೃತ್ತಿಪರತೆ... ಕೊರತೆ ಇರುವುದು ಬಹುಶಃ ದೂರದರ್ಶನ... ಕ್ರೀಡಾವಾಹಿನಿಯಲ್ಲಿ ಮಾತ್ರ. ಟಿವಿ ನೇರಪ್ರಸಾರದಲ್ಲಿ... ಅವ್ಯವಹಾರದ ದಟ್ಟ ವಾಸನೆ ಮೂಗಿಗೆ 'ಬಡಿಯಿತ... ಐದಾರು ವರ್ಷಗಳ ಹಿಂದೆಯೇ ಡಿ.ಡಿ ನೇರ ಪ್ರಸಾರ... ಹಕ್ಕನ್ನು ಪಡೆದುಕೊಂಡಿದ್ದರೂ ಪ್ರಸಾರದ ಹೊಣೆಯನ್ನು... ಸಿಕ್ಕಾಪಟ್ಟೆ ರೇಟಿಗೆ ಖಾಸಗಿಯವರಿಗೆ ಹೊರಗುತ್ತಿಗೆ ನೀಡಿತ್ತು... ಆದ್ದರಿಂದ ಡಿ.ಡಿ ವಾಹಿನಿಗೆ ಕೂಟದ ನಂತರ ಯಾವುದೇ... ಉನ್ನತ ಮಟ್ಟದ ತಾಂತ್ರಿಕ ಉಪಕರಣಗಳು ಆಸ್ತಿಯಾಗಿ... ಉಳಿಯುವುದೇ ಇಲ್ಲ, ಈ ಖಾಸಗಿ ಹೊರಗುತ್ತಿಗೆಯವ... ಪ್ರಸಾರದ ಗುಣಮಟ್ಟ ಹಲವಾರು ಶತಮಾನಗಳ ಹಿಂದಿದ್ದಿದ್ದು... ಏಕೆ ಎಂಬ ಪ್ರಶ್ನೆಗೆ ಉತ್ತರ ದೊರೆಯುಲಿಲ್ಲ.

ಒಟ್ಟಾರೆಯಾಗಿ ನೋಡಿದರೆ ಸೀಮಿತ ಸ್ಪರ್ಧೆಯ... ಭಾರತೀಯ ಕ್ರೀಡಾಪಟುಗಳು ಅತ್ಯುನ್ನತ ಸಾಧನೆ ಮಾಡಿದ... ಆಯೋಜನೆಯ ಜವಾಬ್ದಾರಿ ಹೊತ್ತವರು ಸಂಪೂರ್ಣ... ಎಡವಿ ಬಿದ್ದರು. 1982ರ ಏಷ್ಯಾಡ್ ನಂತರ ಆಯೋಜಿಸಿ... ಭಾರಿ ಕ್ರೀಡಾಕೂಟದ ಮೂಲಭೂತ ಸೌಕರ್ಯಗ... ಸೌಲಭ್ಯವಾದರೂ ಕ್ರೀಡಾಪಟುಗಳಿಗೆ ಇನ್ನು ಮುಂದಾದರು... ದೊರೆಯುವಂತಾದರೆ ಅದೇ ನಮ್ಮ ಭಾಗ್ಯ ಎಂದುಕೊ... ಬಹುದು.

ಪಾರಿವಾಳ



ಶೂನ್ಯ ತುಂಬಿದ ಮನಸ್ಸಿಗೆ
ಇದು
ಸದಾ ಪ್ರೀತಿಯ ವಸ್ತು
ತಳಮಳ, ಆತಂಕ
ಅಸಹಾಯಕತೆ
ಒಟ್ಟೊಟ್ಟಿಗೆ ಒತ್ತರಿಸಿಕೊಂಡು
ಹಿಂದು-ಮುಂದು
ತಿಳಿಯದೆ
ಪ್ರಾಣ ಹಿಂಡುವಾಗ
ಶಾಂತಿಯ ಹಂಬಲ ಹುಟ್ಟುತ್ತದೆ

ನಾಲ್ಕು ಗೋಡೆ ಮಧ್ಯೆ
ದಿಕ್ಕು ತೋಚದೆ
ಅಡ್ಡಾಡುತ್ತ ಕಣ್ಣು ತುಂಬಿಕೊಂಡು
ಒದ್ದಾಡುವ ಒಂಟಿ ಜೀವಕ್ಕೆ
ಪಾರಿವಾಳದ ನೆನಪಾಗುತ್ತದೆ
ಅಚ್ಚ ಬಿಳೀ ಬಣ್ಣದ ಈ ಪಕ್ಷಿ
ರೆಕ್ಕೆ ಬಿಚ್ಚುವಾಗ
ಶಾಂತಿದೂತನಾಗಿ ಕಂಗೊಳಿಸುತ್ತ
ಹೃದಯದಂಗಳದಲ್ಲಿ ಹಾರುವಾಗ
ಎಷ್ಟು ಹಿತ!


ಪ್ರಾಣಕ್ಕೆ ಜೊತೆಯಾಗಿ
ಕಣ್ಣು ಕಾವಲಾಗಿ ಉಣಿಸು ನೀಡುವ ಇದು
ದಾರಿ ತಪ್ಪದಂತೆ ತೆರೆದ ಆಕಾಶಹಾದಿ
ತೋರುವ
ಇದು ಸದಾ ಪ್ರೀತಿಯ ವಸ್ತು

• ಜ್ಯೋತಿ ಗುರುಪ್ರಸಾದ್

ೂರು ಪಾರ್ಟಿನೂ ಹಾಳುಬಿದ್ದೋದೊ ದ್ವಡಪ್ಪ

ಮಾವ ಉಗ್ರಿ ಹೊತ್ತು ತರುವ ಸುದ್ದಿಗಾಗಿ ರಂತೆ ಕಾದುಕೊಂಡು ಕೂತಿದ್ದ. ಯಾಕೊ ಮುಖ ಸುವರ್ಣ ಚಾನಲ್‌ನ ರಂಗನಾಥನ ತೆ ಡಲ್ಲಾಗಿತ್ತು. ಜುಮ್ಮಿಯೂ ಇಡೀ ದಿನ ಸುಸ್ತಾದವಳಂತೆ ಬಂದಳು. ಆಗ ಕಾಳಮಾವ, ಯಿತ್ಲ ಉಗ್ರಿ ಗಲಾಟ?" ಎಂದ.

ಟೆ ಅಲ್ಲ ಕಣಮಾವ ಅದು, ಮಾರಾಮಾರಿ ದು ಅಂಗಾಯ್ತು."



ಕಣಮಾವ. ಗೂಳಿಹಟ್ಟಿ ಶೇಖರನಂಗಿ ಗೋಯ್ತು. ಮಾದೇವಪ್ಪನ ತೋಳಲ್ಲಿ ರಗತ . ವಬ್ಬ ಪೊಲಿಸಂತೂ ಏಟ ತಡಿಕಾಗದೆ ಬಿದ್ದೇ ಸಿದ್ದರಾಮಯ್ಯ ಒಂದೇಟು ಕೊಟ್ಟೇಟಿಗೆ ರಿ ಟೋಪಿ ಹಾರಿ ಹ್ವಂಟೋಯ್ತು. ಇಂತದ್ಯಾ ನ್ಯಡದಿತ್ತೆ?"

ವರಿಗೂ ನ್ಯಡದಿಲ್ಲ ಬುಡು."

ಬುಮತ ತೋರಕ್ಕೆ ಆಟೊಂತರ ಗಲಾಟಿಯಾಕಾ ಎಂದ ಸೀರ.

"ೂರಪ್ಪನಿಗೆ ಬವುಮತ ಇದ್ರೆ ಗಲಾಟ ಲ್ಲ ಕಣೊ. ಇಲ್ದೆಯಿರೊವತ್ತಿಗೆ ಅಲವೆ ಗಿರೋದು."

ಕಿಂಗತ್ತಿಗತ್ತೂ ಅಂತ?" ಎಂದ ಕಾಳಮಾವ.

ಕ್ಕೆ ಅಂದ್ರೆ ಏನೇಳನ ಮಾವ. ಹಳೆ ಪುಲಾರನ್ಯಲ್ಲ ಗ. ಈ ಎಡೂರಪ್ಪ ನಾನು ಮಾಡದ್ನೆ ಮಾಡ್ತಿನಿ ಚಿತಗತ್ತಿರೊ ಕಿತಗಳಿ ಅನ್ನೊ ಗಿರಾಕಿ."

ನ ಹುಟ್ಟಾಣಕೆನೆ ಅಂಗಲವೇನ್ಲ."

ಟ್ಟಾಣಕೆ ಸರಿ, ಮುಖ್ಯಮಂತ್ರಿಯಾದ ಮ್ಯಾಲೆ ಣ ಬುಡಬೇಕಲವೆ. ಆ ಸೋಮಣ್ಣನ್ನ ಶ್ರೆ, ಶೋಬನ್ನ ಮಂತ್ರಿ ಮಾಡಿದ್ರೆ ಬಜೆಪಿ ಳು ತಿರುಗಿ ಬೀಳ್ತರೆ ಅಂತ ಗೊತ್ತಿದ್ದೂ ತಗಂಡ. ಮ್ರು."

ಬ ಕರಿಯಾಚಿಗೆ ವಳ್ಳೆ ಮಂತ್ರಿ ಕಂಡ್ರ" ಎಂದಳು

ಬ ಕರಿಯಾಚಿಗೆ ಅಲ್ಲ ಕಣೇ ಕರಂದ್ಲಾಜೆ. ಗೆ ಅಂತಿಯಲ್ಲ ಅವುಳೇನು ಎಡೂರಪ್ಪನ ಸೇರಿಕಂಡಿದ್ದಳೆ?"

ಸೇರಿಕಂಡಳಲ್ಲಾ, ಅದ್ಕೆ ಅಲವೆ ಹತ್ತಿಗಂಡಿರದು. ಲಂಕೆ ಹಾಳು ಅಂತ ಅವುಳ ಕಾಲಗುಣಕೆ ಯರಡ ಮಾಡಿಕಳಂಗಾಯ್ತು" ಎಂದ ಸೀರ.

ವಳ್ಳೆ ಕ್ಯಲಸಗಾತಿ ಕಣಮಾವ. ಪಂಚಾತಿ ದ್ದಾಗ ವಳೆಕ್ಯಲಸ ಮಾಡತಿದ್ಲು. ಅದ ಬುಡಿಸಿ ಬುಡಿಸಿಬುಟ್ರೂ ಅವುನ್ಯಾರೊ ಶೆಟ್ಟರ್ ಮಾಡ್ತವುರೆ. ಆ ಮುಂಡೆಮಗ ಎಲ್ಲಿದ್ದನೊ ಏನೋ ಅವುನ ಮಕನೆ ನೋಡ್ತಿಲ್ಲ."

"ಶೆಟ್ಟರ್ ಬಂದು ನಿನ್ನ ಮಕನೋಡಬೇಕಾಗಿತ್ತು ಅನ್ನು."

"ನೋಡದಲ್ಲ ಕಂದ್ಯ, ಅವುಳ ಬದ್ಲಿಗೆ ಬಂದೋನು ಅವುಳಂಗೆ ಇರಬೇಕು."

"ತಡಿರ್ಲ ಅದೇನ್ಯಡಿತು ಅಂತ ಹೇಳ್ಳ ಉಗ್ರಿ" ಎಂದ ಸೀರ.

"ಈ ಎಡೂರಪ್ಪ ತನಿಗೆ ಬೇಕಾದೋರ ಮಂತ್ರಿ ಮಾಡಿಕಂಡು ದಕ್ಕಿಸಿಗೊಂಡೆ ಅಂತ ಕೋಳಿ ಹುಂಜನಂಗೆ ಮ್ಯರಿತಿದ್ದ ಕಣಮಾವ. ಆಗ ಕಟ್ಟಾಸುಬ್ರಾ ಅನ್ನೊನ ಮಗ ಈ ಎಡೂರಪ್ಪನ ಮಗನ ಭೂಮಿ ಹಗರಣದಲ್ಲಿ ಅರೆಸ್ಟಾದ. ಆದ್ರೆ ಎಡೂರಪ್ಪನ ಮಗ ತಪ್ಪಿಸಿಗಂಡನಂತೆ. ಅದುನ್ನ ಕುಮಾರಸ್ವಾಮಿ ಬಿಗಿಯಾಗಿ ಹಿಡಕಂಡು ಮಾತಾಡಿದಾಗ ಎಡೂರಪ್ಪ ನೀವು ಅಪ್ಪಮಕ್ಕಳು ಮಾಡಿರೊ ಆಸ್ತಿ ಏಟಗಲದೆ ಅಂತ ಈಚೆಗೆ ತಗಿತಿನಿ ಅಂದನಂತೆ. ಆಗ ಕುಮಾರಣ್ಣನಿಗೆ ಹುರಿಯತ್ತಿಗತ್ತು."

"ಹತ್ತಿಗಳದಲೆ ಇದ್ದತೇ?"

"ಸರಿ, ಮಾಡ್ತಿನಿರು ಅಂತ ಎಡೂರಪ್ಪನ ಕಂಡ್ರಾಗ ದೇಯಿರೊ ಎಮ್ಮೆಲ್ಲೆಗಳು, ವಜಾ ಮಾಡಿಸಿಗಂಡಿದ್ದ ಮಂತ್ರಿಗಳು, ಯಲ್ಲಾರ್‍ನು ಕಾಂಟ್ಯಾಕ್ ಮಾಡಿ ಎಡೂರಪ್ಪನ್ನ ಕೆಡವಾನ ಅಂತ ಮಾಡಿದ್ದಿನಿ ಕೈ ಜೋಡು ಸ್ತಿರ ಅಂದ. ಮದ್ಲೆ ಅವು ತಿರುಪೆ ಬಡ್ಡೆತ್ತವು. ಸರಿ ಏಟು ಕೊಡಿ ಅಂದ್ರು. ನೀವು ಕೇಳಿದೋಟು ಕೊಡ್ತಿನಿ. ದುಡ್ಡು ಬ್ಯಾಡ ಅಂದ್ರೆ ಮುಂದಾಗೊ ಸರಕಾರ ದಲ್ಲಿ ಮಂತ್ರಿ ಮಾಡುಸ್ತಿನಿ ಅಂದ. ಅವ್ಯಲ್ಲ ಒಪ್ಪಿಗಂಡವಂತೆ. ಆ ಕೂಡ್ಲೆ ಡೆಲ್ಲಿಗೋಗಿ ಸೋನಿಯಾಗಾಂಧಿ ಭೇಟಿ ಯಾಗಿ 'ಅಕ್ಕಾರೆ, ಹಿಂಗಿಂಗೆ' ಮಾಡಕ್ಕೆ ಅಂತ ವಂಟಿದ್ದಿನಿ. ಕರ್ನಾಟಕದಲ್ಲಿರೊ ನಿಮ್ಮ ಪಾರ್ಟಿಯೋರಿಂದ ಸಪೋರ್ಟು ಕೊಡ್ಸಿ' ಅಂದನಂತೆ. ಅವುಳು 'ಆಯ್ತು ಹೇಳ್ತಿನಿ ಹೋಗು, ಅದೇ ಮಾಡು' ಅಂದಲಂತೆ."

"ಅವುಳಂಗಂದಲೆ!" ಎಂದು ಕಾಳಮಾವ ಅನುಮಾನಗೊಂಡ.

"ಅವುಳು ಒಪ್ಪಿಗಳಂಗೆ ಸಾಬರ ಗುಲಾಮನಬಿ, ಕ್ರಿಶ್ಚಿಯನ್ರ ಆಸಕರ್ರು ಮದ್ಲೆ ಹೇಳಿದ್ರಂತೆ. ಸರಿ ಕರ್ನಾಟಕಕ್ಕೆ ಬಂದ ಕುಮಾರಣ್ಣ ಸಿದರಾಮಣ್ಣನ ಕರದು 'ಹಿಂದಾದದ್ಯಲ್ಲ ಆಯ್ತು. ಮುಂದೆ ನೀನು ಮುಖ್ಯಮಂತ್ರಿ ಆಗಬೇಕು ಅಂದ್ರೆ ಅದು ಕುಂತಿತ್ತಕ್ಕೆ ಬರದಿಲ್ಲ. ನಮ್ಮ ಜ್ವತೆ ಕೈಜೋಡಸಣ್ಣ' ಅಂದನಂತೆ."

"ಏಟೇ ಆಗ್ಲಿ ಅಪ್ಪನ ಗರಡಿಲಿ ತಯಾರಾದೋನಲವೇ?" ಎಂದ ಕಾಳಮಾವ.

"ಏ ಇವುನು ಅಪ್ಪನ್ನ ಮೀರಸೊ ಗಿರಾಕಿ."

"ದ್ಯಾವೇಗೌಡ್ಯಾಕೊ ಸುಮ್ಮನವುನಲ್ಲಾ?" ಎಂದ ಸೀರ.

"ಸೂತ್ರದಾರ ನಾಟಕ ಸುರು ಮಾಡ್ಸಿ ಸುಮ್ಮನಿರತನೆ ಕಣೊ. ಅಂಗೆ ದ್ಯಾವೇಗೌಡ್ರು. ಸರಿ, ಕುಮಾರಣ್ಣ ಎಡೂರಪ್ಪನ ವಿರುದ್ಧ ತಿರುಗಿ ಬಿದ್ದೋರನ್ಯಲ್ಲ ಕಟಿಗಂಡು ತಮುಳ ನಾಡಿಗೋದ. ಅವುರ ಜ್ವತೆ ರೇಣುಕಾಚಾರಿನೂ ಹೋಗಿದ್ದ."

"ಅವುನಿಗೇನೊ ಗೂಸು ಕೊಟ್ಟು ಕಳಿಸಿದರಂತೆ ನಿಜವೆ?" ಎಂದ ಸೀರ.

"ಗೂಸಾ ಕೊಡದೇನು ಸರಿಯಾಗೇ ಕೊಟ್ಟವುರೆ. ಯಾಕೆ ಅಂದ್ರೆ ನೀವ್ಯಲ್ಲ ಸೇರಿ ನನ್ನ ಉಪಮುಖ್ಯಮಂತ್ರಿ ಮಾಡಿ ಅಂತ ಎಡೂರಪ್ಪನಿಗೇಳಿ ಅಂದನಂತೆ. ಅದ್ಕ ನಾವು ಇಲ್ಲಿಗೆ ಬಂದಿರದು ಅಂತ ಮಕ ಮುಸುಡಿ ನೋಡದಂಗೆ ಗುದ್ದಿ ಕಳಿಸಿದರಂತೆ."

"ಆ ರೇಣುಕಾಚಾರಿ ಯಾಕ್ಲ ಅಂಗಾಡ್ತನೆ?" ಎಂದಳು ಜುಮ್ಮಿ.

"ಅದು ಕ್ರಾಕ್ ಮುಂಡೆದು ಕಣೆ. ಅಂಥೋನ್ನ ಹೊನ್ನಾಳಿ ಜನ ಯರುಡು ಸರಿ ಗೆಲ್ಲಿಸ್ಯವುರೆ, ಎಡೂರಪ್ಪ ಮಂತ್ರಿ ಮಾಡ್ಯವುನೆ ಅಂದ್ರೆ ಲ್ಯಕ್ಕ ಹಾಕು. ಈ ಸರ್ಕಾರನೇ ಒಂಥರಾ ರೇಣುಕಾಚಾರಿ ತಲಿದ್ದಂಗದೆ ಕಣೆ."

"ಸುಳ್ಳು ಕಣೊ ಉಗ್ರಿ" ಎಂದುಕೊಂಡು ವಾಟಿಸ್ಸೆ ಬಂದ.

"ಇವುನೊಬ್ಬ ವಿಧಾನಸಭೆ ವಳಗಡೆಯಿಂದ ಬಂದೋನಂಗೆ ಬಂದ" ಎಂದಳು ಜುಮ್ಮಿ.

"ನನ್ನ ಥರದೋನು ವಿಧಾನಸಭೆವಳಗಡೆ ವಬ್ನು ಇಲ್ಲ ಕಣಕ್ಕ."

"ಸಿ.ಟಿ. ರವಿ?"



"ಥೂ, ಥೂ, ಅವುನು ಮಲಯಾಳಿ ಮಂತ್ರಿಕನ ಅಸಿಸ್ಟೆಂಟು ಕಣಕ್ಕ. ಅವುನಿಗೂ ನನಿಗೂ ಓಲುಸಬ್ಯಾಡ. ಇಡೀ ವಿಧಾನಸಭೆ ವಳಿಗೆ ಸಾಮಾನ್ಯ ಮತದಾರ ವಬ್ಬನೂ ಇಲ್ಲ. ಅದ್ಕೆ ಇಂತ ದಾನ್ಸಿ ನ್ಯಡಿತಾಯಿರದು."

"ಕೇಳಿದ್ದೇನು ಅಂತ ಪೂರ್ತಿ ಹೇಳಕ್ಯೇನಾಗ್ಯದ್ಲ ನಿಮಿಗೆ? ನೀನಾರ ಹೇಳ್ಳ" ಎಂದ ಕಾಳಮಾವ.

"ಹೇಳ್ತನಿರು ದೊಡಪ್ಪ. ಬಹುಮತ ತೋರದ್ಯಾಗೇ ಅಂದ್ರೆ ಅದರಲ್ಲಿ ಯರಡು ಮೂರು ಮೆತೆಡ್ಡವಂತೆ. ಒಂದು ತಲೆ ಎಣಸದು, ಎಣಿಸಿ ದ್ವನಿ ಮತ ಕೇಳದು, ಮೂರನೆದು ಓಟು ಮಾಡದು. ಇದ್ಯಾವುದ್ರಿಂದ್ಲೂ ಎಡೂರಪ್ಪನ ಸರಕಾರ ಗ್ವಾತ ಯಸಿಯದು ಗೊತ್ತಾದಾಗ ಸ್ಪೀಕರ್ ಬೋಪಣ್ಣ ಬಂದು 'ನೀವ್ಯಲ್ಲ ಎಡೂರಪ್ಪ ಸರಕಾರಕ್ಕೆ ಬೆಂಬಲ ಕೊಡ್ತಿರಲವ?' ಅಂದನಂತೆ. 'ಆಯ್ತು' ಅಂದ್ರು. ಕೂಡ್ಲೆ ಅವುನು ಪರಾರಿಯಾದನಂತೆ."

"ಅದ್ಯಾಕ್ ಪರಾರಿಯಾದ?"

"ಯಾಕೆ ಅಂದ್ರೆ, ಅಷ್ಟರಲ್ಲಿ ವಿಧಾನಸಭೆ ಗೇಟು ಮುರುದು, ಬಾಗಲ ವಡದು ಜೆಡಿಎಸ್‌ನೋರು ವಳಗಡೆ ನುಗ್ಗಿದ್ರು. ಅವುರೇನು ಮಾಡ್ತಿದ್ರಪ್ಪ ಅಂದ್ರೆ ಸ್ಪೀಕರ್ ಹಿಡಕಂಡು ನಾಕು ವದ್ದು ಸುಳ್ಳೇ ಬವುಮತ ಇದೆ ಅಂತಿಯಾ ಅಂತ ಯಳದು ಈಚೆಗಾಕೋರು."

"ಅಂಗರಂಗೆ ಮಾಡೋರೆ?"

"ಊ ದ್ವಡಪ್ಪ, ಆಗ ಧರಮುಸಿಂಗನ ಸರಕಾರ ಕೆಡುಗುವಾಗ ಯಾರೂ ಕೂಗಾಡಲಿಲ್ಲ. ಯಲ್ಲ ಸೈಲೆಂಟಾಗಿ ನ್ಯಡದೋಯ್ತು. ಆದ್ರೆ ಬಿಜೆಪಿಗಳ ಕೆಡೂದು ಅಷ್ಟು ಸುಲಬಲ್ಲ. ಅವುನ್ನ ತೀರಾ ಭಂಡ ಜನ. ಬಿಜೆಪಿ ಅಂದ್ರೇನು ಗೊತ್ತೆ ದ್ವಡಪ್ಪ? ಭಂಡ ಜನರ ಪಾರ್ಟಿ. ಅವುನ್ನ ಸಪೋರ್ಟು ಮಾಡೋರು ಎಲೆಲ್ಯವುರೆ ಅಂತಿ? ಪೇಪರ್‌ನಲ್ಲವುರೆ, ಟಿ.ವಿ. ವಳಗಡೆ ಅವುರೆ, ನನ್ನ ನಿನ್ನ ನಡುವೆನೂ ಇರಬವುದು."

"ಇಲ್ಯಾರಿದ್ದರ್ಲ ಅಂಗಂತಿಯಲ್ಲಾ?" ಎಂದಳು ಜುಮ್ಮಿ ಸಿಟ್ಟಿನಿಂದ.

"ಈಗಿಲ್ದೆಯಿದ್ರು ಮುಂದಾಗಬವುದು ಕಣಕ್ಕ. ಬಿಜೆಪಿ ಸದಸ್ಯರ್ಯಲ್ಲ ಸೇರಿ ನಿನ್ನ ಅಧ್ಯಕ್ಷೆ ಮಾಡ್ತಿನಿ ಅಂದ್ರೆ ನೀನು ಇದ್ದಕ್ಕಿದ್ದಂಗೆ ಚಂದ್ರೇಗೌಡನಂಗೆ ಮಾತಾಡಕ್ಕೆ ಶುರುಮಾಡ್ತಿ."

"ಚಂದ್ರೇಗೌಡ್ಯಾರ್ಲ?"

"ಅದೇ ಚಿಕ್ಕಮಗಳೂರೋನೊಬ್ಬ ಇಂದ್ರಾ ಗಾಂಧಿ ಸಾಕು ಮಗನಂಗಾಡತಿದ್ನಲ್ಲಾ? ಅವ್ರು ನೀಗ ಯಂಗೆ ಮಾತಾಡ್ತನೆ ಅಂದ್ರೇ ಬಿಜೆಪಿ ಸ್ಥಾಪನೆ ಮಾಡಿದೋರ ಪೈಕಿ ಅವನೂ ವಬ್ಬ ಅನ್ನಂಗಾಡ್ತನೆ."

"ಅವುನು ಬಿಜೆಪಿ ಪಾರ್ಟಿಯಿಂದ ಟಿಕೆಟ್ ತಗಂಡು ಎಂ.ಪಿ. ಆಗಿರೋನು. ಇನ್ನಂಗೆ ಮಾತಾಡ್ತನೆೊ? ಕಾಂಗ್ರೆಸ್ ಪರ ಮಾತಾಡಕ್ಕಾದತೇ?"

"ಏನಾರ ಮಾತಾಡಿಕಂಡು ಹಾಳುಬಿದ್ದೊಗ್ಲಿ. ಅಂತೂ ಕರ್ನಾಟಕದ ಮೂರೂ ಪಾರ್ಟಿ ಹಾಳುಬಿದ್ದೋದೊ ದ್ವಡಪ್ಪ. ಯಲ್ಲಾ ಪಾರ್ಟಿ ಯೋರು ಒಂದೇ ತರ ಮಾತಾಡ್ತ ಅವುರೆ. ಮುಂದೆ ಯಾರೇ ಸರಕಾರ ಮಾಡಿದ್ರೂ ಜನ ನೆಮ್ಮದಿಯಾಗಿ ಇರಕ್ಕೆ ಸಾಧ್ಯವೇಯಿಲ್ಲ. ಯತ್ತ ಮುಂದಾಗಿ ಯೋಚನೆ ಮಾಡಿದ್ರೂ ಎಡೂರಪ್ಪ ನಂತ ಸರಕಾರ ಮುಂದೆ ಬರಕ್ಕೆ ಸಾಧ್ಯವೇಯಿಲ್ಲವೇನೊ."


"ಅಂಗಂತಿಯಾ?"

"ಎಸ್ ದ್ವಪನೆಟ್ರು. ಪಾಪ ಎಡೂರಪ್ಪ ಇದ್ದಕಂಡೋಗ್ಲಿ ಯಂಗೊ ಆಡಳಿತ ನ್ಯಡುಸ್ತಯಿದ್ದ. ಪ್ರಾಮಾಣಿಕ, ಧರ್ಮವಂತ, ನೀತಿವಂತ ಅನ್ನೊ ಒಂದೇ ಒಂದು ಹುಳ ಈ ಕರ್ನಾಟಕದಲ್ಲಿ ಇಲ್ಲವಲ್ಲಾ, ಇನ್ಯಾಂಥ ಅಪರೂಪದ ಲೀಡ್ರು ನಮ್ಮ ಯಡ್ಡಿ ಅಂತ."

"ನೀನಂಗಂತಿ. ಶೋಬಾ ಕರಂದ್ಲಾಜೆ, ಸೋಮಣ್ಣನ ಕೇಳಿದ್ರೆ ಎಡೂರಪ್ಪನಂಥ ಲೀಡ್ರೆ ಇಲ್ಲ ದೇಸದಲ್ಲಿ ಅಂತರೆ ಗೊತ್ತೆ?" ಎಂದ ಉಗ್ರಿ.

"ವಂಡರ್‌ಫುಲ್!" ಎಂದ ವಾಟಿಸ್ಸೆ. ●


ರಡೋನಾ



ಸ್ಟೆಫಿ ಗ್ರಾಫ್ ಮೊದಲ ಹೆಜ್ಜೆಯಲ್ಲೇ ಬಿದ್ದುಹೋಗುವುದನ್ನು ಯಾರೂ ನಿರೀಕ್ಷಿಸಿರಲಿಲ್ಲ, ಸಾಂಪ್ರಾಸ್‌ನಷ್ಟೇ ಉತ್ತಮ ಆಟಗಾರ ಜಿಮ್ ಕೊರಿಯರ್ ಸೆಮಿಫೈನಲ್ಸ್ ತಲುಪಲಾಗಲಿಲ್ಲ, ನಿರೀಕ್ಷಿಸಿದ್ದಂತೆ ಸ್ಟಿಫನ್ ಎಡ್‌ಬರ್ಗ್‌ನ ವಯಸ್ಸು ಅವನನ್ನು ನಿಧಾನಗೊಳಿಸಿತು. ಕೇವಲ 26 ವರ್ಷದ ಬೋರಿಸ್ ಬೆಕ್ಕರ್ ಈಚಿನ ಹುಡುಗರೆದುರು ಭಾರವಾದಂತೆ, ಸ್ಫೂರ್ತಿ ಕಳೆದುಕೊಂಡಂತೆ ಕಂಡುಬರುತ್ತಿದ್ದಾನೆ. ಈತ ಮೊನ್ನೆ ಸೆಮಿಫೈನಲ್ಸ್‌ನಲ್ಲಿ ಸೋತಾಗ ಬೇಸರವಾಯಿತು. ಹಾಗೆಯೇ ಫುಟ್‌ಬಾಲ್‌ನಲ್ಲಿ ಕೊಲಂಬಿಯಾ, ಅರ್ಜೆಂಟಿನಾ, ಹಾಲೆಂಡ್. ಎಲ್ಲಕ್ಕಿಂತ ವಿಷಾದಕರ ಮರಡೋನಾಗೆ ಆದದ್ದು.

ಅಂತರರಾಷ್ಟ್ರೀಯ ಮಟ್ಟದ ಕ್ರೀಡೆ ಇವತ್ತು ತಮಾಷೆಯಾಗಿ, ಹುಡುಗಾಟವಾಗಿ ಉಳಿದಿಲ್ಲ. ವಿಂಬಲ್ಡನ್‌ನಲ್ಲಿ ಭಾಗವಹಿಸುವ ಹುಡುಗರೆಲ್ಲ ಹೆಚ್ಚುಕಮ್ಮಿ ಒಂದೇ ಮಟ್ಟದವರು; ಹುಡುಗಿಯರೂ ಅಷ್ಟೆ. ಗಾಳಿಯ ವೇಗ, ತಂಪು, ಬಿಸಿ ಬದಲಾದರೂ ಯಾರು ಬೇಕಾದರೂ ಗೆಲ್ಲಬಹುದು. ಕುದುರೆಯ ಜೂಜಿನಂತೆ. ಹ್ಯಾಂಡಿಕ್ಯಾಪ್ ಗುಟ್ಟೇ ಅದು. ಎಲ್ಲರಿಗೂ ಸಮಾನ ಅವಕಾಶ ಕೊಡುವುದಕ್ಕಾಗಿ ತೂಕ ಹೇರಿರುತ್ತಾರೆ. ಯಾರು ಈ ತೂಕವನ್ನು ನಿರ್ಲಕ್ಷಿಸಬಲ್ಲರೋ ಅವರು ಆಕಸ್ಮಿಕವೆಂಬಂತೆ ಗೆಲ್ಲುತ್ತಾರೆ.

ಎಲ್ಲಕ್ಕಿಂತ ನೋವು ತರುವಂಥಾದ್ದು ಅರ್ಜೆಂಟಿನಾದ ಫುಟ್‌ಬಾಲ್ ಕ್ಯಾಪ್ಟನ್ ಮರಡೋನಾಗೆ ಆಗಿರುವುದು. ಈತ ಅಸಮಾನ್ಯ ಆಟಗಾರ; ಫುಟ್‌ಬಾಲ್‌ಗೆ ಅಪಾರ ಜನಪ್ರಿಯತೆ, ಖುಷಿ, ಹಣ ಎಲ್ಲವನ್ನೂ ತಂದುಕೊಟ್ಟವನು. ಈತ ಗಾಂಜಾ ತೆಗೆದುಕೊಳ್ಳುವುದಾಗಿ ಎರಡು ವರ್ಷ ಗೋಳು ಹೊಯ್ದುಕೊಂಡರು; ಈಗ ಅದರಿಂದೆಲ್ಲ ಚೇತರಿಸಿಕೊಳ್ಳುವಾಗ ಅವನಿಗೆ ಅಡ್ಡಗಾಲು ಹಾಕಿ ಡಿಸ್‌ಮಿಸ್ ಮಾಡಿದರು.




ಆಟದ ಶಕ್ತಿ ಹೆಚ್ಚಿಸುವಂಥ ಮದ್ದಾಗಿದ್ದರೆ, ಮೋಸ ಮಾಡುವ ಉದ್ದೇಶದಿಂದ ತೆಗೆದುಕೊಂಡ ಡ್ರಗ್ ಆಗಿದ್ದರೆ ಶಿಕ್ಷೆ ಸರಿ. ಆದರೆ ಆತ ತನ್ನ ಹುಮ್ಮಸ್ಸಿಗಾಗಿ, ತನ್ನ ಏಕಾಂಗಿತನ ತೊಡೆಯುವುದಕ್ಕಾಗಿ ತೆಗೆದುಕೊಂಡದಕ್ಕೆ ಶಿಕ್ಷೆ ಕೊಡುವುದು, ಆತ ನಿವೃತ್ತಿಯ ಹೊಸಿಲಲ್ಲಿ ಹೊಸ ಸ್ಫೂರ್ತಿಯಿಂದ ಆಡುತ್ತಿರುವಾಗ ಕಾಲುಕೊಟ್ಟು ಬೀಳಿಸುವುದು, ಕೊಳಚೆ ಪ್ರದೇಶದಿಂದ ಬಂದು ಅಪ್ರತಿಮ ಹೀರೋ ಆದ ಮುಗ್ಧ ಮರಡೋನಾ ಬಗ್ಗೆ ದಯೆ, ದಾಕ್ಷಿಣ್ಯ ಇಲ್ಲದೆ ವರ್ತಿಸುವುದು–ನಿಜಕ್ಕೂ ಅಕ್ಷಮ್ಯ. ಎಲ್ಲ ಕ್ರೀಡೆಯ ಆಳದಲ್ಲಿ ಸ್ನೇಹ, ಕ್ಷಮೆ, ಪ್ರೀತಿ ಇರುತ್ತವೆ; ಕೊಟ್ಟುಕೊಳ್ಳುವ ಔದಾರ್ಯ ಇರುತ್ತದೆ. ಇದರಲ್ಲಿ ಒಂದಂಶವನ್ನಾದರೂ ನಾವು ನಮ್ಮನ್ನು ರೋಮಾಂಚನಗೊಳಿಸಿದ ಹೀರೋ ಬಗ್ಗೆ ತೋರಲಾರದೆ ಹೋದರೆ ನಾವು ಸ್ಮಶಾನ ಹೃದಯದ ಕೃಪಣರು. ಈ ಕೃಪಣತೆ ಇದ್ದಲ್ಲಿ ಮೋಸ, ಹಿಂಸೆ, ರಕ್ತಪಾತ ಇರುತ್ತವೆ. ಕ್ರೀಡೆ ಎಂಬುದು ಆಟವಾಗಿ ಉಳಿಯದೆ ಕಿತ್ತಾಟವಾಗುತ್ತದೆ. ಇದನ್ನು ಅಂತರರಾಷ್ಟ್ರೀಯ ಫುಟ್‌ಬಾಲ್ ಸಂಸ್ಥೆ ಮರೆತದ್ದು ತಪ್ಪು.

–ಜುಲೈ 13, 1994

ದೇವರು-ಮಾಟ ಯಡ್ಡಿ ಉಳಿಸಿತು!

ಮೊನ್ನೆ ವಿಧಾನಸಭಾ ಅಧಿವೇಶನ ನಡೀತು. ಮುಖ್ಯಮಂತ್ರಿಯವರು ತಮಗಿರುವ ಬಹುಮತ ಸಾಬೀತುಪಡಿಸಲು ನಡೆದಿದ್ದು ಅದು. ಅದು ಹೇಗಿತ್ತು ಅಂದರೆ 'ಪ್ರಾರಂಭ ಆಯಿತು', 'ಮುಗಿಯಿತು' ಅನ್ನುವ ಹಾಗಿತ್ತು. ಒಂದು ಸಲ ಬೆಂಗಳೂರಿನಿಂದ ಮೈಸೂರಿಗೆ ಕೆಲವರು ವಿಮಾನದಲ್ಲಿ ಹಾರಿದ್ದರಂತೆ. 'ಹೆಂಗಿತ್ತು ವಿಮಾನಯಾನ' ಅಂತ ಯಾರನ್ನೋ ಕೇಳಿದ್ದಕ್ಕೆ 'ಇನ್ನೂ ಸರಿಯಾಗಿ ಕುಂತೇ ಇರ್ಲಿಲ್ಲ, ಆಗ್ಲೆ ಇಳೀರಿ ಅಂದ್ರು' ಅಂದರಂತೆ ಅವರು! ಅಧಿವೇಶನವೂ ಥೇಟ್ ಅದೇ ರೀತಿ ಇತ್ತು. ಮುಖ್ಯಮಂತ್ರಿಯವರು ಅಧಿವೇಶನಕ್ಕೆ

ಅಣಕ



▶ ಎಚ್.ಎಲ್. ಕೇಶವಮೂರ್ತಿ

ಬಂದರು. 'ನನ್ನ ಸರ್ಕಾರಕ್ಕೆ ಬಹುಮತ ಇದೆಎಂಬ ಗೊತ್ತುವಳಿಯನ್ನು ಮಂಡಿಸಲು ಅವಕಾಶ ಕೋರುತ್ತೀನಿ' ಅಂದರು. ಸ್ಪೀಕರ್ 'ಅನುಮತಿ ನೀಡಲಾಗಿದೆ' ಅಂದರು. ಒಂದು ಸಾಲಿನ ಗೊತ್ತುವಳಿ ಮಂಡಿಸಿದರು. 'ಧ್ವನಿ ಮತದ ಮೂಲಕ' ಬಹುಮತ ಇದೆ ಎಂದು ಸ್ಪೀಕರ್ ಅವರು ಸಾರಿದರು. ಆಮೇಲೆ ಸದನವನ್ನು ಅನಿರ್ದಿಷ್ಟ ಕಾಲ ಮುಂದೂಡಿದರು. ಹೀಗೆ ಅವರು ಕೇಳಿರಬಹುದು, ಇವರು ಒಪ್ಪಿಗೆ ನೀಡಿರಬಹುದು ಎಂಬುದು ಊಹೆ ಮಾತ್ರ!

ಎಂತಹ ಅದ್ಭುತ! ಪವಾಡ ಒಂದು ಜರುಗಿತ್ತು!


ಅಧಿವೇಶನ ನಡೆಯುವ ಸಭಾಂಗಣದಲ್ಲಿ ಶಿಸ್ತು ಕಾಪಾಡಲು ಕೇವಲ ಬಿಳಿ ಸಮವಸ್ತ್ರದ ಮಾರ್ಷಲ್‌ಗಳು ಮಾತ್ರ ಇರ್ತಾರೆ ಎಂದು ನಂಬಿದ್ದೆವು. ಊಹುಂ. ಖಾಕಿ ಪೊಲೀಸ್ನೋರೂ ಅಲ್ಲಿದ್ದರು. ಇವರು ಯಾಕೆ ಇಲ್ಲಿ ಬಂದರೂ ಅಂತ ಯೋಚಿಸಿದಾಗ ಕಳ್ಳರು ಕಾಕರು, ಪುಂಡು ಪೋಲಿಗಳು, ರೌಡಿಗಳು ಭೂಗಳ್ಳರು ಇಂತಹವರೇ ಶಾಸಕರಾಗುತ್ತಿರುವ ಇತ್ತೀಚಿನ ದಿನಗಳಲ್ಲಿ 'ಇವತ್ತು ಇಲ್ಲಿಗೆ ಬಂದೇ ಬರ್ತಾನೆ ಅರೆಸ್ಟ್ ಮಾಡಾನ' ಅಂತ ಬಂದಿರಬಹುದು ಅನ್ನೋದು ಹೊಳೀತು. ಪೊಲೀಸ್ ಮುಖ್ಯಸ್ಥರೇ ಸಮವಸ್ತ್ರದಲ್ಲಿ ಠಳಾಯಿಸುತ್ತಿರಬೇಕಾದರೆ ಯಾವುದೋ ಖದೀಮ ಕುಳಾನೆ ಹಿಡಿಯುವುದಕ್ಕೆ ಬಂದಿದ್ದಾರೆ, 'ಯಾರಿರಬಹುದು ಈ ಕುಳ' ಅನ್ನುವ ತೀವ್ರ ಕುತೂಹಲದಿಂದ ಟಿವಿ ಎದುರು ಕುಳಿತಿದ್ದೊ. ಆದರೇನು ಪವಾಡನೋ ಏನೋ ಕತೆಯೋ, ಇಂತಹವುಗಳನ್ನೆಲ್ಲ ಮೈಯೆಲ್ಲಾ ಕಣ್ಣಾಗಿ ನೋಡೋ ಸಿ.ಟಿ. ರವಿ ಅಂತಹ ಸಿ.ಟಿ. ರವಿ ಗಮನಕ್ಕೇ ಸಮವಸ್ತ್ರ ಧರಿಸಿದ ಪೊಲೀಸ್ನೋರು ಸಭಾಂಗಣದ ಒಳಕ್ಕೆ ನುಗ್ಗಿರೋದು ಬರಲಿಲ್ಲವಂತೆ!

ಇರಲಿ. ಅಧಿವೇಶನ ಹತ್ತು ಗಂಟೆಗೆ ಪ್ರಾರಂಭ ಆಯಿತಲ್ಲ, ಸಭಾಂಗಣ ಹೇಗಿತ್ತು ಅಂದರೆ ಕೆಲವರು 'ಫಿಶ್ ಮಾರ್ಕೆಟ್ ತರಹ ಇತ್ತು' ಎನ್ನುತ್ತಾರೆ. ಟಿವಿಯವರ ಮಾತನ್ನೇ ನಂಬುವುದಾದರೆ ಅದು ರಣರಂಗವಾಗಿತ್ತು ಅನ್ನಬಹುದು. ರಣರಂಗ ನೋಡಿಲ್ಲ, ಅಲ್ಲಿನ ವಾತಾವರಣ ಹೇಗಿರುತ್ತೋ ಗೊತ್ತಿಲ್ಲ, ಮೀನು ಮಾರುಕಟ್ಟೆ ನೋಡಿದೀನಿ. ಗಲಾಟೆ ಇರುತ್ತೆ ನಿಜ. ಆದರೆ ಒಬ್ಬರ ಮಾತು ಇನ್ನೊಬ್ಬರಿಗೆ ಕೇಳುವಷ್ಟಾದರೂ ಸಹನೀಯವಾಗಿರುತ್ತೆ, ಇಲ್ಲದಿದ್ದರೆ ವ್ಯವಹಾರ ಕುದುರುವುದು ಹೇಗೆ? ಆದರೆ ಇಲ್ಲಿ ಒಬ್ಬರ ಮಾತು ಇನ್ನೊಬ್ಬರಿಗೆ ಕೇಳಿಸುತ್ತಿರಲಿಲ್ಲ, ಅಷ್ಟೊಂದು ಶಬ್ದ. ಸತ್ಯ ಹೇಳಬೇಕೆಂದರೆ ಅದು ರಣಾಂಗಣದ ತರಹವೂ ಇರಲಿಲ್ಲ, ಫಿಷ್ ಮಾರ್ಕೆಟ್ ತರಹವೂ ಇರಲಿಲ್ಲ. ಅದು ಥೇಟ್ 'ವಿಧಾನಸಭೆಯ ಹಾಗಿತ್ತು!' ಪರಿಸ್ಥಿತಿ ಹೀಗಿದ್ದರೂ ಸಭಾಪತಿ ಸಾಹೇಬರು 'ಧ್ವನಿ' ಮತದ ಮೂಲಕ ಸರ್ಕಾರಕ್ಕೆ ಬಹುಮತ ಇದೆ ಎಂಬುದನ್ನು ಗ್ರಹಿಸಿದ್ದೂ ಅಲ್ಲದೆ ಒಂದುನೂರ ಆರು ಧ್ವನಿಗಳು ಪರವಾಗಿವೆ ಎಂಬುದನ್ನು ಗುರುತಿಸಿದ್ದು ಪವಾಡವೇ ಸರಿ! ನಮ್ಮ ಕಡೆ ಹಕ್ಕಿಪಿಕ್ಕರು ಎಂಬ ಜನಾಂಗ ಇದೆ. ಹಕ್ಕಿ ಹಿಡಿದು ಮಾರಾಟ ಮಾಡುವುದು ಅವರ ಕಸುಬು. ಅವನ್ನು ಹಿಡಿಯಲು ಇವರು ಆ ಹಕ್ಕಿಯ ರೀತಿಯಲ್ಲೇ ಕೂಗುತ್ತಾರೆ. ಗಂಡು ಹಕ್ಕಿ ಹಿಡಿಯಬೇಕಾದರೆ ಹೆಣ್ಣು ಹಕ್ಕಿಯ ರೀತಿ, ಹೆಣ್ಣು ಹಕ್ಕಿ ಹಿಡಿಯಬೇಕಾದರೆ ಗಂಡು ಹಕ್ಕಿ ರೀತಿ ಶಬ್ದ ಹೊರಹಾಕುತ್ತಾರೆ. ತನ್ನ ವಿರುದ್ಧ ಲಿಂಗಿ ಹಕ್ಕಿಯ ಕೂಗು ಎಂದು ಭ್ರಮಿಸಿ ಬರುವ ಹಕ್ಕಿಗಳನ್ನು ಮೆಳೆಯ ಹಿಂದೆ ಕುಳಿತ ಬೇಟೆಗಾರರು ಬಲೆ ಬೀಸಿ ಹಿಡಿಯುತ್ತಾರೆ. ಇಂತಹ 'ಧ್ವನಿ ಗ್ರಹಣ' ಶಕ್ತಿ ಸನ್ಮಾನ್ಯ ಸಭಾಧ್ಯಕ್ಷರಿಗಿರಬಹುದು. ಒಂದುನೂರ ಆರು ಬಿಜೆಪಿ ಧ್ವನಿಯನ್ನು ಶಬ್ದ, ಗದ್ದಲ, ಗಲಭೆಗಳ ನಡುವೆಯೂ ಕೇಳಿಸಿಕೊಂಡಿರುವುದು ಪವಾಡವೇ ಸೈ!

ಆ ದಯಾಮಯನಾದ ಪರಮಾತ್ಮ ಇಂತಹ ಪವಾಡ ಸದೃಶ ಶಕ್ತಿಯನ್ನು ಹಾಲಿ ಸಭಾಧ್ಯಕ್ಷರಿಗೆ ಮಾತ್ರ ನೀಡಿದ್ದಾನೆಂದು ಯಾರೂ ಭಾವಿಸಬೇಕಾದ ಪ್ರಮೇಯವಿಲ್ಲ, ಭಾರತೀಯ ಜನತಾದಳದ ಒಂದು ಪೆದ್ದ ಕೂಸು ಆ ಸ್ಥಾನವನ್ನಲಂಕರಿಸಿದ್ದರೂ ಅನುಗ್ರಹಿತ ವಾಗುತ್ತಿತ್ತು ಎಂಬುದನ್ನು ಮರೆಯಬಾರದು. ಏಕೆಂದರೆ ದೇವರಲ್ಲಿ ಅಪಾರ ಶ್ರದ್ಧೆ ನಂಬಿಕೆ ಇರುವ ಜನರಿರುವ ಪಕ್ಷ ಅದು. ಉದಾಹರಣೆಗೆ ನೋಡುವು ದಾದರೆ.....

ಭಾಜಪ ರಾಜ್ಯಾಧ್ಯಕ್ಷ ಸನ್ಮಾನ್ಯ ಕೆ.ಎಸ್. ಈಶ್ವರಪ್ಪನವರನ್ನೇ ಪರಿಗಣಿಸೋಣ. ತಮ್ಮ ಪಕ್ಷ ಇತರೆ ಪಕ್ಷದ ಶಾಸಕರನ್ನು ಸೆಳೆಯಲು ಇಪ್ಪತ್ತು ಕೋಟಿ ಮೂವತ್ತು ಕೋಟಿ ಆಮಿಷ ಒಡ್ಡಿದೆ ಎಂಬ ವೃಥಾರೋಪ ಮಾಡಲಾಗುತ್ತಿತ್ತಲ್ಲ... ಗೆಲುವಿನ ಸಂಕೇತವಾಗಿ ತೋರುಬೆರಳು, ಮಧ್ಯದ ಬೆರಳನ್ನು ಎತ್ತಿ ಹಿಡಿಯುವ ಪದ್ಧತಿಯನ್ನೇ ಅದು ಗೆಲುವಿನ ಸಂಕೇತ ಅಲ್ಲ ಇಪ್ಪತ್ತು ಕೋಟಿ ಎಂದರ್ಥ ಎಂದೆಲ್ಲ ವ್ಯಂಗ್ಯ ಚಿತ್ರ ಬರೆದು ಮಾಧ್ಯಮಗಳು ಹಂಗಿಸಿದವಲ್ಲ... ಸನ್ಮಾನ್ಯ ಈಶ್ವರಪ್ಪನವರು ಪತ್ರಿಕಾ ಗೋಷ್ಠಿ ಕರೆದರು. ತಮ್ಮ ಮಾತಿಗೆ ಸಾಕ್ಷಿಯಾಗಿ ದೇವರನ್ನು ತಂದರು. ದೇವರ ಮೇಲೆ ಆಣೆ ಇಟ್ಟರು. 'ಯಾರಿಗೂ ಒಂದು ರೂಪಾಯಿಯನ್ನು ಕೊಟ್ಟಿಲ್ಲ' ಅಂದರು. ನಾಗರಹಾವು ದೇವರು ಅಂತ ಒಪ್ತೀವಿ. ಈಶ್ವರನ ಕಂಠಾಭರಣವಾದ ನಾಗಪ್ಪನ ಮಾದರಿಯಲ್ಲೇ ಪದೇಪದೇ ನಾಲಿಗೆ ಹೊರ ಚಾಚುತ್ತಾ ಹೇಳಿದ ಈಶ್ವರಪ್ಪನವರ ಮಾತುಗಳು ಅಂದರೆ ಥೇಟ್ ನಾಗಪ್ಪನ ಮಾತುಗಳೇ ಸೈ!

ಇನ್ನು ಮುಖ್ಯಮಂತ್ರಿಗಳು. ಗುರುಗಳು, ಗುರುಮಠಗಳು ಅಂದರೆ ಅವರಿಗೆ ಆಪ್ಯಾಯಮಾನ. ಭಕ್ತ ದೇವರ ನಡುವಿನ ಕೊಂಡಿ ಇದು ಎನ್ನುವುದನ್ನು ತಿಳಿದಿರುವವರು. ಅವಕ್ಕೆ ಕೋಟ್ಯಾನು ರೂಪಾಯಿಗಳ ದೇಣಿಗೆ ನೀಡಿದವರು. ಅದು ಸರ್ಕಾರದ ಬೊಕ್ಕಸದ ಹಣವೇ ಇರಬಹುದು. ಮನೆಯ ಹಣ ಅಲ್ಲ ಎಂಬುದು ನಿಜ. ಕೊಡುವ ಉದಾರ ಮನಸ್ಸು ಬೇಕಲ್ಲಾ... ಅದು ಇರುವುದು ಇವರಿಗೆ! ಹೀಗೆ ನೀಡಿ ಶಾಲು ಹೊದಿಸಿಕೊಂಡು, ಹೊಗಳಿಕಾಶೀರ್ವಾದ ಪಡೆದಿರುವ ಸನ್ಮಾನ್ಯರು, ಅಷ್ಟಕ್ಕೇ ತೃಪ್ತರಾಗಿಲ್ಲ, ತಮ್ಮ ಬಿಡುವಿಲ್ಲದ ಕಾರ್ಯಕ್ರಮಗಳ ನಡುವೆಯೂ ಕೇರಳದ ದೇವರುಗಳಿಗೆ ಪೂಜೆ ಸಲ್ಲಿಸಿ ಬಂದಿದ್ದಾರೆ. ಇಲ್ಲಿ ಇನ್ನೊಂದನ್ನ ಮರೆಯಬಾರದು. ಸನ್ಮಾನ್ಯರು ಮುಖ್ಯಮಂತ್ರಿಗಳಾಗಿದ್ದಾಗ ದೇವಸ್ಥಾನಕ್ಕೆ ಒಂದು ಆನೆಯನ್ನು ದಾನ ಮಾಡಿದ್ದರು. ಆನೆಯನ್ನೇ ಯಾಕೆ ದಾನ ಮಾಡಿದರು ಅಂದರೆ.... ಆನೆ ಎಂದರೆ ಅದು ಆನೆ ಅಲ್ಲ, ವಿಷ್ಣು ಭಕ್ತ ಇಂದ್ರದ್ಯುಮ್ನ! ಪಾಪ ಇವನು ವಿಷ್ಣು ಪೂಜೆಯಲ್ಲಿ ಮಗ್ನನಾಗಿದ್ದಾಗ ಅಗಸ್ತ್ಯ ಮಹರ್ಷಿ ಬಂದನಂತೆ. ಆಗ ಈ ಮಹರ್ಷಿನ ಅವನು ಗೌರವದಿಂದ ಕಾಣಲಿಲ್ಲವಂತೆ. ಸಾಕಲ್ಲಾ... 'ನೀನು ಆನೆಯಾಗು' ಎಂದು ಶಾಪ ನೀಡಿದರಂತೆ. ಆ ಆನೆ ನೀರು ಕುಡಿಯೋಕೆ ಎಂದು ಒಂದು ಕೊಳಕ್ಕೆ ಹೋಯಿತಂತೆ.



ಅಲ್ಲಿ ಒಂದು ಮೊಸಳೆ ಅದರ ಕಾಲು ಹಿಡೀತಂತೆ. ಪೂರ್ವಜನ್ಮ ಸಂಸ್ಕಾರ ಇತ್ತಲ್ಲಾ, ಅದು ದಿಢೀರ್ ಅಂತ ಬಂತಂತೆ. ವಿಷ್ಣುನ ಧ್ಯಾನಿಸಿದನಂತೆ. ವಿಷ್ಣು ಪ್ರತ್ಯಕ್ಷ ಆಗಿ ಮೊಸಳೇನ ಕೊಂದನಂತೆ. ಅದೂ ಅಲ್ಲದೆ ವಿಘ್ನ ನಿವಾರಕ ಗಣೇಶನ ತಲೆಯೇ ಆನೆ ತಲೆ ಅಲ್ಲವಾ...ಅದಕ್ಕೇ ಆನೆಯನ್ನು ದಾನ ಮಾಡಿದ್ದರು ಸನ್ಮಾನ್ಯರು. ದೇವಸ್ಥಾನಕ್ಕೆ ಹೋದಾಗ ಈ ಆನೆ ನೆನಪಾಯಿತು. ಪೂರ್ವಜನ್ಮದ ಸಂಸ್ಕಾರ ಇರಬೇಕು! ಅದರ ಆರೋಗ್ಯ ವಿಚಾರಿಸಿದರು. ಅದು ಸೌಖ್ಯವಾಗೇ ಇತ್ತು, ಆದರೆ ಅದನ್ನು ಸಾಕೋ ಖರ್ಚು ವಿಪರೀತ ಬರ್ತಿತ್ತು. ಅದನ್ನು ತಿಳಿದ ತಕ್ಷಣ ಯಡ್ಯೂರಪ್ಪನವರು ತಮ್ಮ ಬೆಂಬಲಿಗರೊಬ್ಬರಿಗೆ ಹೇಳಿ ಅದೆಷ್ಟೋ ಲಕ್ಷ ಕೊಡಿಸಿದರು! ಇದು ಆಯಿತಲ್ಲಾ. ಕೇವಲ ಕೇರಳದ ದೇವರಿಗೆ ಅಡ್ಡಬಿದ್ದರೆ ಸಾಲದು ಎಂದು ಬೆಂಗಳೂರಿನ ದೇವಸ್ಥಾನಗಳಿಗೂ ಹೋದರು. ಅನಿಷ್ಟ ಹತ್ತಿರ ಸುಳಿಯದೇ ಇರಲಿ ಅಂತ ತಾಯಿತ ಕಟ್ಟಿಸಿಕೊಂಡು ಬಂದರು. ಇಂತಹ ಭಕ್ತನನ್ನು ದೇವರು ಮರೆಯುತ್ತಾನಾ.

ಕಾಯ್ದೇ ಕಾಯ್ತಾನೆ... ಒಂದೊಂದು ಸಲ ದೇವರ ದುರ್ಬಳ[...] ಆಗಬಹುದು. ದೇವರಾಣೆ ನನ್ನ ಮಗನ್ನ ಪಾರ್ಲಿಮೆಂಟ[...] ಚುನಾವಣೆಗೆ ನಿಲ್ಲಸಲ್ಲ ಅಂದಿದ್ರು, ನಿಲ್ಸಿದ್ರು. ಹೀಗಾಗುತ[...] ಆದರೆ ದೇವರ ಮೇಲೆ ಕೋಟಿಗಟ್ಟಳೆ ಹಣ ಸುರಿ[...] ಮೇಲೆ ಆ ದೇವರಾದ ದೇವರೂ ಇಂತಹ ಸಣ್ಣಪುಟ[...] ದೋಷಗಳನ್ನು ಮರೀತಾನೆ ಅಲ್ವಾ....

ದೊಡ್ಡವರು ಬಿಡಿ. ರೇಣುಕಾಚಾರ್ಯರಂತಹವರು[...] ದೇವರನ್ನು ಬಿಡಲ್ಲ, 'ಭಗವಂತನಾಣೆಗೂ ನಾನು ಭಾಜ[...] ಸರ್ಕಾರ ಉರುಳಿಸೋಲ್ಲ' ಅಂತಾರೆ. ಹಿಂದಿನ ದಿವ[...] ಇದಕ್ಕೆ ವಿರುದ್ಧ ಹೇಳಿದ್ದರಲ್ಲಾ ಅಂದರೆ... ಅವತ್ತಿನ ಮಾತು[...] ಅವತ್ತಿಗೆ....!

ದೇವಾನುದೇವತೆಗಳೇನೋ ಯಡ್ಯೂರಪ್ಪನವರ ಹಣ[...] ಸೇವೆಯಿಂದ ತೃಪ್ತಿಗೊಂಡಿದ್ದರು. ಆದರೆ ಸೂರ್ಯ ಯಾಕೊ[...] ಇವರ ಮೇಲೆ ಕೋಪಗೊಂಡಿದ್ದನಂತೆ. ಇದನ್ನು ಜ್ಯೋತಿ[...] ಪತ್ತೆ ಹಚ್ಚಿದನಂತೆ. ಅವನು ಸಿಟ್ಟು ಮಾಡಿಕೊಂಡಿದ್ದಾ[...] ಅಂತ ಸುಮ್ಮನಿರಲು ಸಾಧ್ಯವಾ... ಇದೊಂದು ದೋ[...] ಅಂದಮೇಲೆ ಪರಿಹಾರಾನೂ ಇರ್ಲೇಬೇಕು. ಸೂಯ[...] ಹುಟ್ಟುವುದು ಪೂರ್ವ ದಿಕ್ಕಿನಲ್ಲಿ ತಾನೆ. ಅದಕ್ಕೇ 'ಪೂವ[...] ದಿಕ್ಕಿನ ಬಾಗಿಲನ್ನೇ ಬಂದ್ ಮಾಡಿ' ಅಂದ್ರಂತೆ ಜ್ಯೋತಿಷಿಗಳು[...] ಹಾಗೆ ಮಾಡಿದರೆ ಶಾಶ್ವತವಾಗಿ ಅಧಿಕಾರ ಚಲಾಯಿಸಬಹು[...] ದಲ್ಲಾ ಎಂದು ಯಡ್ಯೂರಪ್ಪನವರು ವಿಧಾನಸೌಧಕ್ಕೆ ಇರುವ[...] ಪೂರ್ವದ ಬಾಗಿಲನ್ನು ಬಂದ್ ಮಾಡಿಸಿದರು!

ರಾಜ್ಯದ ಮುಖ್ಯಮಂತ್ರಿಗಿರಿ ಅಂದರೆ ಕೇವ[...] ಪುಳಿಚಾರು ವ್ಯವಹಾರ ಅಲ್ಲ ಕಣ್ರೀ.... ಸಾತ್ವಿಕ ದೇವರುಗ[...] ನಂಬಿ ಕುಳಿತರೆ ಏನೂ ನಡೆಯುವ ಹಾಗಿಲ್ಲ[...] ವಾಮಾಚಾರಾನೂ ಮಾಡ್ಬೇಕಾಗುತ್ತೆ ಅಂದರಂತೆ ಯಾರೊ[...] ಇಷ್ಟೇ ಮಾಡಿದೀನಿ, ಇದೊಂದು ಯಾಕೆ ಬಿಡಬೇಕ[...] ಎಂದು ಸನ್ಮಾನ್ಯರು ಅದಕ್ಕೂ ಕೈ ಹಾಕಿದರು. ನಿಂಬೆಹಣ[...] ನೀವಳಿಸಿ, ಕೋಳಿ ಬಲಿ ಕೊಟ್ಟು ಅದೇನೇನು ಮಾಡಬೇಕೊ[...] ಅದನ್ನೂ ಮಾಡಿಸಿದರು. ಅದನ್ನ ತಂದು ವಿಧಾನಸೌಧ[...] ಹೆಬ್ಬಾಗಿಲಿನಲ್ಲಿ ಇಡಿಸಿದರು.

ಇಷ್ಟೆಲ್ಲ ಆದಮೇಲೆ ಬಹುಮತ ಬರುವುದು ಖಾತ[...] ಆಯಿತು ಎಂದು ನಿಶ್ಚಿಂತೆಯಿಂದ ಇದ್ರಾ.... ಇನ್ಯಾವ್ನೋನೊ[...] ಬಂದ. ಇದೆಲ್ಲ ಮಾಡಿದ್ದೀನಿ ಅಂತ ಸುಮ್ಮನೆ ಕೂರಬೇಡಿ[...] ಅಲ್ಲಿ ಗೌರ್ನರು ಅಂಬೋವನು ಇದ್ದಾನಲ್ಲ, ಅವನು ಕೈ[...] ಕೊಟ್ಟರೂ ಕೊಡಬಹುದು. ಅವನ ಮನೇಗೂ ಮಾ[...] ಮಾಡಿಸಿ ಎಂದೆಲ್ಲ ಸಲಹೆ ನೀಡಿದ. ಸರಿ ಆ ಮನೆಗೂ[...] ಕಟ್ಟು ಮಾಡಿಸಿದರು!

ಅಂತೂಇಂತೂ ದೇವರು, ಮಾಟ ಸೇರ್ಕೊಂಡ[...] ಯಡ್ಯೂರಪ್ಪನವರನ್ನ ಉಳಿಸಿತು.

ಒಂದು ಪ್ರಶ್ನೆ:


ಯಡ್ಯೂರಪ್ಪನವರು ಹೇಳಿದ್ದರು: ಪ್ರತಿಪಕ್ಷಗಳು ಭಾಜ[...] ಶಾಸಕರನ್ನು ಸೆಳೆಯಲು ಒಬ್ಬೊಬ್ಬ ಶಾಸಕನಿಗೆ ಇಪ್ಪತ[...] ಕೋಟಿ, ಇಪ್ಪತ್ತೈದು ಕೋಟಿ ನೀಡಿವೆ.

ವಿಪಕ್ಷಗಳು ಹೇಳುತ್ತಿದ್ದುದು: ತಮ್ಮನ್ನು ಸೆಳೆಯಲು[...] ಭಾಜಪ ನಲವತ್ತರಿಂದ ಐವತ್ತು ಕೋಟಿ ಆಮಿಷ ಒಡ್ಡುತ್ತಿದೆ[...]

ಹೀಗೆ ಹೇಳಿದವರು ಟಿವಿ ನೋಡಿರುವವರೆಲ್ಲರಿಗೂ ತಿಳಿದಿದೆ.


ಆ ಆಧಾರದ ಮೇಲೆ ಆದಾಯ ತೆರಿಗೆಯವರು 'ಯಾರು ಅವರು ತಿಳಿಸಿ' ಎಂದು ಯಾಕೆ ತನಿಖೆ ನಡೆಸಬಾರದು?

ಪೇಜಾವರ ಬಂದಾರು ಎಚ್ಚರಿಕೆ



ಅ.13ರ ನೋ ಕಾಮೆಂಟ್ಸ್ ಅಂಕಣದಲ್ಲಿದ್ದ ಪೇಜಾವರಸ್ವಾಮಿಯ ಕುರಿತಾದ ಡಾ.ದ್ವಾರಕನಾಥ್‌ರ ಅಭಿಪ್ರಾಯ ನೂರಕ್ಕೆ ನೂರು ನಿಜ. ಕೆಲ ಹುಂಬ ಮುಸಲ್ಮಾನರ ಕೈಲಿದ್ದ ಎ.ಕೆ.47, 56ಗಳಿಗಿಂತಲೂ ಈ ಪೇಜಾವರರ ಕ್ರಿಮಿನಲ್ ಬ್ರೈನ್ ಅತ್ಯಂತ ಅಪಾಯಕಾರಿಯೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ತಣ್ಣಗೆ ಬತ್ತಿ ಇಡುತ್ತಾ ತನ್ನ 'ಹಿಂದೂತ್ವ'ದ ಬೇಳೆ ಬೇಯಿಸಿಕೊಂಡು ಶೂದ್ರವರ್ಗವನ್ನು ತನ್ನ ಖೆಡ್ಡಾದಲ್ಲಿ ಕೆಡವಿಕೊಳ್ಳೊ ಈ ಪೇಜಾವರರೆದುರು ಒಸಾಮ ಬಿನ್‌ಗಳೆಲ್ಲ ಕೇವಲ ಡಸ್ಟ್‌ಬಿನ್‌ಗಳಿಗೆ ಸಮ. ಇದೀಗ ಪೇಜಾವರ ದ.ಕದಲ್ಲಿ ಅದೇನೋ ಸದ್ಭಾವನಾ ಯಾತ್ರೆಯ ಸೋಗಿನಲ್ಲಿ ಬ್ರಾಹ್ಮಣೇತರ ಕೆಳಜಾತಿಗಳ 'ಬೇಟೆ'ಗೆ ಹೊರಟಿದ್ದಾರಂತೆ.

ಹಾಗೆಯೇ ಹಿಂದೂತ್ವದ ರೋಗದಿಂದ ತತ್ತರಿಸುತ್ತಿರುವ ಇದೇ ದ.ಕದಲ್ಲಿ ಪ್ರಗತಿಪರರ ದನಿಯಂತಿದ್ದ ಚೇತನವೊಂದು ಇತ್ತೀಚೆಗೆ (ಸೆ.15) ಕಣ್ಮರೆಯಾಯ್ತು. ಪತ್ರಿಕೆಗೆ ಆಗಾಗ ಬರೆಯುತ್ತಿದ್ದ ಕಡಂದಲೆ ಜಯರಾಮ ಶೆಟ್ಟರದ್ದು ದಿಟ್ಟ ನಿಲುವಿನ ವ್ಯಕ್ತಿತ್ವ. ತಮ್ಮ 80ರ ಇಳಿವಯಸ್ಸಿನಲ್ಲೂ ತನ್ನ ನಿಲುವುಗಳಲ್ಲಿ ಎಂದೂ ರಾಜಿ ಮಾಡಿಕೊಂಡಿರದ ಈ ನಿವೃತ್ತ ಶಿಕ್ಷಕ ಜಿಲ್ಲೆಯಲ್ಲಿ ಒಂದು ಹಿಡಿತವುಳ್ಳ 'ಬಂಟ'ರ ಬಳಗಕ್ಕೆ ಸೇರಿದಂತವರು. ಹಿಂದಿನಿಂದಲೂ ಜಿಲ್ಲೆಯಲ್ಲಿ ಸಾಂಸ್ಕೃತಿಕ ನಂಟನ್ನು ಹೊಂದಿರುವ ಬಂಟರಲ್ಲಿ ಪರ್ಯ ಲಕ್ಷ್ಮೀನಾರಾಯಣ ಆಳ್ವರಂತೆ ವಿಶ್ವ ಹಿಂದೂ ಪರಿಷತ್‌ನಂತಹ ಹಿಂದೂತ್ವವಾದಿ ಸಂಘಟನೆಗಳ ಅಧ್ಯಕ್ಷಗಿರಿ ಪಡಕೊಂಡವರೂ ಉಂಟು. ಈಗಿನ ಸಂಸದ (ಮಂಗಳೂರು)ರಂತೆ ಕೇವಲ ಹಿಂದೂತ್ವದ ಹೆಸರಲ್ಲೇ ಬೇಳೆ ಬೇಯಿಸಿಕೊಂಡು ಗೆದ್ದವರೂ ಉಂಟು. ಅದೇರೀತಿ ಪ್ರವೀಣ್ ಶೆಟ್ಟಿ, ಕೆ.ಜಿ. ಶೆಟ್ಟರಂತಹ ಪ್ರಗತಿಪರ ನಿಲುವುಗಳಿಗೆ ಬದ್ಧರಾಗಿ ಅದಕ್ಕಾಗೇ ದನಿಯೆತ್ತುವವರೂ ಕೂಡಾ ಸಾಕಷ್ಟಿದ್ದಾರೆ.



ಜಮೀನ್ದಾರಿಕೆಯ ಹಿನ್ನೆಲೆಯ ಬಲಾಢ್ಯ ಈ ಜಾತಿಯ ಸಣ್ಣಮಟ್ಟದ 'ವಾಲು'ವಿಕೆಯೇ ಮೂಲಭೂತ ವಾದಿಗಳಿಗೆ ಆನೆಬಲ ಕೊಡುವಂತ ಸಂಗತಿ. ಹೀಗಾಗೇ ಈ ಕೆ.ಜಿ.ಶೆಟ್ಟಿ, ಪ್ರವೀಣ್ ಶೆಟ್ಟಿಯಂತವರು ಹಿಂದೂತ್ವದ ಪ್ರತಿಪಾದಕರಿಗೆಲ್ಲ ಒಂದು ದೊಡ್ಡ ತಲೆನೋವಿನಂತೆ ಕಂಡಿದ್ದರೆ ಆಚ್ಚರಿಯೇನಲ್ಲ. ಕಲ್ಕುಳಿ ಹೆಗ್ಡೆಯವರಂತೆ ವೈಯಕ್ತಿಕವಾಗಿ ನಯಾಪೈಸೆಯ ಲಾಭವಿಲ್ಲದಿದ್ದರೂ ತೊಂದರೆಗಳಿಗೆಲ್ಲಾ ತಮ್ಮನ್ನವರು ಒಡ್ಡಿಕೊಂಡಿರುತ್ತಾರೆಂಬುದಂತೂ ಸತ್ಯ. ಇಂತಹ ಜಯರಾಮ ಶೆಟ್ಟರಿಗೆ ನಮ್ಮ ಪ್ರೀತಿ ಪೂರ್ವಕ ನಮನಗಳು....

-ಶಶಿ ಪುತ್ತೂರು. ದ.ಕ.

ಅಷ್ಟ ಅನಿಷ್ಟಾಧಿಪತಿಗಳಿಗೆ ಶ್ರೀಕೃಷ್ಣ ದೇವಸ್ಥಾನವನ್ನು ಯಡ್ಡವಟ್ಟು ಯಡ್ಡಿ ದಾನ ಮಾಡಿದ್ದಾಯಿತು. (ಲಂಕೇಶ್-20, ಅಕ್ಟೋಬರ್ 2010).

ಹೊಗಳಿಕೆ ತೆಗಳಿಕೆ


ಬಿಜೆಪಿ ಸರಕಾರ ಆಡಳಿತಕ್ಕೆ ಬಂದ ಎರಡು ಕಾಲು ವರ್ಷದಲ್ಲಿ ಕರ್ನಾಟಕದ ಕರಾವಳಿಯಲ್ಲಿ ಖಾಸಗೀಕರಣಗೊಂಡ 5ನೇ ಸಾರ್ವಜನಿಕ ದೇವಸ್ಥಾನವಿದು!

ಇದಕ್ಕೆ ಮೊದಲು ಗೋಕರ್ಣ ದೇವಸ್ಥಾನ, [illegible] ವಿನಾಯಕ ದೇವಸ್ಥಾನ, ಉಡುಪಿ-ಅಂಬಲಪಾಡಿಯ ಮಹಾಕಾಳಿ-ಜನಾರ್ದನ ದೇವಳ ಹಾಗೂ ಮಂಗಳೂರಿನ ಶರಾವು ಗಣಪತಿ ದೇವಸ್ಥಾನ ಹೀಗೆ [illegible], ಸಾರ್ವಜನಿಕ ದೇವಸ್ಥಾನಗಳನ್ನು ಖಾಸಗಿ ಮಠಾಧೀಶರಿಗೆ ಅಥವಾ ಒಂದೊಂದು ಬ್ರಾಹ್ಮಣ ಕುಟುಂಬಗಳ ಸುಪರ್ದಿಗೆ ಅಧಿಕೃತವಾಗಿ ಬಿಟ್ಟು ಕೊಡಲಾಗಿದೆ.


ಈ ಎಲ್ಲಾ ದೇವಸ್ಥಾನಗಳಿಗೂ ವಾರ್ಷಿಕ ಕೋಟ್ಯಂತರ ರೂಪಾಯಿ ಆದಾಯ ಇದೆ. ಈಗ ಅದು ಸಾರ್ವಜನಿಕರಿಗೆ ಅಥವಾ ಸರ್ಕಾರಕ್ಕೆ ಹೋಗುವ ಬದಲು ಒಂದೊಂದು ಖಾಸಗಿ ಬ್ರಾಹ್ಮಣ ಕುಟುಂಬಕ್ಕೆ ಸೇರುತ್ತಿದೆ. ಅಂದರೆ ಹಿಂದೂ ಸಮಾಜವನ್ನು ಮತ್ತೆ ದೇವಸ್ಥಾನಗಳ ಮುಖಾಂತರ ಪುರೋಹಿತ ಶಾಹಿಯ ತೆಕ್ಕೆಗೆ ಹಾಕುವ ಹುನ್ನಾರ ಇದು. ಶತಮಾನಗಳಿಂದ ದೇವರ ಹೆಸರಲ್ಲಿ ಭಯ ಹುಟ್ಟಿಸಿ ಸಮಾಜವನ್ನು ತನ್ನ ಕಪಿಮುಷ್ಠಿಯಲ್ಲಿ ಇಟ್ಟುಕೊಂಡು ತಮಗೆ ಬೇಕಾದಂತೆ ಆಡಿಸಿದವರು ಇದೇ ಪುರೋಹಿತಶಾಹಿ. ಈಗೀಗ ಅಶಕ್ತವಾಗಿದ್ದ ಈ ಪುರೋಹಿತಶಾಹಿಗೆ ಸರ್ಕಾರ ಮತ್ತೆ ಟಾನಿಕ್ ಕೊಡುತ್ತಿದೆ ದೇವಸ್ಥಾನಗಳ ಖಾಸಗೀಕರಣದ ಮುಖಾಂತರ.

ಇದೇ ನೀತಿ ಅನ್ವಯಿಸಿ, ಒಂದಾನೊಂದು ಕಾಲದಲ್ಲಿ 'ಶೂದ್ರ' ಜಮೀನುದಾರರ ಖಾಸಗಿ ಆಸ್ತಿಯಾಗಿದ್ದ ಕಟೀಲು, ಬಪ್ಪನಾಡು, ಪೊಳಲಿ ಮುಂತಾದ ದುರ್ಗಾ ದೇವಸ್ಥಾನಗಳನ್ನು ಮತ್ತೆ ಅದೇ ಶೂದ್ರ ಕುಟುಂಬಗಳಿಗೆ (ಬಂಟರ ಜಾತಿಯವರಿಗೆ) ಏಕೆ ಬಿಟ್ಟು ಕೊಡಬಾರದು?

-ಪ್ರಶಾಂತ್. ಎನ್.ಸುವರ್ಣ. ಮಂಗಳೂರು



ಜಾಕಿ ಜಾಕ್‌ಪಾಟ್!



ನ್ನಡ ಚಿತ್ರರಂಗದಲ್ಲಿ ಮೊಟ್ಟ ಮೊದಲ ಬಾರಿಗೆ ಅತಿ ಹೆಚ್ಚು ಬೆಲೆಗೆ ವಾಗಿರುವ ಸಿನಿಮಾ ಎಂದರೆ ಅದು 'ಜಾಕಿ' ಎಂಬುದು ಗಾಂಧಿನಗರದ ರ.

ಮಾನ್ಯವಾಗಿ ವಜ್ರೇಶ್ವರಿ ಸಂಸ್ಥೆಯವರು ತಮ್ಮ ಸಿನಿಮಾಗಳನ್ನು ವಿತರಕರಿಗೆ ವ ಗೋಜಿಗೆ ಹೋಗುವುದಿಲ್ಲ. ಬದಲಾಗಿ ಅವರೇ ಎಲ್ಲ ಗಳಲ್ಲೂ ತಾವೇ ರಿಲೀಸ್ ಮಾಡಿ ಲಾಭ, ನಷ್ಟ ಏನೇ ಇದ್ದರೂ ತಾವೇ ಅನುಭವಿಸುತ್ತಾರೆ. ಆದರೆ ಈ ಬಾರಿ 'ಜಾಕಿ' ಬಗ್ಗೆ ಜನರಲ್ಲಿ ಅದೆಷ್ಟೇ ಕ್ರೇಜ್ ಇದ್ದರೂ ರಿಸ್ಕ್ ಇಲ್ಲದೇ ಸೇಫ್ ಗೇಮ್ ಪ್ಲೇ ಮಾಡುವ ಉದ್ದೇಶದಿಂದಲೋ ಏನೋ ರಾಘವೇಂದ್ರ ರಾಜ್‌ಕುಮಾರ್ ಅದನ್ನು ಒಂದಷ್ಟು ಏರಿಯಾಗಳಲ್ಲಿ ಮಾರಾಟ ಮಾಡಿದ್ದಾರೆ.

ಬಿಕೆಟಿ (ಬೆಂಗಳೂರು, ತುಮಕೂರು ಮತ್ತು ಕೋಲಾರ) ವಲಯವನ್ನು ಕೋಕೋ ಕೋಲಾ ಗೌಡ ಎಂಬಾತನಿಗೆ ನಾಲ್ಕು ಕೋಟಿ ನಲವತ್ತೊಂದು ಲಕ್ಷಕ್ಕೆ ಮಾರಾಟ ಮಾಡಲಾಗಿದೆ. 'ಗುಣವಂತ' ಚಿತ್ರದ ನಿರ್ಮಾಪಕ ಮುನಿರಾಜು ಅವರ ರಾಮಾಂಜನೇಯ ಫಿಲಂಸ್‌ಗೆ ಮೈಸೂರು ಏರಿಯಾವನ್ನು ಮೂರು ಕೋಟಿ ಐವತ್ತೊಂದು ಲಕ್ಷಕ್ಕೆ ಕೊಡಲಾಗಿದೆ. ಹುಬ್ಬಳ್ಳಿ, ಹೈದ್ರಾಬಾದ್ ಕರ್ನಾಟಕ, ಶಿವಮೊಗ್ಗ ಮಂಗಳೂರು ವಲಯದಿಂದ ಮೂರೂವರೆ ಕೋಟಿಗೆ ವ್ಯಾಪಾರವಾಗಿದೆ. ದಾವಣಗೆರೆ ಇನ್ನಿತರ ಏರಿಯಾಗಳನ್ನೂ ಬಿಡಿಬಿಡಿಯಾಗಿ ಮಾರಾಟ ಮಾಡಲಾಗಿದೆ. ಮೊದಲ ವಾರವೇ 'ಜಾಕಿ' 115 ಥಿಯೇಟರುಗಳಲ್ಲಿ ಬಿಡುಗಡೆಯಾಗುತ್ತಿರುವುದರಿಂದ ನಾಲ್ಕು ವಾರ ಸಿನಿಮಾ ಓಡಿದರೂ ವಿತರಕರಿಗೆ ನಷ್ಟವಾಗಲಾರದು.

ಇನ್ನುಳಿದಂತೆ ಟಿವಿ ರೈಟ್ಸ್ ಅನ್ನು ಎರಡು ಕೋಟಿ ಏಳು ಲಕ್ಷಕ್ಕೆ ಮಾರಾಟ ಮಾಡಲಾಗಿದೆ. ಆನಂದ್ ಆಡಿಯೋದವರು ಆಡಿಯೋ ಹಕ್ಕಿಗೆ ಕೊಟ್ಟಿರುವ ಬಾಬ್ತು ಐವತ್ತನಾಲ್ಕು ಲಕ್ಷ ರೂಪಾಯಿಗಳು.


ಅಂದರೆ ಈಗಾಗಲೇ 'ಜಾಕಿ' ಹದಿನಾರು ಕೋಟಿ ರೂಪಾಯಿಗಳ ವಹಿವಾಟು ನಡೆಸಿರುವುದು ಖಚಿತವಾಗುತ್ತದೆ. ಈ ಚಿತ್ರದ ನಿರ್ಮಾಣಕ್ಕೆ ವೆಚ್ಚವಾಗಿರುವುದು ಅಂದಾಜು ನಾಲ್ಕು ಕೋಟಿ ರೂಪಾಯಿ ಮಾತ್ರ. ಅಂದರೆ, ಬಿಡುಗಡೆಯ ಮುನ್ನವೇ 'ಜಾಕಿ' ಚಿತ್ರ ವಜ್ರೇಶ್ವರಿ ಸಂಸ್ಥೆಗೆ ಬರೋಬ್ಬರಿ ಹನ್ನೆರಡು ಕೋಟಿ ರೂಪಾಯಿಗಳ ಲಾಭ ತಂದಿದೆ!

'ಜಾಕಿ' ಜಾಕ್ ಪಾಟ್ ಹೊಡೆದಿದೆ!! ●

ಾಕಿ ಆಟದಲ್ಲಿ...

ದ್ದಾರೆ. ಕಲಾಸಿಪಾಳ್ಯ, ಮಾರ್ಕೆಟ್, ಫ್ಲವರ್ ' ಹೀಗೆ ಪ್ರತಿಯೊಂದು ಸ್ಥಳಗಳ ಫೋಟೋಗ್ರಫಿ ಅಲ್ಲಿನ ಅಂಗಡಿಗಳು, ಗಾಡಿಗಳು, ಏರ್ರಿ ಕಟ್ಟುವ ಬೋರ್ಡ್‌ಗಳಿಂದ ಹಿಡಿದು ಪಾನ್‌ಪರಾಗು, ಯ ಉಗುಳಿನ ತನಕ ಎಲ್ಲವನ್ನೂ ತ್ತಾಗಿ ಸೆಟ್‌ನಲ್ಲಿ ಕ್ರಿಯೇಟ್ ಮಾಡಿ ದ್ದಾರೆ.

'ಯ ಕಥೆ ಸರಳವಾದದ್ದು. ಜಾಕಿಯ ತಾಯಿ ನಲ್ಲಿ ಕೆಲಸ ಂಡಿರುತ್ತಾಳೆ. ಜಾಕಿ ಜಾಲಿಯಾಗಿ ಕೊಂಡು ಲೈಫ್ ಎಂಜಾಯ್ ದುತ್ತಾನೆ. ಹುಡುಗಿಯೊಬ್ಬಳನ್ನು ಆಕೆಯನ್ನು ಮೈ ದಂಧೆಯ ಮಾರಲು ವಿಲನ್ ಸ್ಕೆಚ್ ತ್ತಾನೆ. ಆಕೆಯನ್ನು ಪಾರು ಜಾಕಿ ಹೊರಡುತ್ತಾನೆ. ಆತನ ಪ್ರಯಾಣದಲ್ಲಿ ಣ್ಣದ ಕೋಳಿಯೊಂದು ಅವನಿಗೆ ಗುತ್ತದೆ. ಗಣೇಶ್ 'ಮುಂಗಾರು ಮಳೆ'ಯಲ್ಲಿ ಒಂದಿಗೆ ಮಾತಾಡಿದಂತೆ ಜಾಕಿ ಜೊಂದಿಗೆ ಕೊರೆಯಲು ಶುರು ಮಾಡುತ್ತಾನೆ.




ಯೋಗರಾಜ್‌ಭಟ್

ಜೊತೆಗೆ 'ಜಾಕಿ'ಗೆ ಜೊತೆಗಾತಿಯೂ ಸಿಗುತ್ತಾಳೆ. ಕಡೆಗೆ ನಾಯಕಿ ಭಾವನಾಳನ್ನು ಜೀವಂತ ಬಲಿ ಕೊಡುವ ಸಂಚನ್ನು ಜಾಕಿ ತಪ್ಪಿಸುತ್ತನೆ. ಇದಿಷ್ಟು ಕತೆ ನಡೆಯುವುದು ಹದಿನೈದು ದಿನಗಳಲ್ಲಿ.

ಕತೆ ಹೇಳುವಾಗ ಹಲವಾರು ಟ್ವಿಸ್ಟ್ ಗಳನ್ನು ನೀಡಲಾಗಿದೆ. ಹತ್ತಾರು ಪಾತ್ರಗಳು ಬಂದು ಹೋಗುತ್ತವೆ. ರಂಗಾಯಣ ರಘುವಿಗೆ ತಮ್ಮ ಚಿತ್ರಗಳಲ್ಲಿ ಹೊಸ ಹೊಸ ಗೆಟಪ್ಪು ಹಾಕಿ ಎಕ್ಸ್‌ಪರಿಮೆಂಟ್ ಮಾಡುವ ಸೂರಿ ಈ ಬಾರಿ ಅಂಥ ಪ್ರಯತ್ನವನ್ನೇನೂ ಮಾಡದೆ ರಘು ಅವರನ್ನು ಪಿಸಿ ಪಾತ್ರದಲ್ಲಿ ಫಿಟ್ ಮಾಡಿದ್ದಾರೆ.

"ಯೋಗಿ ಕಂಡ ಸೈಡಿನಲಿ..."

ಯೋಗರಾಜ್ ಭಟ್ ಬರೆದಿರುವ ಐದು ಹಾಡುಗಳು ಈಗಾಗಲೇ ಸೂಪರ್ ಹಿಟ್ ಆಗಿವೆ. "ಇತ್ತೀಚೆಗೆ ನನಗೆ ಹೊಸ ರೀತಿಯ ಹಾಡುಗಳನ್ನು ಬರೆಯಬೇಕು ಅನ್ನಿಸ್ತಿದೆ. ಇದನ್ನು ಬಳಸಿಕೊಳ್ರೋ" ಎಂದು ಆಗಾಗ ಸೂರಿ ಬಳಿ ಭಟ್ಟರು ಹೇಳಿಕೊಳ್ಳುತ್ತಿದ್ದರಂತೆ. 'ಜಂಗ್ಲಿ'ಯ 'ಹಳೆಪಾತ್ರೆ' ಹಾಡು ಹಿಟ್ ಆಗಿದ್ದರಿಂದ ಸೂರಿಗೂ ಭಟ್ಟರ ಸಾಲುಗಳ ಮೇಲೆ ಮೋಹ ಬೆಳೆದಿತ್ತು. ಹೀಗಾಗಿ "'ಜಾಕಿ' ಚಿತ್ರದ ಎಲ್ಲಾ ಹಾಡುಗಳನ್ನು ನೀವೊಬ್ಬರೇ ಬರೆಯಿರಿ. ಒಂದು ಆಲ್ಬಂ ಆದ ಹಾಗಾಗುತ್ತೆ" ಎಂದರಂತೆ. ಹರಿಕೃಷ್ಣರ ಟ್ಯೂನು, ಭಟ್ಟರ ಲಿರಿಕ್ಸು ಈ ಬಾರಿ ದೊಡ್ಡ ರೀತಿಯ ಹವಾ ಎಬ್ಬಿಸಿದೆ. ಯಾರ ಬಾಯಲ್ಲಿ ನೋಡಿದರೂ 'ಯಕ್ಕಾರಾಜರಾಣಿ ನನ್ನ ಕೈಯೊಳಗೆ ಹಿಡಿ ಮಣ್ಣು ನಿನ್ನ ಬಾಯೊಳಗೆ' ಮತ್ತು 'ಶಿವಾ ಅಂತಾ ಹೋಗುತ್ತಿದ್ದೆ ರೋಡಿನಲಿ' ಹಾಡುಗಳು ಕೇಳಿಬರುತ್ತಿವೆ.




"ನನಗೆ ಇಜ್ಜಲು ಮಣ್ಣು ಮಸಿ ಕೊಟ್ಟು ಖಾಲಿ ಗೋಡೆ ಮೇಲೆ ಚಿತ್ರ ಬರೆದು ಈ ಕ್ಷಣಕ್ಕೆ ನೋಡುಗರಿಗೆ ಸಂತೋಷ ಪಡಿಸೋದು ಹೇಗೆ ಅನ್ನೋದು ನಾನು ಬಲ್ಲೆ. ಹಾಗೆಯೇ ನನಗೆಂಥ ಸಂಗೀತ, ಸಾಹಿತ್ಯ ಬೇಕೋ ಅದನ್ನ ತಗೊಳ್ಳೋಕೂ ನಂಗೆ ಗೊತ್ತು. ಹಾಗಂತ ನಾನು ಸಂಗೀತ ನಿರ್ದೇಶಕರಿಗೆ ತುಂಬಾ ಕನ್‌ಫ್ಯೂಸ್ ಮಾಡಕ್ಕೋಗಲ್ಲ. ಐದು ಕೊಡಿ ಒಂದು ಸೆಲೆಕ್ಟ್ ಮಾಡ್ತೀನಿ ಅಂತ ಹೇಳಿ ತಲೆಗೆ ಹುಳಾ ಬಿಡಲ್ಲ. ಇನ್ನು ಸಾಹಿತ್ಯದ ವಿಚಾರಕ್ಕೆ ಬಂದರೆ, ಕಥೆ ಹೇಳ್ತಿನಿ ಅದಕ್ಕೆ ತಕ್ಕಂತೆ ಭಟ್ಟರು ಬರೆದುಕೊಡ್ತಾರೆ... ಹೀಗಾಗಿ ನನ್ನ ಚಿತ್ರದ ಹಾಡುಗಳು ಹಿಟ್ ಆಗುತ್ತವೆ" ಎನ್ನುತ್ತಾರೆ ಸೂರಿ!

ಹಿಂದಿನ ಮೂರೂ ಚಿತ್ರಗಳಲ್ಲಿ ಬೆಂಗಳೂರು ಸಿಟಿಯ ಗಡಿ ದಾಟದೆ ಶೂಟಿಂಗ್ ಮುಗಿಸಿದ್ದ ಸೂರಿ ಈ ಬಾರಿ ನಮೀಬಿಯಾ, ಆಸ್ಟ್ರಿಯಾಗಳಲ್ಲಿ ಮೂರು ಹಾಡುಗಳನ್ನು ಚಿತ್ರೀಕರಿಸಿದ್ದಾರೆ. ಇಡೀ ಚಿತ್ರ ರಾ ಎನಿಸುವುದರಿಂದ ಪ್ರೇಕ್ಷಕರಿಗೆ ಬ್ರೌನ್‌ಶೀಟ್ ನೋಡಿದಂತಾಗಬಾರದು, ಮಧ್ಯೆ ಕಣ್ಣಿಗೆ ಹಬ್ಬವೆನಿಸುವ ಬಣ್ಣಗಳು ಕಾಣಲಿ ಎಂಬ ಕಾರಣಕ್ಕೆ ಸೂರಿ ಫಸ್ಟ್‌ಟೈಂ ಫಾರಿನ್‌ಗೆ ಹೋಗಿಬಂದಿದ್ದಾರೆ. 'ಯಕ್ಕಾರಾಜ' ಹಾಡನ್ನು ಆನೆಕಾಡಿನ ಬದಿರಿನ ಅರಣ್ಯದಲ್ಲಿ ಹತ್ತಾರು ಕೃತಕ ಹುತ್ತಗಳನ್ನು ನಿರ್ಮಿಸಿ ಅದರ ನಡುವೆ ಚಿತ್ರಿಸಿದ್ದಾರೆ.

ಚಿತ್ರ ಭರ್ಜರಿ ಓಪನಿಂಗ್ ಪಡೆದಿದೆ. ಮುಂದೇ 'ಜಾಕಿ'ಯ ಪಾಡು ಏನಾಗುತ್ತೋ ನೋಡಬೇಕು... ●

ಮತ್ತೆ ದಕ್ಕಿದ ಸಂಪತ್ತು



'ಜಾಕಿ' ಚಿತ್ರದಲ್ಲಿ ಪ್ರಮುಖ ಪಾತ್ರದಲ್ಲಿ ನಟಿಸಿರುವ ಸಂಪತ್‌ರಾಜ್ ಬಗ್ಗೆ ಕನ್ನಡ ಚಿತ್ರರಸಿಕರಿಗೆ ಗೊತ್ತೇ ಇಲ್ಲ.

ವಾಸ್ತವವಾಗಿ ಸಂಪತ್ ಈಗ ತಮಿಳು ಚಿತ್ರರಂಗದಿಂದ 'ಜಾಕಿ' ಮೂಲಕ ಕನ್ನಡ ಚಿತ್ರರಂಗಕ್ಕೆ ಎಂಟ್ರಿ ಕೊಟ್ಟಿದ್ದರೂ ಅವರು ಮೂಲತಃ ಬೆಂಗಳೂರಿನವರು ಮತ್ತು ತಮ್ಮ ನಟನಾ ವೃತ್ತಿಯನ್ನು ಪ್ರಾರಂಭಿಸಿದ್ದೂ ಕನ್ನಡ ಚಿತ್ರಗಳ ಮೂಲಕವೇ!



ಕವಿತಾ

ಆಗ ಯಾವುದೋ ಜಾಹೀರಾತು ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ಸಂಪತ್‌ರನ್ನು ಚಿತ್ರರಂಗಕ್ಕೆ ಪರಿಚಯಿಸಿದ್ದು ನಿರ್ದೇಶಕಿ ಕವಿತಾ ಲಂಕೇಶ್. ಕವಿತಾ ನಿರ್ದೇಶನದ 'ಬಿಂಬ'ದಲ್ಲಿ ನಟಿಸಿದ್ದ ಸಂಪತ್ ಆನಂತರ ಅದೇ ನಿರ್ದೇಶಕಿಯ 'ಪ್ರೀತಿ ಪ್ರೇಮ ಪ್ರಣಯ' ಚಿತ್ರದಲ್ಲೂ ಭಾರತಿ ಅವರ ಮಗನ ಪಾತ್ರದಲ್ಲಿ ನಟಿಸಿ ಸೈ ಅನ್ನಿಸಿಕೊಂಡಿದ್ದರು. ಆನಂತರ ಇನ್ನೂ ಹೆಚ್ಚು ಅವಕಾಶಗಳನ್ನು ಅರಸುತ್ತ ಗಾಂಧಿನಗರದ ಗಲ್ಲಿಗಲ್ಲಿಗಳನ್ನು ಅಲೆದರು. ಸಿಕ್ಕಸಿಕ್ಕವರನ್ನು ಬೇಡಿದರು. ಆದರೆ ಯಾರೂ ಅವರತ್ತ ತಿರುಗಿಯೂ ನೋಡಲಿಲ್ಲ. ಆಗ ಗಾಂಧಿನಗರವನ್ನು ಅಲೆದು ಟೈಂ ವೇಸ್ಟ್ ಮಾಡಿಕೊಳ್ಳು ವುದಕ್ಕಿಂತ ಪರಭಾಷೆಗೆ ವಲಸೆ ಹೋಗು ವುದೇ ಲೇಸು ಎಂದು ತೀರ್ಮಾನಿಸಿದ ಸಂಪತ್ ಗಂಟುಮೂಟೆ ಕಟ್ಟಿಕೊಂಡು ನೇರವಾಗಿ ಚೆನ್ನೈಗೆ ಹೋದರು.

ಎಲ್ಲ ಪ್ರತಿಭಾವಂತರನ್ನು ಬಿಗಿದಪ್ಪಿದಂತೇ ಸಂಪತ್‌ರನ್ನೂ ತಮಿಳು ಚಿತ್ರರಂಗ ಕೈಹಿಡಿದು ಮುನ್ನಡೆಸಿತು. 2004ರಲ್ಲಿ ಕಾಮರಾಜ್ ಚಿತ್ರದಿಂದ ತಮಿಳು ಚಿತ್ರಗಳಲ್ಲಿ ನಟನೆ ಶುರುಮಾಡಿದ ಸಂಪತ್‌ರಾಜ್ ನಂತರ ತಿರುಪತಿ, ಅಳಗಿಯ ಅಸುರ, ತಾಮಿರಭರಣಿ, ಅಸಲ್, ಕನಗವೇಲ್ ಕಾಕಾ, ಕಳೆದ ವರ್ಷ ತೆರೆಗೆ ಬಂದ ಎಸ್.ಪಿ.ಬಾಲಸುಬ್ರಮಣ್ಯಂರ ಪುತ್ರ ಚರಣ್ ನಿರ್ಮಿಸಿದ್ದ 'ಸರೋಜಾ' ಸಿನಿಮಾದ ತನಕ ಹತ್ತಾರು ತಮಿಳು ಚಿತ್ರಗಳಲ್ಲಿ ನಟಿಸಿದರು. ಸಾಗರ್ ಅಲಿಯಾಸ್ ಜಾಕಿ, ಮರ್ಯಾದೈ ಮುಂತಾದ ಮಲಯಾಳಂ ಚಿತ್ರಗಳಲ್ಲೂ ನಟಿಸಿದರು.

ಹೀಗೆ ನಮ್ಮ ಹಿತ್ತಲಲ್ಲೇ ಬೆಳೆದ ಗಿಡ ಬೇರೆಯವರ ಅಂಗಳದಲ್ಲಿ ಮಿಂಚಲಾರಂಭಿಸಿದ ನಂತರವೇ ನಮ್ಮವರ ಕಣ್ಣಿಗೆ ಸಂಪತ್ ಬಿದ್ದದ್ದು. ನಮ್ಮವರೇ ನಮ್ಮಲ್ಲಿಗೆ 'ವಲಸೆ' ಬಂದವರಲ್ಲಿ ಸಂಪತ್ ಮೊದಲಿಗರಲ್ಲ, ಕೊನೆಯವರೂ ಅಲ್ಲ. ಈಗ 'ಜಾಕಿ'ಯ ಮೂಲಕ ಮತ್ತೆ ಕನ್ನಡ ಚಿತ್ರರಂಗಕ್ಕೆ ರೀ ಎಂಟ್ರಿ ಕೊಟ್ಟಿರುವ ಸಂಪತ್ ಸಿಟಿ ಕ್ರೈಂ ಬ್ರಾಂಚ್‌ನ ಹೆಡ್ ಪಾತ್ರದಲ್ಲಿ ಮಿಂಚಿದ್ದಾರೆ. "ಸಂಪತ್ ಅವರ ಕಮಿಟ್‌ಮೆಂಟು, ಅವರು ತೊಡಗಿಕೊಳ್ಳುವ ರೀತಿ ತುಂಬಾ ಖುಷಿಕೊಟ್ಟಿತು. ಅಂತ ನಟರು ನಮ್ಮೊಂದಿಗಿದ್ದರೆ ಸಿನಿಮಾದ ಮಜಾನೇ ಬೇರೆ" ಎಂಬುದು ನಿರ್ದೇಶಕ ಸೂರಿಯ ಅಭಿಪ್ರಾಯ.

ಪ್ರತಿಭಾವಂತ ಸಂಪತ್‌ರನ್ನು ಈ ಬಾರಿಯಾದರೂ ನಮ್ಮ ಗಾಂಧಿನಗರದವರು ಸೂಕ್ತವಾಗಿ ಬಳಸಿಕೊಳ್ಳಲಿ.... ●

▶▶ 5 ಯಾವುದಿಲ್ಲಿ ಅಂದರ್

ಅಲ್ಲ; ಪ್ರೇಕ್ಷಕರು ಕೂಡ ಈ ಚಿತ್ರ ನೋಡಲು ಮುಗಿಬೀಳುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಮತ್ತೆ ಎರಡು ದೊಡ್ಡ ಚಿತ್ರಗಳ ಬಿಡುಗಡೆ ಪ್ರೇಕ್ಷಕರ ಪಾಲಿಗೆ ನುಂಗಲಾರದ ತುತ್ತು.

ಹೀಗಾಗಿ ಈ ಎರಡು ಭಾರೀ ದೊಡ್ಡ ಚಿತ್ರಗಳ ಮುಖಾಮುಖಿಯನ್ನು ಉದ್ಯಮದ ಹಿರಿಯರು ತಪ್ಪಿಸಲು ಸಾಧ್ಯವಿರಲಿಲ್ಲವೇ? ಕನ್ನಡ ಚಿತ್ರಗಳಿಗೆ ಕನ್ನಡ ಚಿತ್ರಗಳೇ ಪೈಪೋಟಿಯಾಗುವುದು ಮತ್ತು ಶತ್ರುವಾಗುವುದು ಉದ್ಯಮದ ಬೆಳವಣಿಗೆಯ ದೃಷ್ಟಿಯಿಂದ ಖಂಡಿತವಾಗಿಯೂ ಆರೋಗ್ಯಕರವಲ್ಲ. ಇಂತಹ ಮಿನಿ ಸಮರಗಳು ಹಿಂದೆಯೂ ಕನ್ನಡ ಚಿತ್ರರಂಗದಲ್ಲಿ ಬೇಕಾದಷ್ಟು ಬಾರಿ ನಡೆದಿವೆ. ಆ ಸಂದರ್ಭಗಳಲ್ಲಿ ಇಬ್ಬರೂ ಗೆದ್ದ ಉದಾಹರಣೆಗಳು ಕಡಿಮೆ. ಮಿನಿ ಸಮರ ಎಂದಮೇಲೆ ಒಬ್ಬ ಗೆಲ್ಲಲೇಬೇಕು ಮತ್ತೊಬ್ಬ ಸೋಲಲೇಬೇಕಲ್ಲವೇ? ಅದರ ಬದಲಿಗೆ ಸ್ವಲ್ಪ ಮುತುವರ್ಜಿ ವಹಿಸಿದ್ದಲ್ಲಿ ಈ ಸಮರ ಆರಂಭವಾಗುವ ಮೊದಲೇ ಅದನ್ನು ಶಮನ ಮಾಡಬಹುದಿತ್ತು.

ಆದರೆ ಇಲ್ಲಿ ನಿರ್ಮಾಪಕ ರಾಘಣ್ಣ ಅಥವಾ ಕೊಬ್ಬರಿ ಮಂಜು ಅವರ ತಪ್ಪೇನೂ ಇಲ್ಲ. ಯಾಕೆಂದರೆ ಯಾವುದೇ ನಿರ್ಮಾಪಕ ಈ ದಸರಾ ಮತ್ತು ದೀಪಾವಳಿಯ ಹಬ್ಬಗಳ ರಜಾ ಸಂದರ್ಭದಲ್ಲಿ ತಮ್ಮ ಚಿತ್ರವನ್ನು ಬಿಡುಗಡೆ ಮಾಡಲು ಇಷ್ಟಪಡುವುದು ಸಹಜ. ಇಂತಹ ಸಂದರ್ಭಗಳಲ್ಲಿ ಬಿಡುಗಡೆಯಾದ ಚಿತ್ರಗಳು ಈ ಹಿಂದೆ ಬಾಕ್ಸಾಫೀಸ್‌ನಲ್ಲಿ ಗೆಲುವಿನ ಜಯಭೇರಿ ಬಾರಿಸಿದ ಎಕ್ಸಾಂಪಲ್‌ಗಳು ಬೇಕಾದಷ್ಟಿವೆ. ಹೀಗಾಗಿ ನಂಬಿಕೆ, ಮೂಢನಂಬಿಕೆ ಮತ್ತು ಸಂಪ್ರದಾಯಗಳನ್ನು ಹೆಚ್ಚೆಚ್ಚು ನಂಬುವ ಬಣ್ಣದ ಲೋಕದ ಜನರು ತಮ್ಮ ಚಿತ್ರಗಳನ್ನು ತಾವು ಅಂದುಕೊಂಡಂತೆ ಅದೇ ದಿನಾಂಕದಂದು ತೆರೆ ಕಾಣಿಸಲು ಹರಸಾಹಸ ಪಡುತ್ತಾರೆ. ಅದರಂತೆಯೇ ಈಗ 'ಜಾಕಿ' ಮತ್ತು 'ಕಿಚ್ಚ-ಹುಚ್ಚ' ಒಟ್ಟೊಟ್ಟಿಗೆ ಪ್ರೇಕ್ಷಕರ ಮುಂದೆ ಬಂದು ನಿಲ್ಲುತ್ತಿದ್ದಾರೆ. ●

Regd.No.KA/RNP/BGS/2036/2008-10 Posted at : GPO, Bangalore-01. R B P LANKESH, Kannada Weekly Price Rs. 12/- 27-10-2010



ತಣ್ಣಗೆ ಸಾಧಿಸಿಹೋದ ಪತ್ರಕರ್ತ ಪಿಜಿಎಸ್

ಕನ್ನಡ ಚಲನಚಿತ್ರ ಪತ್ರಿಕೋದ್ಯಮದ ಪಿತಾಮಹ ಎಂದೇ ಸಿನಿಮಾ ಪತ್ರಕರ್ತರಿಂದ ಕರೆಸಿಕೊಳ್ಳುತ್ತಿದ್ದ ಪಿ.ಜಿ.ಶ್ರೀನಿವಾಸ ಮೂರ್ತಿ ಮೊನ್ನೆ ನಿಧನ ಹೊಂದಿದರು. ಅವರಿಗೆ 80 ವರ್ಷ ವಯಸ್ಸಾಗಿತ್ತು. ಸಿನಿಮಾ ಪತ್ರಕರ್ತರು ಮತ್ತು ಕನ್ನಡ ಚಿತ್ರರಂಗದವರೆಲ್ಲರೂ ಅವರನ್ನು ಪ್ರೀತಿಯಿಂದ ಪಿಜಿಎಸ್ ಎಂದೇ ಕರೆಯುತ್ತಿದ್ದರು.

ಕನ್ನಡ ಚಿತ್ರರಂಗ ಬಾಲ್ಯಾವಸ್ಥೆಯಲ್ಲಿ ಮದ್ರಾಸಿನಲ್ಲಿ ಅಂಬೆಗಾಲಿಡುತ್ತಿದ್ದ ಸಂದರ್ಭದಲ್ಲಿ ಪಿಜಿಎಸ್ ಮದ್ರಾಸಿನಲ್ಲಿರುವ ಅಮೆರಿಕನ್ ಕಾನ್ಸುಲೇಟ್‌ನಲ್ಲಿ ಕೆಲಸ ಮಾಡುತ್ತಿದ್ದರು. ಅಲ್ಲಿ ಕೆಲಸದಲ್ಲಿದ್ದಾಗಲೇ ಅವರಿಗೆ ಚಿತ್ರರಂಗದ ದಿಗ್ಗಜರ ಒಡನಾಟ ಮತ್ತು ಸಂಪರ್ಕ ಬೆಳೆದಿತ್ತು. ಹೀಗಾಗಿ ಮದ್ರಾಸಿನಲ್ಲಿದ್ದೇ ಹಲವಾರು ಕನ್ನಡ ಪತ್ರಿಕೆಗಳಿಗೆ ಪಿಜಿಎಸ್ ಸಿನಿಮಾ ಬರಹಗಳನ್ನು ಬರೆದು ಕಳುಹಿಸುತ್ತಿದ್ದರು. ಆ ಕಾಲದಲ್ಲಿ ಮದ್ರಾಸಿನಲ್ಲಿ ಕನ್ನಡ ಪತ್ರಿಕೆಗಳಿಗೆ ವರದಿಗಾರರು ಇರಲಿಲ್ಲವಾದ್ದರಿಂದ ಚಿತ್ರೋದ್ಯಮ ಕುರಿತ ವರದಿಗಳಿಗಾಗಿ ಎಲ್ಲರೂ ಪಿಜಿಎಸ್ ಅವರನ್ನೇ ನಂಬಿದ್ದರು.

ಪಿಜಿಎಸ್ ಅವರು 'ವಿಜಯಚಿತ್ರ' ಮಾಸಪತ್ರಿಕೆಯಲ್ಲಿ ಡಾ.ರಾಜ್‌ಕುಮಾರ್ ಅವರ ಜೀವನ ಚರಿತ್ರೆ ಬರೆದದ್ದು ಅವರಿಗೆ ಅಪಾರವಾದ ಜನಪ್ರಿಯತೆಯನ್ನು ತಂದುಕೊಟ್ಟಿತ್ತು. ಆ ಕಾಲದಲ್ಲಿ ಕನ್ನಡ ನಟನಟಿಯರಿಗೆ ಬರೀ ಪ್ರಚಾರವನ್ನು ಮಾತ್ರವಲ್ಲ, ಆಶ್ರಯವನ್ನು ಕೂಡಾ ಪಿಜಿಎಸ್ ನೀಡುತ್ತಿದ್ದರು. ಡಾ.ರಾಜ್ ಸಮೇತ ಬಹುತೇಕ ಎಲ್ಲಾ ನಟನಟಿಯರನ್ನು ಪಿಜಿಎಸ್ ಅತ್ಯಂತ ಹತ್ತಿರದಿಂದ ಬಲ್ಲವರಾಗಿದ್ದರು. ಸಿನಿಮಾ ನಟನಟಿಯರೊಂದಿಗೆ ನಿಕಟವಾದ ಸ್ನೇಹ ಸಂಬಂಧವನ್ನು ಹೊಂದಿದ್ದರೂ ಸಹ ಅವರು ಯಾವತ್ತೂ ತಮ್ಮ ಬರವಣಿಗೆಯಲ್ಲಿ ರಾಜಿ ಮಾಡಿಕೊಂಡವರಲ್ಲ.

ಪಿಜಿಎಸ್ ಸಿನಿಮಾ ಪತ್ರಕರ್ತರಾಗಿ ಹೆಚ್ಚು ಪ್ರಸಿದ್ಧಿಗೆ ಬಂದಿದ್ದರೂ ಅವರು ಸಂಗೀತದ ಒಬ್ಬ ಉತ್ತಮ ವಿಮರ್ಶಕ ಕೂಡ ಆಗಿದ್ದರು ಎಂಬುದು ಹೆಚ್ಚಿನವರಿಗೆ ಗೊತ್ತಿಲ್ಲ. ಶಾಸ್ತ್ರೀಯ ಸಂಗೀತದ ಬಗ್ಗೆ ಅಪಾರವಾದ ಜ್ಞಾನ ಹೊಂದಿದ್ದ ಪಿಜಿಎಸ್ ಅವರ ವಿಮರ್ಶೆಗಳನ್ನು ಸಂಗೀತಗಾರರು ಅತ್ಯಂತ ಗೌರವದಿಂದ ಎದುರು ನೋಡುತ್ತಿದ್ದರು.

ತಾನು ನಂಬಿಕೊಂಡು ಬಂದಿದ್ದ ಸಿದ್ಧಾಂತ ಮತ್ತು ಬರವಣಿಗೆಯ ಬಗ್ಗೆ ಬದ್ಧತೆ ಉಳಿಸಿಕೊಂಡಿದ್ದ ಪಿಜಿಎಸ್ ಕಳೆದ ಹದಿನೆಂಟು ವರ್ಷಗಳಿಂದ ಅಂತರರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ತಪ್ಪದೆ ಹಾಜರಾಗುತ್ತಿದ್ದರು.

ಕನ್ನಡ ಚಿತ್ರರಂಗದ ಮತ್ತು ಕನ್ನಡ ಚಲನಚಿತ್ರ ಕುರಿತ ಪತ್ರಿಕೋದ್ಯಮದ ಬೆಳವಣಿಗೆಗೆ ಪಿಜಿಎಸ್ ಅವರ ಕೊಡುಗೆ ಅಪಾರವಾದುದು. ಬೆಂಗಳೂರು ಪ್ರೆಸ್‌ಕ್ಲಬ್, ಪತ್ರಕರ್ತರ ಯೂನಿಯನ್ ಸೇರಿದಂತೆ ಅನೇಕ ಸಂಸ್ಥೆಗಳ ಸಂಸ್ಥಾಪಕ ಸದಸ್ಯರಾಗಿದ್ದ ಪಿಜಿಎಸ್ ಎಲ್ಲರ ನಡುವೆ ಒಳ್ಳೆಯ ಹೆಸರನ್ನು ಪಡೆದಿದ್ದರು.

ಯಾವುದೇ ಪ್ರಶಸ್ತಿ ಪುರಸ್ಕಾರ ಗೌರವಕ್ಕೆ ಹಾತೊರೆಯದೆ ತನ್ನಷ್ಟಕ್ಕೆ ತಾನು ಸರಳವಾಗಿ, ಮೌನವಾಗಿ ಇರುತ್ತಿದ್ದ ಪಿಜಿಎಸ್ ಕನ್ನಡ ಚಿತ್ರೋದ್ಯಮದ ಇತಿಹಾಸಕಾರರಾಗಿದ್ದರು ಎಂದರೆ ತಪ್ಪಾಗಲಾರದು. ಆದರೆ ಚಿತ್ರೋದ್ಯಮದ ಆರಂಭದ ದಿನಗಳ ಬಗ್ಗೆ ಅವರಿಂದ ಬರೆಸಲು ಚೇಂಬರ್ ಆಗಲಿ ಉದ್ಯಮದವರಾಗಲಿ ಯಾರೂ ಮನಸು ಮಾಡಲೇ ಇಲ್ಲ. ಹೀಗಾಗಿ ಇಂದು ಪಿಜಿಎಸ್ ಅವರ ನಿಧನದೊಂದಿಗೆ ಚಿತ್ರೋದ್ಯಮದ ಅನೇಕ ಇತಿಹಾಸದ ಘಟನೆಗಳೂ ಕಣ್ಮರೆಯಾಗಿವೆ.


ಪಿಜಿಎಸ್ ಅವರ ನಿಧನಕ್ಕೆ 'ಪತ್ರಿಕೆ' ಸಂತಾಪ ವ್ಯಕ್ತಪಡಿಸುತ್ತದೆ ಮತ್ತು ಅವರ ಕುಟುಂಬದವರಿಗೆ ಅವರ ಅಗಲಿಕೆಯ ನೋವನ್ನು ಭರಿಸುವ ಶಕ್ತಿ ಸಿಗಲಿ ಎಂದು ಹಾರೈಸುತ್ತದೆ.

ಬೆಟ್ಟದ ಜೀವ ತಟ್ಟಿದ ಬಸಂತ್



ಬಸಂತ್‌ಕುಮಾರ್ ಪಾಟೀಲರು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷರಾಗಿ ಸಮರ್ಥವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೋ ಇಲ್ಲವೋ ಗೊತ್ತಿಲ್ಲ. ಆದರೆ ಬಸಂತ್‌ಕುಮಾರ್ ಪಾಟೀಲ್ ಕಳೆದ 2-3 ವರ್ಷಗಳಲ್ಲಿ ನಿರ್ಮಾಪಕರಾಗಿ ನಿರಂತರವಾಗಿ ಚಿತ್ರಗಳನ್ನು ಮಾಡುತ್ತಾ, ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಪ್ರಶಸ್ತಿಗಳನ್ನೂ ಪಡೆಯುತ್ತಾ ಸುದ್ದಿಯ ಕೇಂದ್ರ ಬಿಂದುವಾಗಿದ್ದಾರೆ.

ಇತ್ತೀಚೆಗೆ ಮೂರು ಚಿತ್ರಗಳನ್ನು ನಿರ್ದೇಶಿಸಲು ಗಿರೀಶ್ ಕಾಸರವಳ್ಳಿಗೆ ಅವಕಾಶ ಮಾಡಿಕೊಟ್ಟಿದ್ದರು ನಿರ್ಮಾಪಕ ಬಸಂತಕುಮಾರ್ ಪಾಟೀಲರು. ಆದರೀಗ ಎರಡು ಸಿನಿಮಾಗಳನ್ನು ನಿರ್ಮಿಸಲು ಮುಂದಾಗಿರುವ ಪಾಟೀಲರು ಅವುಗಳಿಗೆ ಬೇರೆ ನಿರ್ದೇಶಕರನ್ನು ಆಯ್ಕೆ ಮಾಡಿಕೊಂಡಿದ್ದಾರೆ.



ಪಾಟೀಲರಿಗೆ ನಿರ್ದೇಶಕ ಪಿ.ಶೇಷಾದ್ರಿ ಅವರು ಶಿವರಾಮ್ ಕಾರಂತರು ಬರೆದಿರುವ 'ಬೆಟ್ಟದ ಜೀವ' ಕಾದಂಬರಿಯನ್ನು ಸಿನಿಮಾಗ ತರಲು ಸಿದ್ಧರಾಗಿದ್ದಾರೆ. ಸುಮಾರು ಏಳು ದಶಕಗಳ ಹಿಂದಿನ ಈ ಕಥೆಗಾಗಿ ಶೇಷಾದ್ರಿ ತನ್ನ ಫೇವರಿಟ್ ನಟ ದತ್ತಣ್ಣರನ್ನು ಆಯ್ಕೆ ಮಾಡಿದ್ದಾರೆ.

ಪಾಟೀಲರು ಇದೇ ಮೊದಲ ಬಾರಿ ಮಕ್ಕಳ ಚಿತ್ರಕ್ಕೂ ಕೈಹಾಕಿದ್ದಾರೆ. ಇದರ ನಿರ್ದೇಶನದ ಜವಾಬ್ದಾರಿಯನ್ನು ರಾಮದಾಸ್ ನಾಯ್ಡು ಅವರಿಗೆ ನೀಡಿದ್ದಾರೆ. ರಾಮದಾಸ್ ನಾಯ್ಡು ಈ ಹಿಂದೆ ತಾನೇ ಚಿತ್ರ ನಿರ್ಮಿಸಿ ತಾನೇ ನಿರ್ದೇಶಿಸುತ್ತಿದ್ದರು. ಕೆಲವು ಪ್ರಶಸ್ತಿಗಳನ್ನು ಕೂಡಾ ಪಡೆದಿದ್ದರು. ಆದರೆ ಬೇರೆ ನಿರ್ಮಾಪಕರಿಗೆ ನಾಯ್ಡು ಚಿತ್ರವನ್ನು ನಿರ್ದೇಶಿಸುತ್ತಿರುವುದು ಇದೇ ಮೊದಲು. ಈ ಕಾರಣದಿಂದ ನಾಯ್ಡು ಪಾಲಿಗೆ ಈ ಮಕ್ಕಳ ಚಿತ್ರ ಮಕ್ಕಳಾಟವಾಗದೆ ಒಂದು ಪ್ರತಿಷ್ಠೆಯ ಚಿತ್ರವಾಗುವುದು ಖಂಡಿತ.

ಅದೇನೇ ಇರಲಿ, ಬಸಂತ್‌ಕುಮಾರ್ ಪಾಟೀಲರು ಕಲಾತ್ಮಕ ವಲಯದಲ್ಲಿ ಇಷ್ಟು ಸಕ್ರಿಯವಾಗಿ ಒಂದೇ ಸಮಯದಲ್ಲಿ ಎರಡೆರಡು ಚಿತ್ರಗಳನ್ನು ನಿರ್ಮಿಸುತ್ತಿರುವುದು ಸಂತೋಷದ ವಿಷಯ.



ಚೇಂಬರ್ ಮೇಲೆ ರಿಲಯನ್ಸ್ ದಾವೆ!

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಮತ್ತು ರಿಲಯನ್ಸ್ ಕಂಪೆನಿಯ ನಡುವಿನ ಕೋಳಿ ಜಗಳ ಒಂದು ಹೊಸ ತಿರುವು ಪಡೆದಿದೆ. ಕಳೆದ ಬಾರಿ ರಿಲಯನ್ಸ್ ಸಂಸ್ಥೆ ನಿರ್ಮಿಸಿದ್ದ 'ಕೈಟ್ಸ್' ಮತ್ತು 'ರಾವಣಾನ್' ಚಿತ್ರಗಳ ಬಿಡುಗಡೆ ಸಂದರ್ಭದಲ್ಲಿ ಮಂಡಳಿಯ ಪದಾಧಿಕಾರಿಗಳು ಅಧ್ಯಕ್ಷ ಬಸಂತಕುಮಾರ್ ಪಾಟೀಲ್ ನೇತೃತ್ವದಲ್ಲಿ ಥಿಯೇಟರ್‌ಗಳ ಮೇಲೆ ದಾಳಿ ಮಾಡಿ ಆ ಚಿತ್ರಗಳ ಪ್ರಿಂಟ್‌ಗಳನ್ನು ವಶಪಡಿಸಿಕೊಂಡಿದ್ದರು. ಚೇಂಬರ್‌ನ ನಿಯಮಗಳನ್ನು ಮೀರಿ ರಿಲಯನ್ಸ್ ಸಂಸ್ಥೆ ಹೆಚ್ಚು ಥಿಯೇಟರ್‌ಗಳಲ್ಲಿ ತನ್ನ ಚಿತ್ರಗಳನ್ನು ಬಿಡುಗಡೆ ಮಾಡಿದ್ದನ್ನು ಪ್ರಶ್ನಿಸಿ ಚೇಂಬರ್ ಈ ಕ್ರಮ ಕೈಗೊಂಡಿತ್ತು ಎಂಬುದು ಪಾಟೀಲರು ಅಂದು ನೀಡಿದ ಸಮಜಾಯಿಷಿಯ ಉತ್ತರವಾಗಿತ್ತು. ಅನಂತರ ರಿಲಯನ್ಸ್ ಸಂಸ್ಥೆಯವರು ಚೇಂಬರ್‌ನ ಈ ನೀತಿಯನ್ನು ಪ್ರಶ್ನಿಸಿ ಕೋರ್ಟ್‌ನಲ್ಲಿ ದಾವೆ ಹೂಡಿದ್ದರು. ಚೇಂಬರ್‌ಗೆ ಕೋರ್ಟ್ ಮಂಗಳಾರತಿ ಕೂಡಾ ಮಾಡಿತ್ತು.

ಅಲ್ಲಿಗೆ ಆ ಅಧ್ಯಾಯ ಮುಗಿದಿತ್ತು. ಈಗ ಹೊಸ ಅಧ್ಯಾಯ ಆರಂಭವಾಗಿದೆ. ಅದೇನೆಂದರೆ "ನಮ್ಮ ಚಿತ್ರಗಳ ಪ್ರದರ್ಶನಕ್ಕೆ ಅಡ್ಡಿ ಮಾಡಿದ್ದ ಚೇಂಬರ್ ಪದಾಧಿಕಾರಿಗಳು ಈಗ ರಜನೀಕಾಂತ್ ನಟಿಸಿರುವ 'ಯಂದಿರನ್' ಚಿತ್ರಕ್ಕೆ ಅಡ್ಡಿ ಮಾಡಿಲ್ಲ. ಈ ಚಿತ್ರದ ಹಂಚಿಕೆದಾರರು ಚೇಂಬರ್ ನಿಯಮಗಳನ್ನು ಗಾಳಿಗೆ ತೂರಿ ಹೆಚ್ಚು ಥಿಯೇಟರ್‌ಗಳಲ್ಲಿ ಬಿಡುಗಡೆ ಮಾಡಿಲ್ಲವೇ?" ಎಂದು ರಿಲಯನ್ಸ್ ಸಂಸ್ಥೆ ಪ್ರಶ್ನಿಸಿದೆ. ಅಂದರೆ "ನಮ್ಮ ಸಂಸ್ಥೆಯ ಮೇಲೆ ಮಾತ್ರ ದುರುದ್ದೇಶದಿಂದ ಚೇಂಬರ್ ಪದಾಧಿಕಾರಿಗಳು ಚಿತ್ರ ಪ್ರದರ್ಶನಕ್ಕೆ ಅಡ್ಡಿ ಮಾಡಿದ್ದರು" ಎಂದು ಆರೋಪಿಸಿ ರಿಲಯನ್ಸ್ ಸಂಸ್ಥೆ 25 ಕೋಟಿ ರೂ.ಗಳ ದಾವೆ ಹೂಡಿದೆ.

ಅಂತೂ ಬಸಂತ್‌ಕುಮಾರ್ ಪಾಟೀಲರು ಚೇಂಬರ್ ಅಧ್ಯಕ್ಷರಾಗಿ ಆಯ್ಕೆಯಾದ ನಂತರ ಕನ್ನಡ ಚಿತ್ರೋದ್ಯಮದ ಆಗುಹೋಗುಗಳು ಕೋರ್ಟ್ ಮೆಟ್ಟಿಲೇರುತ್ತಿರುವುದು ಒಂದು ಹೊಸ ಬೆಳವಣಿಗೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44